ಗುರುವಾರ, ಮೇ 25, 2023 | ₹ 7.00

● www.prajavani.net


prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಾಹೀದ್ ಮಾತು

ಮುಂಬೈಯಲ್ಲಿ ಬುಧವಾರ ನಡೆದ 'ಬ್ಲಡಿ ಡ್ಯಾಡಿ' ಸಿನಿಮಾದ ಟ್ರೈಲರ್ ಬಿಡುಗಡೆ ವೇಳೆ ಬಾಲಿವುಡ್ ನಟ ಶಾಹೀದ್ ಕಪೂರ್ ಮಾತನಾಡಿದರು



ಜೆಡಿಎಸ್ ಶಾಸಕಾಂಗ ಪಕ್ಷ ಎಚ್‌ಡಿಕೆ ನಾಯಕ

ಬೆಂಗಳೂರು: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾಗಿ ಎಚ್‌.ಡಿ. ಕುಮಾರಸ್ವಾಮಿ ಪುನರಾಯ್ಕೆಯಾಗಿದ್ದಾರೆ. ಹಿಂದಿನ ವಿಧಾನಸಭೆ ಅವಧಿಯಲ್ಲೂ ಅವರು ಶಾಸಕಾಂಗ ಪಕ್ಷದ ನಾಯಕರಾಗಿದ್ದರು. ಜೆಡಿಎಸ್‌ನ ನೂತನ ಶಾಸಕರ ಸಭೆ ವಿಧಾನಸೌಧದಲ್ಲಿ ಬುಧವಾರ ನಡೆಯಿತು. ಎಲ್ಲ ಶಾಸಕರೂ ಕುಮಾರಸ್ವಾಮಿ ಅವರನ್ನು ಅವಿರೋಧವಾಗಿ ಶಾಸಕಾಂಗ ಪಕ್ಷದ ನಾಯಕನನ್ನಾಗಿ ಆಯ್ಕೆ ಮಾಡಿದರು.

ಕುಮಾರಸ್ವಾಮಿ ಅವರ ಅಧ್ಯಕ್ಷತೆಯಲ್ಲೇ ಶಾಸಕಾಂಗ ಪಕ್ಷದ ಸಭೆಯನ್ನೂ ನಡೆಸಲಾಯಿತು. ಎಚ್‌.ಡಿ. ರೇವಣ್ಣ ಸೇರಿದಂತೆ ಜೆಡಿಎಸ್‌ನ ಎಲ್ಲ 19 ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.

ವಿಧಾನಮಂಡಲದಲ್ಲಿ ಜನಪರವಾಗಿ ಕಾರ್ಯನಿರ್ವಹಿಸಬೇಕು ಮತ್ತು ವಿಷಯಾಧಾರಿತವಾಗಿ ಹೋರಾಟ ನಡೆಸಬೇಕು ಎಂಬ ನಿರ್ಣಯವನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

ಕುಮಾರಸ್ವಾಮಿ ಮಾತನಾಡಿ, 'ಪಕ್ಷವು ಚುನಾವಣೆಯಲ್ಲಿ ಸೋತಿದೆ. ಈ ಸೋಲಿನಿಂದ ಎದೆಗುಂದುವ ಅಗತ್ಯ ಇಲ್ಲ. ಇನ್ನು ಕೆಚ್ಚೆದೆಯಿಂದ ಪಕ್ಷ ಕಟ್ಟಬೇಕು. ತಳಮಟ್ಟದಲ್ಲಿ ಸಂಘಟನೆ ಬಲಗೊಳಿಸಬೇಕಿದೆ. ಈ ನಿಟ್ಟಿನಲ್ಲಿ ಶಾಸಕರು, ಸ್ಪರ್ಧೆ ಮಾಡಿದ್ದ ಎಲ್ಲಾ ಅಭ್ಯರ್ಥಿಗಳು ಕೆಲಸ ಮಾಡಬೇಕು' ಎಂದರು.

ಅಶ್ವತ್ಥ ನಾರಾಯಣ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಮೈಸೂರು: 'ಟಿಪ್ಪುವನ್ನು ಉರಿಗೌಡ, ನಂಜೇಗೌಡರು ಮುಗಿಸಿದಂತೆ ಸಿದ್ದರಾಮಯ್ಯ ಅವರನ್ನು ಮುಗಿಸಬೇಕು ಎಂದು ಶಾಸಕ ಅಶ್ವತ್ಥ ನಾರಾಯಣ ಅವರು ನೀಡಿದ್ದ ಸಾರ್ವಜನಿಕ ಹೇಳಿಕೆಯ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಅವರು ನೀಡಿದ ಎರಡನೇ ದೂರಿನ ಮೇರೆಗೆ ಬುಧವಾರ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಅಶ್ವತ್ಥ ನಾರಾಯಣ ಈ ಹಿಂದೆ ಸಚಿವರಾಗಿದ್ದಾಗ ಮಂಡ್ಯದ ಸಾತನೂರಿನಲ್ಲಿ ನೀಡಿದ್ದ ಹೇಳಿಕೆಯ ವಿರುದ್ಧ ಮೈಸೂರಿನ ಕಾಂಗ್ರೆಸ್ ಮುಖಂಡರು ಫೆ.17ರಂದು ದೂರು ನೀಡಿದ್ದರೂ ಕ್ರಮ ಕೈಗೊಂಡಿರಲಿಲ್ಲ.

'ಮರುದೂರು ಸಲ್ಲಿಸಿ' ಎಂಬ ಇನ್‌ಸ್ಪೆಕ್ಟರ್ ಬಿ.ಶಿವಕುಮಾರ್ ಅವರ ಸೂಚನೆ ಮೇರೆಗೆ, ಲಕ್ಷ್ಮಣ ಎರಡನೇ ದೂರು ನೀಡಿದರು.

ಶಾಸಕ ಹರೀಶ್ ಪೂಂಜ ವಿರುದ್ಧ ಪ್ರಕರಣ (ಬೆಳ್ತಂಗಡಿ ವರದಿ): 'ಬಿಜೆಪಿ ಅಭಿನಂದನಾ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಶಾಸಕ ಹರೀಶ್ ಪೂಂಜ ಅವರು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ' ಎಂದು ಬೆಳ್ತಂಗಡಿ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ನಮಿತಾ ಪೂಜಾರಿ ದೂರು ನೀಡಿದ್ದು, ಬೆಳ್ತಂಗಡಿ ಠಾಣೆ ಪೊಲೀಸರು ಬುಧವಾರ ಪ್ರಕರಣ ದಾಖಲಿಸಿದ್ದಾರೆ.

ನಮಿತಾ ಪೂಜಾರಿ ಅವರು ನೀಡಿದ ದೂರು ಆಧರಿಸಿ ಬೆಳ್ತಂಗಡಿ ಠಾಣೆಯಲ್ಲಿ ಹರೀಶ್ ಪೂಂಜ ಮತ್ತು ಕಾರ್ಯಕ್ರಮ ಆಯೋಜಿಸಿದ್ದ ಬಿಜೆಪಿ ಮಂಡಲ ಅಧ್ಯಕ್ಷ ಜಯಂತ ಕೋಟ್ಯಾನ್ ವಿರುದ್ಧ ಐಪಿಸಿ ಕಲಂ 153 (ಗಲಭೆ ಉಂಟು ಮಾಡುವ ಉದ್ದೇಶದಿಂದ ಪ್ರಚೋದನೆ), 153ಬಿ, 504 (ಶಾಂತಿ ಭಂಗವನ್ನು ಪ್ರಚೋದಿಸುವ) ಮತ್ತು 505 (2) ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ವಿರೋಧ ಪಕ್ಷದ ನಾಯಕನಾದರೆ ಕಾಂಗ್ರೆಸ್ ಚಳಿ ಬಿಡಿಸುವೆ: ಯತ್ನಾಳ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): 'ನನಗೇನೂ ವಿರೋಧ ಪಕ್ಷದ ನಾಯಕನಾಗುವ ಹಂಬಲ ಇಲ್ಲ. ಒಂದು ವೇಳೆ ಆದರೆ ಅದರ ಮಜಾನೇ ಬೇರೆ. ಸರ್ಕಾರಕ್ಕೆ ಸರಿಯಾಗಿ ಉತ್ತರ ನೀಡುತ್ತೇನೆ. ಕಾಂಗ್ರೆಸ್‌ನವರಿಗೆ ತಕ್ಕ ಉತ್ತರ ಕೊಡಬಲ್ಲವನು ನಾನೊಬ್ಬನೇ...'

– ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬುಧವಾರ ಸುದ್ದಿಗಾರರಿಗೆ ವಿಜಯಪುರದ ಬಿಜೆಪಿ ಶಾಸಕ ಬಸವನಗೌಡ ಪಾಟೀಲ ಯತ್ನಾಳ ಹೇಳಿರುವ ಮಾತುಗಳಿವು.'ಕಾಂಗ್ರೆಸ್‌ನವರು ನನ್ನನ್ನು ಏನೂ ಮಾಡಲು ಸಾಧ್ಯವಿಲ್ಲ. ಯಾಕಂದ್ರೆ ನನ್ನ ಮೇಲೆ ಯಾವುದೇ ಆರೋಪವಿಲ್ಲ. ನನ್ನನ್ನು ಬ್ಲ್ಯಾಕ್‌ಮೇಲ್ ಮಾಡಲು ಅವರಿಂದ ಸಾಧ್ಯವಿಲ್ಲ' ಎಂದರು. 'ಯು.ಟಿ.ಖಾದರ್ ನೂತನ ಸಭಾಧ್ಯಕ್ಷರಾಗಿ ಆಯ್ಕೆ ಆಗಿರುವುದಕ್ಕೆ ಯಾವುದೇ ತಕರಾರು ಇಲ್ಲ. ಆದರೆ, ಅವರಿಗೆ ಕನ್ನಡವನ್ನೇ ಸ್ಪಷ್ಟವಾಗಿ ಮಾತನಾಡಲು ಬರಲ್ಲ ಎಂಬುವುದೇ ಬೇಸರದ ಸಂಗತಿ. ಕೆಲವು ಶಾಸಕರು ಇಂಗ್ಲಿಷ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಆಗ ಕನ್ನಡಪರ ಹೋರಾಟಗಾರರು ಎಲ್ಲಿಗೆ ಹೋಗಿದ್ದರು? ಬಹುಶಃ ಅವರೆಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮನೆಯಲ್ಲಿ ಮಲಗಿರಬೇಕು' ಎಂದು ಲೇವಡಿ ಮಾಡಿದರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಶಾಸಕರಿಗೆ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಪಾಠ

'20 ಲೋಕಸಭಾ ಕ್ಷೇತ್ರಗಳಲ್ಲಿ ಗೆಲ್ಲುವ ಗುರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸಕರು ಜನರ ಮನಸ್ಸು ಗೆಲ್ಲಬೇಕು. ವಿಧಾನಸಭೆ ಚುನಾವಣೆ ಯಶಸ್ಸಿನ ಯಾನ ಲೋಕಸಭೆ ಚುನಾವಣೆಯಲ್ಲೂ ಮುಂದುವರೆಯಬೇಕು. 20 ಲೋಕಸಭೆ ಕ್ಷೇತ್ರಗಳನ್ನು ಗೆಲ್ಲಲೇಬೇಕು' ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಸಿಎಲ್‌ಪಿ ನಾಯಕ ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ.

'ಜಿಲ್ಲಾ ಸಚಿವರಾಗುವವರು ಪ್ರತಿ ಜಿಲ್ಲೆಯಲ್ಲಿ ಹಾಗೂ ಶಾಸಕರು ವಿಧಾನಸಭೆ ಕ್ಷೇತ್ರದಲ್ಲಿ ಪಕ್ಷದ ಕಚೇರಿ ತೆರೆಯಲೇಬೇಕು. ನಮಗೆ ಪಕ್ಷದ ಕಚೇರಿಯೇ ದೇಗುಲ. ಎಲ್ಲರಿಗೂ ಅಧಿಕಾರ ಸಿಗದಿರಬಹುದು. ಆದರೆ, ಶ್ರಮಕ್ಕೆ ಗೌರವ ಸಿಕ್ಕಿಯೇ ಸಿಗುತ್ತದೆ. ಗೆಲುವಿಗೆ ಶ್ರಮಿಸಿದ ಕಾರ್ಯಕರ್ತರನ್ನು ಮರೆಯಬಾರದು. ರಾಜ್ಯದ ಜನರಿಗೆ ಸ್ವಚ್ಛ ಆಡಳಿತ ನೀಡಲು ಸಹಕರಿಸಬೇಕು. ಮೈಯೆಲ್ಲಾ ಕಣ್ಣಾಗಿ ಕೆಲಸ ಮಾಡಬೇಕು' ಎಂದು ಶಾಸಕರಿಗೆ ಶಿವಕುಮಾರ್ ಕಿವಿಮಾತು ಹೇಳಿದರು.



ಸಿಎಲ್‌ಪಿ ಸಭೆಯಲ್ಲಿ ಜಿ. ಪರಮೇಶ್ವರ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಮೊದಲಾದವರು ಇದ್ದರು

> **ಬಿಜೆಪಿಯವರ ಸುಳ್ಳು ಆರೋಪಗಳನ್ನು ಎದುರಿಸಲು ಹೆಚ್ಚು ಕ್ರಿಯಾಶೀಲತೆಯಿಂದ, ಕಡ್ಡಾಯವಾಗಿ ಅಧಿವೇಶನದಲ್ಲಿ ಭಾಗವಹಿಸುವಂತೆ ಶಾಸಕರಿಗೆ ಸಲಹೆ ನೀಡಿದ್ದೇವೆ**
>
> **ಸಿದ್ದರಾಮಯ್ಯ,** ಸಿಎಲ್‌ಪಿ ನಾಯಕ

> **ಅಧಿಕಾರಿಗಳು, ಗುತ್ತಿಗೆದಾರರ ಹಿಡಿತದಲ್ಲಿ ಸಿಲುಕಿಕೊಳ್ಳಬೇಡಿ ಎಂದು ಶಾಸಕರಿಗೆ ಹೇಳಿದ್ದೇವೆ. ಮತ್ತೆ ಸಭೆ ಕರೆದು ಮೊದಲ ಬಾರಿ ಶಾಸಕರಾದವರಿಗೆ ತರಬೇತಿ ನೀಡುತ್ತೇವೆ**
>
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

2024ರಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆ ಗಮನದಲ್ಲಿರಿಸಕೊಂಡು ಜನಪರವಾಗಿ ಕೆಲಸ ಮಾಡುವಂತೆ ಸಲಹೆ ನೀಡಿದ ಸಿದ್ದರಾಮಯ್ಯ, 'ಅನುದಾನ ಬಿಡುಗಡೆಯಲ್ಲಿ ಕೇಂದ್ರದಿಂದ ತಾರತಮ್ಯ ಆಗಿದೆ. ಕೋವಿಡ್, ಪ್ರವಾಹ ಸಂದರ್ಭದಲ್ಲಿಯೂ ಕೇಂದ್ರ ನೆರವಿಗೆ ಬಂದಿಲ್ಲ. ಕೇಂದ್ರದ ಈ ತಾರತಮ್ಯವನ್ನು ಜನರ ಮುಂದೆ ತೆಗೆದುಕೊಂಡು ಹೋಗೋಣ' ಎಂದರು.

ಅಳಲು ತೋಡಿಕೊಂಡ ರೂಪಕಲಾ: 'ಚುನಾವಣೆ ಸಮಯದಲ್ಲಿ ಪೊಲೀಸರು ಕಿರುಕುಳ ನೀಡಿದ್ದಾರೆ' ಎಂದು ಶಿವಕುಮಾರ್ ಬಳಿ ಕೆಜಿಎಫ್ ಶಾಸಕಿ ರೂಪಕಲಾ ಶಶಿಧರ್ ಅಳಲು ತೋಡಿಕೊಂಡರು. 'ನನಗೆ ಮತ್ತು ನಮ್ಮ ಕಾರ್ಯಕರ್ತರಿಗೆ ಪೊಲೀಸರು ಕಿರುಕುಳ ನೀಡಿದ್ದಾರೆ. ಸುಳ್ಳು ಪ್ರಕರಣ ದಾಖಲಿಸಿ ಮಾನಸಿಕ ಹಿಂಸೆ ನೀಡಿದ್ದಾರೆ. ಬಿಜೆಪಿ ಸರ್ಕಾರದ ಕೈಗೊಂಬೆಯಾಗಿ ಪೊಲೀಸರು ವರ್ತಿಸಿದ್ದಾರೆ' ಎಂದು ದೂರಿದರು.

ಸಭೆ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಡಿ.ಕೆ. ಶಿವಕುಮಾರ್, 'ಪೊಲೀಸ್ ಇಲಾಖೆಯ ಕೇಸರೀಕರಣ ಮತ್ತು ಮತೀಯ ಗೂಂಡಾಗಿರಿಗೆ ಮಾಜಿ ಮುಖ್ಯಮಂತ್ರಿ ಬೆಂಬಲ ನೀಡಿದ್ದರು. ಯಾರೊಬ್ಬರೂ ಕಾನೂನನ್ನು ಕೈಗೆತ್ತಿಕೊಳ್ಳಲು ನಾವು ಅವಕಾಶ ನೀಡುವುದಿಲ್ಲ'ಎಂದರು. 'ಪೊಲೀಸ್ ಇಲಾಖೆಯನ್ನು ಕಾಂಗ್ರೆಸ್ಸೀಕರಣ ಮಾಡಲು ಹೊರಟಿದ್ದಾರೆ' ಎಂಬ ಆರಗ ಜ್ಞಾನೇಂದ್ರ ಹೇಳಿಕೆ ಬಗ್ಗೆ ಕೇಳಿದಾಗ, 'ಅವರ ಆಡಳಿತ ನೋಡಿ, ಜನ ಈಗಾಗಲೇ ಉತ್ತರ ನೀಡಿದ್ದಾರೆ' ಎಂದು ತಿರುಗೇಟು ನೀಡಿದರು.

ಪಾಟೀಲರನ್ನು ಗುರಾಯಿಸಿದ ಸುರೇಶ್

ಬೆಂಗಳೂರು: 'ಅಧಿಕಾರ ಹಂಚಿಕೆ' ಕುರಿತು ಸಚಿವ ಎಂ.ಬಿ. ಪಾಟೀಲ ನೀಡಿದ ಹೇಳಿಕೆ ಸಂಸದ ಡಿ.ಕೆ. ಸುರೇಶ್ ಮತ್ತು ಪಾಟೀಲರ ನಡುವೆ ವೈಯಕ್ತಿಕ ಜಗಳದ ಹಂತ ತಲುಪಿದೆ.

ವಿಧಾನಸೌಧದಲ್ಲಿ ಬುಧವಾರ ಮುಖಾಮುಖಿಯಾದ ವೇಳೆ ಪಾಟೀಲರನ್ನು ಗುರಾಯಿಸಿ ನೋಡಿದ ಸುರೇಶ್, 'ಮಾತನಾಡುವಾಗ ಎಚ್ಚರದಿಂದಿರಿ' ಎಂದು ಎಚ್ಚರಿಕೆ ನೀಡಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

'ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿಯಾಗಿರಲಿದ್ದಾರೆ' ಎಂದು ಸಚಿವ ಎಂ.ಬಿ. ಪಾಟೀಲ ಅವರು ಸೋಮವಾರ ನೀಡಿದ್ದ ಹೇಳಿಕೆ ಕಾಂಗ್ರೆಸ್‌ನಲ್ಲಿ ಕಿಡಿ ಹೊತ್ತಿಸಿತು. 'ನಾನು ಎಂ.ಬಿ. ಪಾಟೀಲರಿಗೆ ತೀಕ್ಷ್ಣವಾದ ಎಚ್ಚರಿಕೆ ಕೊಡಬಲ್ಲೆ. ಆದರೆ, ಈಗ ಅದು ಬೇಡ' ಎಂದು ಸುರೇಶ್ ಹೇಳಿದ್ದರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಗೆ ಬುಧವಾರ ಬಂದಿದ್ದ ಇಬ್ಬರು ನಾಯಕರು, ವಿಧಾನಸೌಧದ ಪ್ರವೇಶದ್ವಾರದ ಬಳಿ ಎದುರುಬದುರಾಗಿದ್ದರು. ಈ ವೇಳೆ ಸುರೇಶ್ ಅವರು ಪಾಟೀಲರನ್ನು ಕೆಣಕಿದ್ದಾರೆ. ಸ್ಥಳದಲ್ಲಿದ್ದ ಶಾಸಕರ ಆಪ್ತ ಸಹಾಯಕರು, ಗನ್‌ಮ್ಯಾನ್‌ಗಳು ಗಾಬರಿಯಾಗಿದ್ದಾರೆ.

'ಬನ್ನಿ ಚೇಂಬರ್‌ಗೆ ಹೋಗೋಣ' ಎಂದು ಪಾಟೀಲರು ಸುರೇಶ್ ಕೈ ಹಿಡಿದು ಕರೆದುಕೊಂಡು ಹೋಗಲು ಯತ್ನಿಸಿದರು. ಆದರೆ, ಸುರೇಶ್ ಮತ್ತೆ ಗುರಾಯಿಸಿದ್ದಾರೆ. ನಂತರ ಪಾಟೀಲರು, 'ಆಮೇಲೆ ಮಾತನಾಡುವೆ' ಎಂದು ಅಲ್ಲಿಂದ ತೆರಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಸುರೇಶ್, 'ಸಿದ್ದರಾಮಯ್ಯ ಈ ಹಿಂದೆ ಐದು ವರ್ಷ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಈಗ ಮತ್ತೆ ಮುಖ್ಯಮಂತ್ರಿ ಆಗಿದ್ದಾರೆ. ಮತ್ತೆ ಐದು ವರ್ಷ ಮುಖ್ಯಮಂತ್ರಿ ಆಗಿರಲಿ. ಬೇಡ ಅಂದವರು ಯಾರು? ಎಂ.ಬಿ. ಪಾಟೀಲ ಕೂಡ ಮುಖ್ಯಮಂತ್ರಿ ಆಗಲಿ ಬಿಡಿ' ಎಂದರು.

ಪಾಟೀಲರಿಗೆ ಎಚ್ಚರಿಕೆ ನೀಡಿದ ಬಗ್ಗೆ ಕೇಳಿದಾಗ, 'ನಾನು ಯಾಕೆ ಅವರನ್ನು ಹೆದರಿಸಲಿ. ನಾನೇನು ಹಾಗೆ ಅಂದಿಲ್ಲ' ಎಂದರು.

'ದಿ ಕೇರಳ ಸ್ಟೋರಿ' ಸಿನಿಮಾ ವೀಕ್ಷಣೆಗೆ ಅರ್ಧ ದಿನ ರಜೆ ನೀಡಿದ್ದ ವಿವಾದ

ಇಳಕಲ್: ಕಾಲೇಜು ಪ್ರಾಚಾರ್ಯರ ಕ್ಷಮೆ

ಪ್ರಜಾವಾಣಿ ವಾರ್ತೆ

ಇಳಕಲ್(ಬಾಗಲಕೋಟೆ ಜಿಲ್ಲೆ): ನಗರದ ವಿಜಯ ಮಹಾಂತೇಶ ಆಯುರ್ವೇದ ವೈದ್ಯಕೀಯ ಮಹಾ ವಿದ್ಯಾಲಯದ ಪ್ರಾಚಾರ್ಯರು ಮೇ 24ರಂದು ಕಾಲೇಜಿಗೆ ಅರ್ಧದಿನ ರಜೆ ಕೊಟ್ಟು 'ದಿ ಕೇರಳ ಸ್ಟೋರಿ' ಸಿನಿಮಾ ವೀಕ್ಷಣೆಗೆ ಸೂಚಿಸಿದ್ದಕ್ಕೆ ಆಕ್ಷೇಪ ವ್ಯಕ್ತವಾಗುತ್ತಿದ್ದಂತೆಯೇ, ರಜೆ ರದ್ದುಪಡಿಸಿ ಕ್ಷಮಾಪಣೆ ಕೇಳಿದ್ದಾರೆ.

'ನಗರದ ಶ್ರೀನಿವಾಸ ಚಿತ್ರ ಮಂದಿರದಲ್ಲಿ ಬುಧವಾರ ಮಧ್ಯಾಹ್ನ 12ರಿಂದ 3ರವರೆಗೆ 'ದಿ ಕೇರಳ ಸ್ಟೋರಿ' ಚಲನಚಿತ್ರದ ಉಚಿತ ಪ್ರದರ್ಶನವಿದ್ದು, ವಿದ್ಯಾರ್ಥಿನಿಯರು ಹೋಗಿ ವೀಕ್ಷಿಸಬೇಕು. ಅದಕ್ಕಾಗಿ ಮಧ್ಯಾಹ್ನದ ಅವಧಿಯ ತರಗತಿಗಳನ್ನು ರದ್ದುಪಡಿಸಲಾಗಿದೆ ಎಂದು ಪ್ರಾಚಾರ್ಯ ಡಾ.ಕೆ.ಸಿ. ದಾಸ್ ನೀಡಿದ್ದ ಸೂಚನಾ ಪತ್ರವವನ್ನು ಕಾಲೇಜಿನ ಫಲಕದಲ್ಲಿ ಮಂಗಳವಾರ ಅಂಟಿಸಲಾಗಿತ್ತು.

ಸ್ಟುಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಶನ್ ಆಫ್ ಇಂಡಿಯಾದ (ಎಸ್‌ಐಒ) ಇಳಕಲ್ ಘಟಕದ ಅಧ್ಯಕ್ಷ ಆಸೀಫ್ ಹುಣಚಗಿ ಕಾಲೇಜಿಗೆ ತೆರಳಿ ಪ್ರಾಚಾರ್ಯರ ಕ್ರಮಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಚಲನಚಿತ್ರವು ವಾಸ್ತವಿಕ ಸಂಗತಿಗಳಿಗೆ ವ್ಯತಿರಿಕ್ತವಾಗಿರುವ ಬಗ್ಗೆ ಆಕ್ಷೇಪ, ದೂರುಗಳಿವೆ. ಚಿತ್ರವು ಸಂಪೂರ್ಣವಾಗಿ ಒಂದು ನಿರ್ದಿಷ್ಟ ಸಮುದಾಯದ ಬಗ್ಗೆ ಸುಳ್ಳು ಮಾಹಿತಿ ನೀಡುವ ಹಾಗೂ ದ್ವೇಷ ಹರಡುವ ದುರುದ್ದೇಶದಿಂದ ಕೂಡಿದೆ. ಸ್ವತಃ ಕೇರಳ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ನಿಷೇಧಿಸಲಾಗಿದೆ. ಚಿತ್ರ ನೋಡಬೇಕು ಎಂಬ ಸೂಚನೆ ಹಿಂಪಡೆಯಬೇಕು ಎಂದು ಆಗ್ರಹಿಸಿದರು. ಪ್ರದರ್ಶನ ವೀಕ್ಷಣೆ ಕಡ್ಡಾಯಗೊಳಿಸಿರುವ ಬಗ್ಗೆ ಶಾಸಕ ವಿಜಯಾನಂದ ಕಾಶಪ್ಪನವರ, ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್ ಅವರ ಗಮನಕ್ಕೂ ತಂದರು.

ಆಕ್ಷೇಪ ವ್ಯಕ್ತವಾಗುತ್ತಿದ್ದಂತೆಯೇ ಪ್ರಾಚಾರ್ಯರು ನೋಟಿಸ್ ಹಿಂಪಡೆದಿದ್ದಾರೆ. ಈ ಕುರಿತು ತಹಶೀಲ್ದಾರ್‌ಗೆ ಪತ್ರ ಬರೆದಿರುವ ಪ್ರಾಚಾರ್ಯ ದಾಸ್, 'ಚಲನಚಿತ್ರ ವೀಕ್ಷಿಸುವಂತೆ ವಿದ್ಯಾರ್ಥಿನಿಯರಿಗೆ ನೀಡಿದ್ದ ಸೂಚನೆ ಹಿಂಪಡೆದಿದ್ದೇನೆ. ತರಗತಿಗಳು ಎಂದಿನಂತೆ ನಡೆಯುತ್ತವೆ. ಚಲನಚಿತ್ರ ನೋಡುವಂತೆ ತಿಳಿಸಿದ್ದಕ್ಕೆ ಹಾಗೂ ತರಗತಿಗಳನ್ನು ರದ್ದುಪಡಿಸಿದ್ದಕ್ಕೆ ಕ್ಷಮೆಯಾಚಿಸುತ್ತೇನೆ' ಎಂದು ತಿಳಿಸಿದ್ದಾರೆ.

'ಇಂತಹ ವಿಷಯಗಳಲ್ಲಿ ಶಿಕ್ಷಣ ಸಂಸ್ಥೆಗಳು ತಟಸ್ಥವಾಗಿರಬೇಕು. ಪ್ರಾಚಾರ್ಯರು ಕ್ಷಮೆ ಕೋರಿ ಪತ್ರ ಬರೆದಿದ್ದಾರೆ. ಜತೆಗೆ, ಆದೇಶವನ್ನು ಹಿಂಪಡೆದಿದ್ದಾರೆ' ಎಂದು ತಹಶೀಲ್ದಾರ್ ಬಸವರಾಜ ಮೆಳವಂಕಿ 'ಪ್ರಜಾವಾಣಿ'ಗೆ ತಿಳಿಸಿದರು.

ಕ್ರಮಕ್ಕೆ ವಿವಿಧ ಸಂಘಟನೆಗಳ ಒತ್ತಾಯ

ಬೆಂಗಳೂರು: 'ದಿ ಕೇರಳ ಸ್ಟೋರಿ' ಸಿನಿಮಾ ವೀಕ್ಷಿಸಲು ಇಳಕಲ್‌ನ ವಿಜಯ ಮಹಾಂತೇಶ ಆಯುರ್ವೇದ ವೈದ್ಯಕೀಯ ಮಹಾ ವಿದ್ಯಾಲಯದ ಆಡಳಿತ ಮಂಡಳಿಯು ವಿದ್ಯಾರ್ಥಿಗಳಿಗೆ ಅರ್ಧ ದಿನದ ರಜೆ ನೀಡಿರುವುದನ್ನು ಜಾಗೃತ ನಾಗರಿಕರು ಕರ್ನಾಟಕ ಹಾಗೂ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಗಳು ಖಂಡಿಸಿವೆ.

'ಈ ಚಿತ್ರ ಕಪೋಲಕಲ್ಪಿತ ಮಾತ್ರವಲ್ಲದೇ, ದೇಶದ ಸೌಹಾರ್ದ ಪರಂಪರೆಯನ್ನು ಹಾಳು ಮಾಡುವ ವ್ಯವಸ್ಥಿತ ಸಂಚು ಎಂಬುದು ಜಗಜ್ಜಾಹೀರಾಗಿದೆ. ಹೀಗಿರುವಾಗಲೂ ಈ ಚಿತ್ರವನ್ನು ಕಡ್ಡಾಯವಾಗಿ ವಿದ್ಯಾರ್ಥಿಗಳು ವೀಕ್ಷಿಸುವಂತೆ ಮಾಡುತ್ತಿರುವ ಉದ್ದೇಶವಾದರೂ ಏನು' ಎಂದು ಪ್ರಶ್ನಿಸಿದ್ದಾರೆ. 'ಸರ್ಕಾರ ಈ ಬಗ್ಗೆ ತನಿಖೆ ನಡೆಸಿ ಶಿಕ್ಷಣ ಸಂಸ್ಥೆ ಮತ್ತು ಕಾಲೇಜಿನ ಪ್ರಾಚಾರ್ಯರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು' ಎಂದು 'ಜಾಗೃತ ನಾಗರಿಕರು ಕರ್ನಾಟಕ' ಒತ್ತಾಯಿಸಿದೆ.

'ಸರ್ವ ಜನಾಂಗದ ಶಾಂತಿಯ ತೋಟವಾಗಿರುವ ಕರ್ನಾಟಕದಲ್ಲಿ ಕೋಮು ದ್ವೇಷ ಬಿತ್ತುವ ಯಾವುದೇ ಚಟುವಟಿಕೆಗಳಿಗೂ ಅವಕಾಶ ನೀಡಬಾರದು' ಎಂದು 'ಜಾಗೃತ ನಾಗರಿಕರು ಕರ್ನಾಟಕ'ದ ಕೆ. ಮರುಳಸಿದ್ದಪ್ಪ, ಜಿ. ರಾಮಕೃಷ್ಣ, ಎಸ್‌.ಜಿ. ಸಿದ್ದರಾಮಯ್ಯ, ಮೂಡ್ನಾಕೋಡು ಚಿನ್ನಸ್ವಾಮಿ, ವಿಜಯಾ, ರಾಜೇಂದ್ರ ಚೆನ್ನಿ, ವಿಮಲಾ. ಕೆ.ಎಸ್., ಬಂಜಗೆರೆ ಜಯಪ್ರಕಾಶ್, ಮೀನಾಕ್ಷಿ ಬಾಳಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬರೆದಿರುವ ಪತ್ರದಲ್ಲಿ ಒತ್ತಾಯಿಸಿದ್ದಾರೆ.


ಒಳ ಮೀಸಲು: ಆಕ್ಷೇಪಣೆಗೆ ಅವಕಾಶ ಕೋರಿಕೆ

ಬೆಂಗಳೂರು: 'ಪರಿಶಿಷ್ಟ ಜಾತಿಗಳನ್ನು (ಎಸ್‌ಸಿ) ನಾಲ್ಕು ಗುಂಪುಗಳಾಗಿ ವರ್ಗೀಕರಿಸಿ, ಒಳ ಮೀಸಲಾತಿ ಹಂಚಿಕೆ ಮಾಡಿರುವ ನಿಕಟಪೂರ್ವ ಸರ್ಕಾರದ ಆದೇಶವನ್ನು ರದ್ದುಪಡಿಸಬೇಕು ಎಂದು ಕೋರಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಸಮಯಾವಕಾಶ ನೀಡಬೇಕು' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮನವಿ ಮಾಡಿದೆ.

ಈ ಸಂಬಂಧ, 'ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ'ದ ಅಧ್ಯಕ್ಷ ಎಚ್‌.ರವಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲ ಎ. ವೆಂಕಟ ಸತ್ಯನಾರಾಯಣ ಅವರು, ಆಕ್ಷೇಪಣೆ ಸಲ್ಲಿಸಲು ಇನ್ನೂ ಎರಡು ವಾರಗಳ ಕಾಲಾವಕಾಶ ನೀಡುವಂತೆ ನ್ಯಾಯಪೀಠಕ್ಕೆ ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ವಿಚಾರಣೆಯನ್ನು ಎರಡು ವಾರಗಳ ಮುಂದೂಡಿತು.

ಪ್ರಜಾವಾಣಿ@75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಸಂಸತ್ ಭವನ ಯಾರು ಉದ್ಘಾಟಿಸಬೇಕು?

ಬೆಂಗಳೂರಿನಲ್ಲಿ ಆಸ್ಟ್ರೇಲಿಯಾ ಕಾನ್ಸುಲೇಟ್ 11
‘ಸುಪ್ರೀಂ’ ಮೇಲೆ ಕೇಂದ್ರಕ್ಕೆ ನಂಬಿಕೆ ಇಲ್ಲ: ಕೇಜ್ರಿವಾಲ್ ಕಿಡಿ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,773	18,285	₹62,603 (ಬೆಂಗಳೂರು)	₹73,200 (ಬೆಂಗಳೂರು)	82.70

ಸಂಸತ್‌ನ ನೂತನ ಭವನ ಉದ್ಘಾಟನೆ • ಪ್ರಧಾನಿ ನಡೆ ವಿರುದ್ಧ ಆಕ್ರೋಶ

ಅಸಮಾಧಾನ ವಿಸ್ತಾರ ಕಾರ್ಯಕ್ರಮ ಬಹಿಷ್ಕಾರ

ನವದೆಹಲಿ (ಪ್ರಜಾವಾಣಿ ವಾರ್ತೆ/ ಪಿಟಿಐ): ಕಾಂಗ್ರೆಸ್, ಟಿಎಂಸಿ ಹಾಗೂ ಎಡಪಕ್ಷಗಳು ಸೇರಿದಂತೆ ಕನಿಷ್ಠ 20 ವಿರೋಧ ಪಕ್ಷಗಳು ಸಂಸತ್‌ನ ನೂತನ ಭವನ ಉದ್ಘಾಟನಾ ಕಾರ್ಯಕ್ರಮವನ್ನು ಬಹಿಷ್ಕರಿಸುವುದಾಗಿ ಬುಧವಾರ ಘೋಷಿಸಿದ್ದು, ಈ ಮೂಲಕ ಒಗ್ಗಟ್ಟು ಪ್ರದರ್ಶಿಸಿವೆ.

‘ಪ್ರಜಾಪ್ರಭುತ್ವದ ಆತ್ಮವನ್ನೇ ನಾಶ ಮಾಡಿದ ಮೇಲೆ ಸಂಸತ್‌ನ ನೂತನ ಭವನವನ್ನು ಉದ್ಘಾಟಿಸುವುದರಲ್ಲಿ ಯಾವುದೇ ಅರ್ಥವಿಲ್ಲ’ ಎಂದು ವಿರೋಧ ಪಕ್ಷಗಳು ಬಿಡುಗಡೆ ಮಾಡಿರುವ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕಾರ್ಯಕ್ರಮಕ್ಕೆ ಹಾಜರಾಗುವುದಾಗಿ ಬಿಜೆಡಿ ತಿಳಿಸಿದೆ. ಕಾರ್ಯಕ್ರಮ ಬಹಿಷ್ಕರಿಸುವ ಕುರಿತು ಗುರುವಾರ ನಿರ್ಧಾರ ಕೈಗೊಳ್ಳುವುದಾಗಿ ಬಿಆರ್‌ಎಸ್ ಪಕ್ಷ ಹೇಳಿದೆ. ಹೀಗಾಗಿ, ಉದ್ಘಾಟನಾ ಸಮಾರಂಭದಿಂದ ದೂರ ಉಳಿಯಲಿರುವ ವಿರೋಧ ಪಕ್ಷಗಳ ಸಂಖ್ಯೆ ಹೆಚ್ಚುವ ಸಾಧ್ಯತೆಯೂ ಇದೆ.

7ನೇ ಪುಟ ನೋಡಿ

‘ಸೆಂಗೋಲ್’ ವೈಶಿಷ್ಟ್ಯ



- ‘ಸೆಂಗೋಲ್’ ಎಂಬುದು ತಮಿಳು ಪದ ‘ಸೆಮ್ಮೈ’ಯಿಂದ ಬಂದಿದ್ದು, ‘ನ್ಯಾಯಪರತೆ’ ಅಥವಾ ‘ಧರ್ಮನಿಷ್ಠತೆ’ ಎಂದರ್ಥ
- ಲೋಕಸಭಾ ಸ್ಪೀಕರ್ ಅವರ ಪೀಠದ ಸಮೀಪ ಈ ‘ಸೆಂಗೋಲ್’ ಅನ್ನು ಪ್ರತಿಷ್ಠಾಪಿಸಲಾಗುತ್ತದೆ
- ಇದು ಅಧಿಕಾರ ಹಸ್ತಾಂತರವನ್ನು ಸೂಚಿಸುತ್ತದೆ
- ಐದು ಅಡಿ ಎತ್ತರವಿದ್ದು, ತುದಿಯಲ್ಲಿ ಚಿಕ್ಕ ನಂದಿ ವಿಗ್ರಹ ಇದೆ. ವಿವಿಧ ಆಭರಣಗಳಿಂದ ಅಲಂಕೃತ
- ಚೆನ್ನೈನ ವುಮ್ಮಿಡಿ ಬಂಗಾರು ಚೆಟ್ಟಿ ಮತ್ತು ಮಕ್ಕಳು ತಯಾರಿಸಿದ್ದಾರೆ
- ಅಂಬಲವನ ದೇಶಿಕಸ್ವಾಮಿ ಅನುಮೋದಿಸಿದ್ದರು
- 1947ರ ಆಗಸ್ಟ್‌ನಲ್ಲಿ ಇದರ ಬೆಲೆ ₹ **15,000** ಇತ್ತು
- ವಿಶೇಷ ವಿಮಾನದಲ್ಲಿ ದೆಹಲಿಗೆ ತರಲಾಗಿದ್ದ ಈ ಸೆಂಗೋಲ್ ಅನ್ನು ತಿರುವಾವದುತ್ತುರೈ ಅಧೀನಮ್‌ನ ಕುಮಾರಸ್ವಾಮಿ ತಂಬಿರನ್ ಅವರು ಜವಾಹರಲಾಲ್ ನೆಹರೂ ಅವರಿಗೆ ನೀಡಿದ್ದರು

‘ಅಹಂಕಾರದ ಇಟ್ಟಿಗೆಗಳಿಂದ ಸಂಸತ್ ಭವನ ನಿರ್ಮಿಸಿಲ್ಲ’

ನವದೆಹಲಿ (ಪಿಟಿಐ): ‘ಸಂಸತ್ ಭವನವನ್ನು ಸಾಂವಿಧಾನಿಕ ಮೌಲ್ಯಗಳಿಂದ ನಿರ್ಮಿಸಲಾಗಿದೆಯೇ ಹೊರತು ‘ಅಹಂಕಾರವೆಂಬ ಇಟ್ಟಿಗೆ’ಗಳಿಂದ ಅಲ್ಲ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ವಾಗ್ದಾಳಿ ನಡೆಸಿದ್ದಾರೆ. 7ನೇಪುಟ ನೋಡಿ

ಸಮಾರಂಭಕ್ಕೆ ಎಲ್ಲ ರಾಜಕೀಯ ಪಕ್ಷಗಳಿಗೆ ಆಹ್ವಾನ ನೀಡಲಾಗಿದೆ. ಸಮಾರಂಭಕ್ಕೆ ಹಾಜರಾಗುವ ಕುರಿತು ವಿರೋಧ ಪಕ್ಷಗಳು ತಮ್ಮ ವಿವೇಚನೆಯಂತೆ ನಿರ್ಧಾರ ಕೈಗೊಳ್ಳುತ್ತವೆ. ಉದ್ಘಾಟನೆ ದಿನ ಸಂಸತ್‌ನಲ್ಲಿ ‘ಸೆಂಗೋಲ್’ ಪ್ರತಿಷ್ಠಾಪಿಸುವ ವಿಚಾರದೊಂದಿಗೆ ರಾಜಕೀಯ ತಳುಕು ಹಾಕುವುದು ಸರಿಯಲ್ಲ.
ಅಮಿತ್ ಶಾ, ಕೇಂದ್ರ ಗೃಹ ಸಚಿವ

ಸಮಾರಂಭವನ್ನು ವಿರೋಧ ಪಕ್ಷಗಳು ಬಹಿಷ್ಕರಿಸುತ್ತಿರುವುದು ದುರದೃಷ್ಟಕರ. ಅವರು ತಮ್ಮ ಈ ನಿರ್ಧಾರ ಕುರಿತು ಮರುಪರಿಶೀಲನೆ ಮಾಡಬೇಕು. ಈ ಹಿಂದೆಯೂ ಸಂಸತ್ ಆವರಣದಲ್ಲಿ ನಿರ್ಮಿಸಿರುವ ಹಲವಾರು ಕಟ್ಟಡಗಳನ್ನು ಪ್ರಧಾನಿಗಳೇ ಉದ್ಘಾಟಿಸಿದ ನಿದರ್ಶನಗಳಿವೆ
ಪ್ರಲ್ಹಾದ ಜೋಶಿ, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ

ಯಾರಿಗುಂಟು ‘ಗ್ಯಾರಂಟಿ’?

ಸಂಪುಟ ವಿಸ್ತರಣೆಗೆ ಕಾಂಗ್ರೆಸ್ ನಾಯಕರು ದೆಹಲಿಗೆ: ಆಕಾಂಕ್ಷಿಗಳ ದೌಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನಾಯಕರು ಚುನಾವಣೆಗೆ ಮುನ್ನ ಘೋಷಿಸಿದ್ದ ಐದು ಜನಪ್ರಿಯ ‘ಗ್ಯಾರಂಟಿ’ಗಳು ಪಕ್ಷವನ್ನು ಅಧಿಕಾರದ ಗದ್ದುಗೆಗೆ ತಂದು ಕೂರಿಸಿವೆ. ಈ ಗ್ಯಾರಂಟಿಗಳ ಜಾರಿಗೆ ಕಾಲಮಿತಿ ನಿಗದಿಯಾಗದೇ ಇರುವುದು, ಸಚಿವರಿಗೆ ಖಾತೆ ಖಾತ್ರಿ ಸಿಗದೇ ಇರುವುದು ಚರ್ಚೆಗೆ ಕಾರಣವಾಗಿದೆ.

‘ಪ್ರತಿ ತಿಂಗಳು 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡುವ ‘ಗೃಹ ಜ್ಯೋತಿ’ ಘೋಷಿಸಿದ್ದೀರಿ. ನಾವು ವಿದ್ಯುತ್ ಬಿಲ್ ಕಟ್ಟುವುದಿಲ್ಲ’ ಎಂದು ಹಲವೆಡೆ ಜನ ತಕರಾರು ತೆಗೆದಿದ್ದಾರೆ. ₹9 ಸಾವಿರದಷ್ಟು ಮೊತ್ತದ ಹಳೆಯ ವಿದ್ಯುತ್ ಬಿಲ್ ಪಾವತಿಸದ ಕಾರಣಕ್ಕೆ ಸಂಪರ್ಕ ಸ್ಥಗಿತಗೊಳಿಸಲು ಹೋಗಿದ್ದ ಜೆಸ್ಕಾಂ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಪ್ರಕರಣವೂ ವರದಿಯಾಗಿದೆ. ಕೆಲವೆಡೆ ವಿದ್ಯುತ್ ಬಿಲ್ ಪಾವತಿಸುವುದಿಲ್ಲ ಎಂದು ಜನ ಪಟ್ಟು ಹಿಡಿದಿದ್ದಾರೆ.

ಎಷ್ಟು ಫಲಾನುಭವಿಗಳು ಈ ಯೋಜನೆಯಡಿ ಬರಲಿದ್ದಾರೆ, ತಿಂಗಳಿಗೆ ಎಷ್ಟು ಸಂಪನ್ಮೂಲ ಬೇಕಾಗುತ್ತದೆ ಎಂಬ ಲೆಕ್ಕಾಚಾರ ಹಾಕದೇ, ಬೇಕಾದ ಮೊತ್ತಕ್ಕೆ ಸಂಪನ್ಮೂಲ ಹೊಂದಿಸುವ ಯೋಜನೆ ಇಲ್ಲದೇ ಜಾರಿ ಮಾಡಲು ಅದೇನೂ ಅಂಗಡಿಯಲ್ಲಿನ ದಿನಸಿ ವಸ್ತುವಲ್ಲ. ಮೊದಲೇ ಲೆಕ್ಕ ಹಾಕಿಡಲು ಸರ್ಕಾರವೂ ಇರಲಿಲ್ಲ. ಇದಕ್ಕೆಲ್ಲ ಸಮಯಬೇಕೆಂದು ಗೊತ್ತಿದ್ದರೂ, ಜನ ಮಾತ್ರ ಬೇಡಿಕೆ ಈಡೇರಿಸಲು ಬೇಕೆಂಬ ಹಟಕ್ಕೆ ಬಿದ್ದಿದ್ದಾರೆ. ಈ ಒತ್ತಾಯಕ್ಕೆ ಪ್ರತಿಪಕ್ಷಗಳು ತಮ್ಮ ಧ್ವನಿಗೂಡಿಸಿವೆ. ಇದು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಮುಖ್ಯಮಂತ್ರಿ ಜತೆಗೆ 25 ಸಚಿವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂಬ ಮಾಹಿತಿ ಸರ್ಕಾರ ಅಸ್ತಿತ್ವಕ್ಕೆ ಬರುವ ಹಿಂದಿನ ದಿನದವರೆಗೆ ಇತ್ತು.

7ನೇ ಪುಟ ನೋಡಿ

ಆಕಾಂಕ್ಷಿಗಳಿಗೆ ಸಿಗದ ಮಂತ್ರಿಗಿರಿ ‘ಗ್ಯಾರಂಟಿ’

ಒಂದು ವರ್ಷ ಮೈತ್ರಿ ಸರ್ಕಾರದ ಅವಧಿ ಬಿಟ್ಟರೆ ನಾಲ್ಕು ವರ್ಷಗಳ ಬಳಿಕ ಸ್ವತಂತ್ರವಾಗಿ ಅಧಿಕಾರ ಹಿಡಿದಿರುವ ಕಾಂಗ್ರೆಸ್‌ನಲ್ಲಿ ಸಚಿವ ಆಕಾಂಕ್ಷಿಗಳ ಸಂಖ್ಯೆ ಬೃಹತ್ ಪ್ರಮಾಣದಲ್ಲಿದೆ.

135 ಶಾಸಕರು ಆಯ್ಕೆಯಾಗಿರುವುದು, ಲೋಕಸಭೆ ಚುನಾವಣೆ ಎದುರುಗೊಳ್ಳಬೇಕಾಗಿರುವ ಕಾರಣ ಹಿರಿಯರ ಜತೆ ಕಿರಿಯರಿಗೂ ಅವಕಾಶ ಕೊಡಬೇಕೆಂಬ ಆಲೋಚನೆಯೂ ಆ ಪಕ್ಷದ ವರಿಷ್ಠರಲ್ಲಿದೆ. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ತಮ್ಮ ಬೆಂಬಲಿಗರಿಗೆ ಸಚಿವ ಸ್ಥಾನ ಕೊಡಿಸಬೇಕೆಂಬ ಉಮೇದಿನಲ್ಲಿದ್ದಾರೆ. ಯಾವ ಶಾಸಕರಿಗೆ, ಯಾವ ಜಿಲ್ಲೆಗೆ, ಯಾವ ಸಮುದಾಯಕ್ಕೆ ಹೆಚ್ಚಿನ ಪ್ರಾತಿನಿಧ್ಯ ಸಿಗಲಿದೆ ಎಂಬ ಕುತೂಹಲ ಇದೆ. ಆಕಾಂಕ್ಷಿಗಳಿಗೆ ಸಚಿವಗಿರಿ ಇನ್ನೂ ಮರೀಚಿಕೆಯಾಗಿಯೇ ಇದೆ.

ಸಚಿವರಿಗೆ ಸಿಗದ ಖಾತೆ ‘ಗ್ಯಾರಂಟಿ’

ಉಪ ಮುಖ್ಯಮಂತ್ರಿ, ಎಂಟು ಸಚಿವರೂ ಸೇರಿದಂತೆ ಸಿದ್ದರಾಮಯ್ಯ ನೇತೃತ್ವದ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದು ಮೇ 24ಕ್ಕೆ ನಾಲ್ಕು ದಿನ ಕಳೆದರೂ ಖಾತೆ ಹಂಚಿಕೆಯಾಗಿಲ್ಲ.

ಪ್ರಿಯಾಂಕ್ ಖರ್ಗೆ ಬಿಟ್ಟರೆ ಉಳಿದೆಲ್ಲರೂ ಹಿರೀಕರೇ ಇದ್ದರೂ ಯಾರಿಗೆ ಯಾವ ಖಾತೆ ಸಿಗಲಿದೆ, ಪ್ರಭಾವಿ ಖಾತೆಗಳು ದಕ್ಕಲಿವೆಯೇ ಎಂಬ ಖಾತ್ರಿ ಸಚಿವರಿಗೆ ಇಲ್ಲ. ಸಂಪುಟ ವಿಸ್ತರಣೆ ಬಳಿಕವೇ ಖಾತೆ ಹಂಚಿಕೆಯಾಗುವ ಸಂಭವ ಇದ್ದು, ಅಲ್ಲಿಯವರೆಗೆ ಖಾತೆ ರಹಿತ ಸಚಿವ ಸಂಪುಟವೇ ಮುಂದುವರೆಯಲಿದೆ.

ಸಂಪುಟ: ಇಂದು ಮತ್ತೆ ಕಸರತ್ತು

ನವದೆಹಲಿ: ಕರ್ನಾಟಕ ರಾಜ್ಯ ಸಚಿವ ಸಂಪುಟ ವಿಸ್ತರಿಸುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಹಿರಿಯ ನಾಯಕರೊಂದಿಗೆ ಗುರುವಾರ ಸಮಾಲೋಚನೆ ನಡೆಸಲಿದ್ದಾರೆ. ವರಿಷ್ಠರ ಒಪ್ಪಿಗೆ ಪಡೆದು ಭಾನುವಾರದೊಳಗೆ ಸಂಪುಟ ವಿಸ್ತರಣೆ ಮಾಡಲು ಉಭಯ ನಾಯಕರು ಉದ್ದೇಶಿಸಿದ್ದಾರೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಜೊತೆ ಎಂಟು ಶಾಸಕರು ಸಂಪುಟ ದರ್ಜೆಯ ಸಚಿವರಾಗಿ ಕಳೆದ ಶನಿವಾರ ಪ್ರಮಾಣವಚನ ಸ್ವೀಕರಿಸಿದ್ದಾರೆ.

7ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



‘ಬಿಜೆಪಿ ಜಾರಿಗೆ ತಂದ ಕಾಯ್ದೆ ಮರುಪರಿಶೀಲನೆ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಗೋಹತ್ಯೆ ನಿಷೇಧ ಕಾಯ್ದೆ, ಮತಾಂತರ ತಡೆ ಕಾಯ್ದೆಗಳ ಮರುಪರಿಶೀಲನೆ
- ನಾಗಪುರದಲ್ಲಿ ರೂಪಿತವಾದ ಕಾನೂನು: ಖರ್ಗೆ ಕಿಡಿ

ಬೆಂಗಳೂರು: ‘ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ಗೋಹತ್ಯೆ ನಿಷೇಧ ಕಾಯ್ದೆ, ಮತಾಂತರ ತಡೆ ಕಾಯ್ದೆ ಸೇರಿದಂತೆ ಎಲ್ಲ ಕಾನೂನು ಮತ್ತು ಆದೇಶಗಳನ್ನು ಕಾಂಗ್ರೆಸ್ ಸರ್ಕಾರ ಮರು ಪರಿಶೀಲಿಸಿ, ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದೆ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.


ಪ್ರಿಯಾಂಕ್ ಖರ್ಗೆ

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಬಿಜೆಪಿ ಆಡಳಿತದಲ್ಲಿ ಪಠ್ಯಪುಸ್ತಕಗಳಲ್ಲಿ ಮಾಡಿರುವ ಬದಲಾವಣೆಗಳನ್ನೂ ಮರು ಪರಿಶೀಲಿಸುತ್ತೇವೆ. ಅವರು (ಬಿಜೆಪಿ ಸರ್ಕಾರ) ಇತಿಹಾಸವನ್ನು ತಿರುಚಿದ್ದಾರೆ. ನಾವು ಅದನ್ನು ಸರಿಪಡಿಸುತ್ತೇವೆ’ ಎಂದೂ ಅವರು ಹೇಳಿದರು.

‘ನಾಗಪುರದಲ್ಲಿ ಕುಳಿತು ಕೊಂಡಿರುವ ಜನರ ಆದೇಶದ ಮೇರೆಗೆ ರೂಪಿಸಿರುವ ಯಾವುದೇ ಮಸೂದೆಗಳು ಅಥವಾ ಕಾನೂನುಗಳು ನಮಗೆ ಬೇಡ’ ಎಂದು ಆರೆಸ್ಸೆಸ್ ಹೆಸರು ಪ್ರಸ್ತಾಪಿಸದೆ ಪ್ರಿಯಾಂಕ್ ಹೇಳಿದರು.

‘ರಾಜ್ಯದ ವರ್ಚಸ್ಸು, ಆರ್ಥಿಕ ಪ್ರಗತಿ, ಸಮೃದ್ಧಿ ಮತ್ತು ಕನ್ನಡಿಗರಿಗೆ ಧಕ್ಕೆ ತರುವ ಮಸೂದೆಗಳನ್ನೂ ಹಿಂಪಡೆಯುತ್ತೇವೆ. ನಾವು ಸಂವಿಧಾನದ ವ್ಯಾಪ್ತಿಯಲ್ಲಿ ಎಲ್ಲ ಕಾನೂನುಗಳನ್ನು ಪರಿಶೀಲಿಸುತ್ತೇವೆ. ಅಗತ್ಯವಿಲ್ಲದ ಕಾನೂನುಗಳನ್ನು ಹಿಂಪಡೆಯುತ್ತೇವೆ’ ಎಂದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಪರಿಷ್ಕರಿಸಿ ಸಿದ್ಧಪಡಿಸಿರುವ ಪಠ್ಯ ಪುಸ್ತಕಗಳನ್ನು ಮರು ಪರಿಷ್ಕರಿಸುವ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಹೇಳಿದ್ದರು. ಗೋಹತ್ಯೆ ನಿಷೇಧ ಕಾಯ್ದೆ, ಮತಾಂತರ ತಡೆ ಕಾಯ್ದೆಗಳಿಗೆ ಕಾಂಗ್ರೆಸ್ ಈ ಹಿಂದೆಯೇ ವಿರೋಧ ವ್ಯಕ್ತಪಡಿಸಿದೆ.

ಇಂದಿರಾ ಕ್ಯಾಂಟೀನ್‌ನಲ್ಲಿ ಮುದ್ದೆ, ಚಪಾತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಕರ್ಷಣೆ ಕಳೆದು ಕೊಂಡಿರುವ ಇಂದಿರಾ ಕ್ಯಾಂಟೀನ್‌ಗಳಿಗೆ ಚೈತನ್ಯ ನೀಡಲು ಸರ್ಕಾರ ಮುಂದಾಗಿದ್ದು, ಊಟದ ಮೆನುವಿನಲ್ಲಿ ರಾಗಿಮುದ್ದೆ ಮತ್ತು ಚಪಾತಿ–ಸಾಗು ಪರಿಚಯಿಸಲು ಆಲೋಚನೆ ನಡೆಸಿದೆ.

ಸಿದ್ದರಾಮಯ್ಯ ಅವರು ಹಿಂದೆ ಮುಖ್ಯಮಂತ್ರಿ ಆಗಿದ್ದಾಗ ಆರಂಭವಾಗಿದ್ದ ಈ ಕ್ಯಾಂಟೀನ್‌ಗಳು, ಸರ್ಕಾರ ಬದಲಾದ ಬಳಿಕ ಕಳೆಗುಂದಿದ್ದವು. ಇವುಗಳಿಗೆ ಮರುಜೀವ ನೀಡುವುದು ಹೇಗೆ ಎಂಬ ಸಲಹೆಗಳನ್ನು ಅಧಿಕಾರಿಗಳ ತಂಡ ಸರ್ಕಾರಕ್ಕೆ ನೀಡಿದೆ.

ನಾಗರಿಕರ ಅನುಕೂಲಕ್ಕಾಗಿ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಬೇಕು. ಅದರಲ್ಲಿ ಸಮೀಪದ ಇಂದಿರಾ ಕ್ಯಾಂಟೀನ್, ಆಹಾರದ ಮೆನು ಸೇರಿ ಎಲ್ಲಾ ಮಾಹಿತಿ ನೀಡಬೇಕು ಎಂದು ಶಿಫಾರಸು ನೀಡಿದೆ.

7ನೇ ಪುಟ ನೋಡಿ

ನೂತನ ಸಭಾಧ್ಯಕ್ಷ ಯು. ಟಿ. ಖಾದರ್ ಮಾತು

‘ಗಾಂಧೀಜಿ, ಅಂಬೇಡ್ಕರ್ ಮಾರ್ಗ ಹಿಡಿವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಸಕರ ಹಕ್ಕುಗಳ ರಕ್ಷಿಸುವುದರ ಜತೆಗೆ ಜಾತಿ, ಮತ, ಧರ್ಮಗಳ ಗಡಿಯನ್ನು ಮೀರಿ ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತೇನೆ’ ಎಂದು ವಿಧಾನಸಭೆಯ ನೂತನ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ವಿಧಾನಸಭೆಯಲ್ಲಿ ಸಭಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಆದ ನಂತರ ಮಾತನಾಡಿದ ಅವರು, ‘ಎಲ್ಲ ಶಾಸಕರ ಪಾಲಕ ಆಗಿರುತ್ತೇನೆ. ಗಾಂಧೀಜಿ, ಅಂಬೇಡ್ಕರ್ ಅವರು ಹಾಕಿಕೊಟ್ಟ ಮಾರ್ಗವೇ ಮುಖ್ಯವೆಂದು ಭಾವಿಸಿ ಆ ದಾರಿಯಲ್ಲೇ ನಡೆಯುತ್ತೇನೆ’ ಎಂದರು.

‘ನಮ್ಮ ತಾತ್ವಿಕತೆಯನ್ನು ಬದಿಗೊತ್ತಿ, ಎಲ್ಲರೂ ಸೇರಿ ರಾಜ್ಯದ ಅಭ್ಯುದಯಕ್ಕಾಗಿ ಶ್ರಮಿಸೋಣ. ಇಲ್ಲಿ ಜನಸಾಮಾನ್ಯರ, ರೈತರ, ಶ್ರಮಿಕರ, ವಿದ್ಯಾರ್ಥಿಗಳು ಮತ್ತು ಮಹಿಳೆಯರ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸೋಣ. ಈ ವಿಚಾರಗಳ ಚರ್ಚೆಗೆ ವಿಧಾನಸಭೆ ವೇದಿಕೆಯಾಗಬೇಕು’ ಎಂದು ಖಾದರ್ ಹೇಳಿದರು.


ಸಭಾಧ್ಯಕ್ಷರಾಗಿ ಆಯ್ಕೆಯಾದ ಯು.ಟಿ. ಖಾದರ್ ಅವರು ತಮ್ಮನ್ನು ಪೀಠದವರೆಗೆ ಕರೆತಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕೈಮುಗಿದರು. ಹಂಗಾಮಿ ಸಭಾಧ್ಯಕ್ಷ ಆರ್.ವಿ.ದೇಶಪಾಂಡೆ ಇದ್ದರು

‘ನಾನು ತುಳುನಾಡಿನವನು. ಕಿರಿಯ ವಯಸ್ಸಿನಲ್ಲೇ ಈ ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯ. ನಮ್ಮ ಜಿಲ್ಲೆಯವರಾದ ವೈಕುಂಠ ಬಾಳಿಗಾ ಅವರು ವಿಧಾನಸಭೆಯ ಸಭಾಧ್ಯಕ್ಷರಾಗಿದ್ದರು. ಕೆ.ಎಸ್.ಹೆಗ್ಡೆ ಲೋಕಸಭಾ ಸಭಾಧ್ಯಕ್ಷರಾಗಿ ಸಾಕಷ್ಟು ಉತ್ತಮ ಹೆಸರು ಮಾಡಿದ್ದರು. ಆ ಗೌರವವನ್ನು ಉಳಿಸುವ ಕೆಲಸ ಮಾಡುತ್ತೇನೆ’ ಎಂದು ಅವರು ಹೇಳಿದರು.

ಅವಿರೋಧ ಆಯ್ಕೆ: ಇದಕ್ಕೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಖಾದರ್ ಹೆಸರನ್ನು ಸೂಚಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅನುಮೋದಿಸಿದರು. ಬೇರೆ ಯಾರೂ ಕಣದಲ್ಲಿ ಇಲ್ಲದ ಕಾರಣ ಖಾದರ್ ಅವರು ಸರ್ವಾನುಮತದಿಂದ ಆಯ್ಕೆ ಆಗಿದ್ದಾರೆ ಎಂದು ಹಂಗಾಮಿ ಸಭಾಧ್ಯಕ್ಷ ಆರ್.ವಿ.ದೇಶಪಾಂಡೆ ಘೋಷಿಸಿದರು.

ಈ ಪ್ರಕ್ರಿಯೆ ಮುಗಿದ ಬಳಿಕ ಸಿದ್ದರಾಮಯ್ಯ ಮತ್ತು ನಿಕಟಪೂರ್ವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿ ಖಾದರ್ ಅವರನ್ನು ಸಭಾಧ್ಯಕ್ಷ ಪೀಠಕ್ಕೆ ಕರೆತಂದರು. ಬಿಜೆಪಿಯಿಂದ ವಿರೋಧಪಕ್ಷದ ನಾಯಕರ ಆಯ್ಕೆ ಆಗದ ಕಾರಣ ಬೊಮ್ಮಾಯಿ ಅವರನ್ನೇ ದೇಶಪಾಂಡೆ ಕರೆದರು.

ಕಲಾಪವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಯಿತು.

ನೀವು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿದ್ದು, ಇಡೀ ದೇಶವೇ ನಿಮ್ಮನ್ನು ಗಮನಿಸುತ್ತದೆ. ಸರ್ಕಾರ ತಪ್ಪು ಮಾಡಿದಾಗ ಚಾಟಿ ಬೀಸಬೇಕು
ಜಿ.ಪರಮೇಶ್ವರ, ಸಚಿವ

ಸಿದ್ದರಾಮಯ್ಯ –ಡಿಕೆಶಿ ಸಮ್ಮಿಶ್ರ ಸರ್ಕಾರ: ಆರ್.ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿರುವುದು ಕಾಂಗ್ರೆಸ್ ಸರ್ಕಾರ ಅಲ್ಲ. ಇದು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನೇತೃತ್ವದ ಸಮ್ಮಿಶ್ರ ಸರ್ಕಾರ' ಎಂದು ಶಾಸಕ ಆರ್. ಅಶೋಕ ಹೇಳಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಾನು ಕೂಡ ಉಪ ಮುಖ್ಯಮಂತ್ರಿ ಆಗಿ ಕೆಲಸ ಮಾಡಿದ್ದೇನೆ. ಅದು ಸಾಂವಿಧಾನಿಕ ಹುದ್ದೆ ಅಲ್ಲ. ಆದರೆ, ಡಿ.ಕೆ.ಶಿವಕುಮಾರ್ ಅವರು ಮಾತ್ರ ಮುಖ್ಯಮಂತ್ರಿ ಮಾತನಾಡಿದ ಮೇಲೆ ತಾವೂ ಮಾತನಾಡಬೇಕು ಚಾಳಿ ಆರಂಭಿಸಿದ್ದಾರೆ' ಎಂದು ವ್ಯಂಗ್ಯವಾಡಿದರು.

'ಅಧಿಕಾರಕ್ಕೆ ಬಂದ ತಕ್ಷಣವೇ ಉಚಿತ ವಿದ್ಯುತ್ ನೀಡುತ್ತೇವೆ ಎಂದರು. ಆದರೆ ಕಾಂಗ್ರೆಸ್ ಅದನ್ನು ಜಾರಿ ಮಾಡಲಿಲ್ಲ. ಕಾಂಗ್ರೆಸ್‌ನ ಗ್ಯಾರಂಟಿ ನೋಡಿ ಜನ ಮತ ಹಾಕಿದರು. ಈಗ ಮಾತ್ರ ಎಲ್ಲದಕ್ಕೂ ಷರತ್ತುಗಳನ್ನು ಹಾಕುತ್ತಿದ್ದಾರೆ' ಎಂದು ಲೇವಡಿ ಮಾಡಿದರು.

'ಬಜರಂಗದಳವನ್ನು ನಿಷೇಧಿಸಲು ಹೊರಟರೆ ನಾವು ಸುಮ್ಮನಿರುವುದಿಲ್ಲ. ರಾಜ್ಯವ್ಯಾಪಿ ಹೋರಾಟ ಮಾಡುತ್ತೇವೆ' ಎಂದು ಪ್ರತಿಕ್ರಿಯಿಸಿದರು.

ಉಚಿತ ಆರೋಗ್ಯ ತಪಾಸಣೆ

ಬೆಂಗಳೂರು: ಕ್ಯಾನ್ಸರ್ ಸೇರಿ ವಿವಿಧ ಕಾಯಿಲೆಗಳಿಗೆ ಉಚಿತ ಆರೋಗ್ಯ ಚಿಕಿತ್ಸೆಯು ಮೇ 27ರಂದು ಡಿ.ವಿ. ಜಿ. ರಸ್ತೆಯಲ್ಲಿರುವ ಅಬಲಾಶ್ರಮದಲ್ಲಿ ನಡೆಯಲಿದೆ. ಶನಿವಾರ ಬೆಳಿಗ್ಗೆ 10ಕ್ಕೆ ಉಚಿತ ಕಣ್ಣಿನ ತಪಾಸಣೆ ಮತ್ತು ಕನ್ನಡಕ ವಿತರಣೆ ಕಾರ್ಯಕ್ರಮವು ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಯಂಡಹಳ್ಳಿ–ಹೆಬ್ಬಾಳಕ್ಕೆ ಹೆಚ್ಚುವರಿ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಂಡಹಳ್ಳಿ ಜಂಕ್ಷನ್‌ನಿಂದ ಹೆಬ್ಬಾಳಕ್ಕೆ ಹೆಚ್ಚುವರಿ ಬಸ್‌ಗಳ(ಮಾರ್ಗ ಸಂಖ್ಯೆ 501) ಸೇವೆಯನ್ನು ಬಿಎಂಟಿಸಿ ಕಲ್ಪಿಸಿದೆ.

ನಾಯಂಡಹಳ್ಳಿಯಿಂದ ನಾಗರಬಾವಿ ವೃತ್ತ, ಮಾಳಗಾಳ, ಸುಮನಹಳ್ಳಿ ಜಂಕ್ಷನ್, ಲೂರ್ದಭಾಯಿ ಸಮುದಾಯ ಭವನ, ಬಿಡಿಎ ಬಸ್ ಬೇ, ಗೊರಗುಂಟೆಪಾಳ್ಯ, ಆಲಿಸ್ಡ್ ಫ್ಯಾಕ್ಟರಿ, ಬಿಇಎಲ್ ವೃತ್ತ, ದೇವಿನಗರ ಕ್ರಾಸ್ ಮಾರ್ಗವಾಗಿ ಈ ಬಸ್‌ಗಳು ಗುರುವಾರ ದಿಂದಲೇ ಕಾರ್ಯಾಚರಣೆ ಮಾಡಲಿವೆ.

ಕೆಂಗೇರಿ ಟಿಟಿಎಂಸಿಯಿಂದ ಕೊಮ್ಮಘಟ್ಟ ಕ್ರಾಸ್, ವಿಶ್ವೇಶ್ವರಯ್ಯ ಬಡಾವಣೆ, ಉಪಕಾರ್ ಬಡಾವಣೆ ಕ್ರಾಸ್, ಮುದ್ದಯ್ಯನಪಾಳ್ಯ ಜಂಕ್ಷನ್, ಸುಂಕದಕಟ್ಟೆ, ಪೀಣ್ಯ 2ನೇ ಹಂತದ ಮಾರ್ಗವಾಗಿ ಜಾಲಹಳ್ಳಿ ಕ್ರಾಸ್‌ಗೆ ಕಾರ್ಯಾಚರಣೆ ಮಾಡುತ್ತಿರುವ ಮಾರ್ಗ ಸಂಖ್ಯೆ 515ರಲ್ಲಿ ಹೆಚ್ಚುವರಿಯಾಗಿ ಐದು ಬಸ್‌ಗಳು ಗುರುವಾರದಿಂದ ಪರಿಚಯಿಸಲಾಗುತ್ತಿದೆ. ಇದರಿಂದಾಗಿ ಈ ಮಾರ್ಗಗಳಲ್ಲಿ ಪ್ರತಿ 15 ನಿಮಿಷಗಳ ಅಂತರದಲ್ಲಿ ಬಸ್‌ಗಳು ಸಂಚರಿಸಲಿವೆ ಎಂದು ಬಿಎಂಟಿಸಿ ತಿಳಿಸಿದೆ.

ನಗರದಲ್ಲಿ ಇಂದು

ಆರ್ಯಭಟ ನೃತ್ಯೋತ್ಸವ ಮತ್ತು ಪ್ರಶಸ್ತಿ ಪ್ರದಾನ: ಉದ್ಘಾಟನೆ: ಪಿ.ಎಸ್. ದಿನೇಶ್ ಕುಮಾರ್, ಅತಿಥಿಗಳು: ಮಹೇಶ ಜೋಶಿ, ಟಿ.ಎಸ್. ನಾಗಾಭರಣ, ಅಧ್ಯಕ್ಷತೆ: ಎಚ್. ಎಲ್.ಎನ್. ರಾವ್, ಆಯೋಜನೆ: ಆರ್ಯಭಟ ಸಾಂಸ್ಕೃತಿಕ ಸಂಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4ರಿಂದ



ಟಿ.ಎಸ್. ನಾಗಾಭರಣ

ಧರ್ಮದೀಪ ಗಣಪತಿ ದೇವಸ್ಥಾನದ ಪುನರ್‌ಸ್ಥಾಪನೆ: ಪ್ರಸನ್ನ ಬಿ. ವರಾಳೆ, ಅತಿಥಿಗಳು: ಅಲೋಕ ಆರಾಧೆ, ಬಿ. ವೀರಪ್ಪ, ಜಿ. ನರೇಂದರ್, ಕೆ. ಸೋಮಶೇಖರ್, ಅಧ್ಯಕ್ಷತೆ: ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ದಿ ಅಡ್ವೊಕೇಟ್ಸ್ ಅಸೋಸಿಯೇಷನ್, ಸ್ಥಳ: ಮ್ಯಾಜಿಸ್ಟ್ರೇಟ್ ಕೋರ್ಟ್ ಆವರಣ, ಬೆಳಿಗ್ಗೆ 10

ಎಸ್.ಆರ್.ರಾಜಾನಾಯಕ್‌ಗೆ ಬೀಳ್ಕೊಡುಗೆ ಸಮಾರಂಭ: ಉದ್ಘಾಟನೆ–ಎನ್.ಮಂಜುಳ, ಅಧ್ಯಕ್ಷತೆ–ಆರ್.ಎಚ್. ಲಕ್ಷ್ಮೀಪತಿ, ವಿಶೇಷ ಆಹ್ವಾನಿತರು–ಮಹಾಂತೇಶ ಬೀಳಗಿ, ಮಹೇಶ್ ಕರಜಗಿ, ಆರ್.ಜಯಕುಮಾರ್, ಎಚ್.ಜೆ.ರಮೇಶ್, ಆಯೋಜನೆ–ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ, ಸ್ಥಳ–ಕವಿಮಂ ಎಂಜಿನಿಯರುಗಳ ಸಂಘದ ಸಭಾಂಗಣ, ಆನಂದರಾವ್ ವೃತ್ತ–ಬೆಳಿಗ್ಗೆ 10.30.

ಗೀತ ಗಾಯನ: ಉಪಸ್ಥಿತಿ: ಜೆ.ಕೆ. ನಾಗಭೂಷಣ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

'ರುಕ್ಮಿಣೀಶ ವಿಜಯ' ಪ್ರವಚನ: ಬ್ರಹ್ಮಣ್ಯಾಚಾರ್ ಭಾವೀಸಮೀರ, ಆಯೋಜನೆ ಮತ್ತು ಸ್ಥಳ: ಗೀತಾ ಮಂದಿರ ಟ್ರಸ್ಟ್, ಶ್ರೀರಾಮಪುರ, ಸಂಜೆ 6.30

ದಾಸವಾಣಿ ಕಾರ್ಯಕ್ರಮ: ಆನಂದ್ ದೇಶಪಾಂಡೆ, ತಬಲಾ: ಉತ್ಸವ್ ದೇಶಪಾಂಡೆ, ಹಾರ್ಮೋನಿಯಂ: ಪ್ರಣವ್ ದೇಶಪಾಂಡೆ, ಕೊಳಲು: ಉದ್ಧವ್ ದೇಶಪಾಂಡೆ, ತಾಳ: ಶರದ್ ದೇಶಪಾಂಡೆ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 1ನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7

ಹರಿದಾಸ ಮಂಜರಿ: ಗಾಯನ: ಗೀತಾ ಭತ್ತದ್, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಶ್ರೀನಿವಾಸ ಕಾಖಂಡಕಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 5ನೇ ಬಡಾವಣೆ, ಜಯನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in



ನಗರದ 50 ಅಂಡರ್‌ಪಾಸ್ ಪರಿಶೀಲನೆ: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್

ಸ್ಥಿತಿಗತಿ ಕುರಿತು ಮೌಲ್ಯಮಾಪನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಬಹುತೇಕ ಎಲ್ಲಾ ಅಂಡರ್‌ಪಾಸ್‌ಗಳ ಸ್ಥಿತಿಗತಿಗಳ ಮೌಲ್ಯಮಾಪನಕ್ಕೆ ಸೂಚನೆ ನೀಡಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.



ತುಷಾರ್ ಗಿರಿನಾಥ್

ಒಟ್ಟು 53 ಕೆಳ ಸೇತುವೆಗಳಿದ್ದು, ಅವುಗಳ ಪೈಕಿ 18 ರೈಲ್ವೆ ಕೆಳ ಸೇತುವೆಗಳಿವೆ. ಸದ್ಯ 50 ಕೆಳ ಸೇತುವೆಗಳ ಸ್ಥಿತಿಗತಿ ಪರಿಶೀಲಿಸ-ಲಾಗುತ್ತಿದೆ. ಹಂತ – ಹಂತವಾಗಿ ಎರಡು–ಮೂರು ದಿನಗಳಲ್ಲಿ ಸ್ಥಿತಿಗತಿ ವರದಿ ಬರಲಿದ್ದು, ವಾಹನಗಳ ಸಂಚಾರಕ್ಕೆ ಯೋಗ್ಯವಲ್ಲ ಎನಿಸಿದರೆ ಸಂಚಾರ ಸ್ಥಗಿತಗೊಳಿಸಲಾಗುವುದು ಎಂದು ಸುದ್ದಿಗಾರರಿಗೆ ಹೇಳಿದರು.

ಸದ್ಯ ಯಾವುದೇ ಅಂಡರ್ ಪಾಸ್‌ನಲ್ಲೂ ವಾಹನ ಸಂಚಾರ ನಿರ್ಬಂಧ ಮಾಡಿಲ್ಲ. ನಿರ್ಲಕ್ಷ್ಯ ವಹಿಸುವುದು ಬೇಡ ಎಂಬ ಕಾರಣಕ್ಕೆ ಎಲ್ಲಾ ಅಂಡರ್ ಪಾಸ್‌ಗಳನ್ನು ಪರಿಶೀಲಿಸಲಾಗುತ್ತಿದೆ ಎಂದರು.

ಕೆ.ಆರ್.ವೃತ್ತದಲ್ಲಿ ಸಂಭವಿಸಿದ ದುರಂತದ ಬಗ್ಗೆ ಎಫ್‌ಐಆರ್ ದಾಖಲಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಯಾರಿಂದ ನಿರ್ಲ-ಕ್ಷ್ಯವಾಗಿದ್ದರೂ ಕ್ರಮ ಕೈಗೊಳ್ಳುತ್ತಾರೆ. ದುರಸ್ತಿ ಕಾಮಗಾರಿಯನ್ನು ಪಾಲಿಕೆಯಿಂದ ಆರಂಭಿಸಲಾಗಿದೆ ಎಂದು ತುಷಾರ್ ಗಿರಿನಾಥ್ ಹೇಳಿದರು.

ಮಳೆಗಾಲ ಆರಂಭವಾಗುವುದ-ರಿಂದ ರಾಜಕಾಲುವೆ ಹೂಳೆತ್ತಿ ನೀರು ಸರಾಗವಾಗಿ ಹರಿದು ಹೋಗುವಂತೆ ನೋಡಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ. 550 ಕಿಲೋ ಮೀಟರ್‌ನಲ್ಲಿ ರಾಜಕಾಲುವೆ ಸ್ವ-ಚ್ಛಗೊಳಿಸುವ ಕಾಮಗಾರಿ ನಡೆಯುತ್ತಿದೆ ಎಂದು ವಿವರಿಸಿದರು.

ಮೂರು ದಿನಗಳಿಂದ ಒಟ್ಟು 350ಕ್ಕೂ ಹೆಚ್ಚು ಮರಗಳು ಮಳೆ ಮತ್ತು ಬಿರುಗಾಳಿಯಿಂದ ಬಿದ್ದಿವೆ. ತೆರವು ಕಾರ್ಯಾಚರಣೆ ಬಹುತೇಕ ಬುಧವಾರ ಪೂರ್ಣಗೊಂಡಿದೆ ಎಂದು ಹೇಳಿದರು.

ಮಂಗಳವಾರ ರಾತ್ರಿ 15 ಮನೆಗಳಿಗೆ ನೀರು ತುಂಬಿಕೊಂಡಿತ್ತು. ನೀರು ಹೊರ ಹಾಕಲಾಗಿದೆ. ನಿಯಮಗಳ ಪ್ರಕಾರ ಮನೆಯಲ್ಲಿ ಮೂರು ದಿನ ನೀರು ನಿಂತರೆ ಪರಿಹಾರ ನೀಡಬಹುದು. ಆದರೆ, ಆ ರೀತಿ ಮಾಡದೆ ಎಲ್ಲರಿಗೂ ಪರಿಹಾರ ನೀಡಲಾಗುತ್ತಿದೆ ಎಂದು ಅವರು ತಿಳಿಸಿದರು.



ಕನ್ನಿಂಗ್ ಹ್ಯಾಮ್ ರಸ್ತೆಯಿಂದ ಸ್ಯಾಂಕಿ ರಸ್ತೆಗೆ ಸೇರುವ ರಸ್ತೆಗೆ ನಿರ್ಮಿಸಿರುವ ಅಂಡರ್ ಪಾಸ್‌ನಲ್ಲಿ(ಲೀ ಮೆರಿಡಿಯನ್ ಹೋಟೆಲ್ ಬಳಿ) ಮರಗಳ ಎಲೆ ಮತ್ತು ಕಸ–ಕಡ್ಡಿಗಳಿಂದ ತುಂಬಿಕೊಂಡಿರುವುದು – ಪ್ರಜಾವಾಣಿ ಚಿತ್ರ

ಬೀಳುವ ಮರ ತೆರವುಗೊಳಿಸಿ: ಸುರೇಶ್ ಕುಮಾರ್ ಪತ್ರ

ಬೆಂಗಳೂರು: ಮಳೆಗಾಲ ಆರಂಭವಾಗುವ ಹಿನ್ನೆಲೆಯಲ್ಲಿ ನಗರದಲ್ಲಿ ಬಿದ್ದು ಹೋಗಬಹುದಾದ ಮರಗಳು ಮತ್ತು ರೆಂಬೆಗಳನ್ನು ತೆರವುಗೊಳಿಸಲು ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು ಎಂದು ಶಾಸಕ ಎಸ್.ಸುರೇಶ್‌ಕುಮಾರ್ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದಾರೆ.

ಭಾನುವಾರ ಬಿದ್ದ ಧಾರಾಕಾರ ಮಳೆ ಮತ್ತು ಗಾಳಿಯಿಂದಾಗಿ ಅನೇಕ ಮರಗಳು ಮತ್ತು ರೆಂಬೆಗಳು ಬಿದ್ದು ವ್ಯಕ್ತಿಗಳು ಹಾಗೂ ವಾಹನಗಳಿಗೆ ಹಾನಿಯಾಗಿದೆ. ಇದರಿಂದಾಗಿ ಮರಗಳು ಇರುವ ರಸ್ತೆಗಳಲ್ಲಿ ಓಡಾಡಲು ಆತಂಕವುಂಟಾಗಿದೆ ಎಂದು ಅವರು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಬಿದ್ದು ಹೋಗಬಹುದಾದ ಮರಗಳು ಮತ್ತು ರೆಂಬೆಗಳ ಪರಿಶೀಲನೆ ಮಾಡಿ, ಪಟ್ಟಿ ಮಾಡಿ ಅವುಗಳನ್ನು ಕೂಡಲೇ ತೆರವುಗೊಳಿಸಲು ಬಿಬಿಎಂಪಿ ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.



ಹುಂಡೈ ಕಂಪನಿಯ ಗ್ರ್ಯಾಂಡ್ ಐ10 ನಿಯೋಸ್ ಕಾರಿನ ಪ್ರಚಾರಕ್ಕೆ ಡಿಜಿಟಲ್ ಫ್ಲೋಟ್ ವ್ಯಾನ್‌ಗಳ ಸಂಚಾರಕ್ಕೆ ಹುಂಡೈ ಕಂಪನಿಯ ಅಧಿಕಾರಿಗಳಾದ ರಮಣ್ ಭಾಟಿಯಾ, ಕ್ವಾನ್ ಹೀ ಹಾನ್ ಮತ್ತು ಸಾಹೇಬ್‌ರಾವ್ ಚಾಲನೆ ನೀಡಿದರು. ಈ ವ್ಯಾನ್‌ಗಳು ನಿಯೋಸ್ ಕಾರಿನ ಬಗ್ಗೆ ರಾಜ್ಯದಾದ್ಯಂತ ಪ್ರಚಾರ ಕಾರ್ಯ ಕೈಗೊಳ್ಳಲಿವೆ.

‘ಮಹಿಳಾ ಆಯೋಗ: 4,399 ದೂರುಗಳು ಇತ್ಯರ್ಥ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೂರು ವರ್ಷಕ್ಕೂ ಹೆಚ್ಚು ಅವಧಿಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆಯಾಗಿ ಉತ್ತಮ ಕೆಲಸ ಮಾಡಿದ್ದೇನೆ’ ಎಂದು ಪ್ರಮಿಳಾ ನಾಯ್ಡು ಹೇಳಿದರು.

ಅಧಿಕಾರ ಅವಧಿ ಪೂರ್ಣಗೊಂಡ ಹಿನ್ನೆಲೆ ಮಂಗಳವಾರ ಆಯೋಜಿಸಿದ್ದ ಸುದ್ದಿಗೋಷ್ಠಿ-ಯಲ್ಲಿ ಮಾತನಾಡಿದ ಅವರು, ‘2020ರಿಂದ ಇದುವರೆಗೂ 7,329 ದೂರುಗಳು ದಾಖಲಾಗಿದ್ದು, ಇದರಲ್ಲಿ 4,399 ದೂರುಗಳು ಇತ್ಯರ್ಥವಾಗಿವೆ. 2,932ದೂರುಗಳುತನಿಖಾಹಂತದಲ್ಲಿವೆ.ಈಅವಧಿಯಲ್ಲಿ 1,054 ಸೊಮೋಟೊ ದೂರುಗಳು ದಾಖಲಾಗಿದ್ದು, ಎಲ್ಲ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ’ ಎಂದರು.



‘ಬೆಂಗಳೂರಿನಲ್ಲಿ ಯುವತಿಯ ಮೇಲಾದ ಆ್ಯಸಿಡ್ ದಾಳಿ ಹಾಗೂ ಮೈಸೂರಿನಲ್ಲಿ ನಡೆದ ಮಹಿಳೆಯ ಮೇಲಿನ ಅತ್ಯಾಚಾರ ಪ್ರಕರಣಗಳಲ್ಲಿ ಸಂತ್ರಸ್ತರ ಪರವಾಗಿ ಆಯೋಗ ನಿಂತುಕೊಂಡು ಆತ್ಮಸ್ಥೈರ್ಯ ತುಂಬುವುದರ ಜತೆಗೆ ಜೀವನ ಕಟ್ಟಿಕೊಳ್ಳುವಲ್ಲಿ ನೆರವಾಗಿದೆ. ಜತೆಗೆ ಅತ್ಯಾಚಾರ ಎಸಗಿದ ಆರೋಪಿಗೆ ಶಿಕ್ಷೆ ವಿಧಿಸಲಾಗಿದೆ. ಆ್ಯಸಿಡ್ ದಾಳಿಗೆ ಒಳಗಾದ ಯುವತಿಯರಿಗೆ ₹10 ಸಾವಿರ ಧನಸಹಾಯ ನೀಡುವ ಯೋಜನೆಯನ್ನು ಜಾರಿಗೊಳಿಸಲಾಗಿದೆ’ ಎಂದರು.

ಮಳೆ ನೀರು ನುಗ್ಗಿ ಸಮಸ್ಯೆ: ಶಾಸಕರ ಭೇಟಿ



ಹೊಸಹಳ್ಳಿ ವ್ಯಾಪ್ತಿಯಲ್ಲಿ ಮನೆಗಳಿಗೆ ಮಳೆ ನೀರು ನುಗ್ಗಿದ್ದ ಪ್ರದೇಶಕ್ಕೆ ಶಾಸಕ ಎಸ್‌ಟಿ.ಸೋಮಶೇಖರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು

ರಾಜರಾಜೇಶ್ವರಿನಗರ: ಬಿಬಿಎಂಪಿ ವ್ಯಾಪ್ತಿಯ ದೊಡ್ಡಬಿದರಕಲ್ಲು ವಾರ್ಡ್ ವ್ಯಾಪ್ತಿಯ ತುಳಸಿನಗರ, ಹೊಸಹಳ್ಳಿಯಲ್ಲಿ ಮಳೆ ನೀರು ನುಗ್ಗಿದ್ದ ಪ್ರದೇಶಗಳಿಗೆ ಶಾಸಕ ಎಸ್.ಟಿ.ಸೋಮಶೇಖರ್ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನೀರು ನುಗ್ಗದಂತೆ, ಚರಂಡಿಗಳಲ್ಲಿ ತುಂಬಿರುವ ಹೂಳನ್ನು ತೆಗೆಯಬೇಕು. ಮಳೆ ಮತ್ತು ಚರಂಡಿ ನೀರು ಸರಾಗವಾಗಿ ಕಾಲುವೆಗಳಲ್ಲಿ ಹರಿಯುವಂತೆ ಜಾಗ್ರತೆ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿಬಿಎಂಪಿ, ಬೆಂಗಳೂರು ಜಲಮಂಡಲಿ, ನಗರಯೋಜನೆ, ವಿದ್ಯುತ್, ಅರಣ್ಯ, ಕಂದಾಯ ಸೇರಿದಂತೆ ಎಲ್ಲ ಇಲಾಖೆಗಳ ಅಧಿಕಾರಿಗಳು 24ಗಂಟೆಯೂ ಕರ್ತವ್ಯ ನಿರ್ವಹಿಸಿ, ಮಳೆ ಬಂದಾಗ ಯಾವುದೇ ರೀತಿಯ ಸಮಸ್ಯೆಯಾಗದಂತೆ ಕ್ರಮಕೈಗೊಳ್ಳಬೇಕು ಎಂದರು.

ಬಿಜೆಪಿ ಮುಖಂಡ ಹೊಸಹಳ್ಳಿ ಸತೀಶ್, ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಮೇಶ್ ಇದ್ದರು.

ಉರುಳಿದ ಮರಗಳು: ವಾಹನ ಸಂಚಾರಕ್ಕೆ ಅಡಚಣೆ



ನಗರದ ಪುಟ್ಟೇನಹಳ್ಳಿ ಅಂಡರ್‌ಪಾಸ್ ಕಡೆಯಿಂದ ದಾಲ್ಮಿಯ ಜಂಕ್ಷನ್ ಕಡೆಗೆ ತೆರಳುವ ರಸ್ತೆಗೆ ಬೃಹತ್ ಮರವೊಂದು ಅಡ್ಡಲಾಗಿ ಬಿದ್ದಿತ್ತು.

ಬೆಂಗಳೂರು: ನಗರದಲ್ಲಿ ಮಂಗಳವಾರ ತಡರಾತ್ರಿ ಸುರಿದ ಮಳೆ ಹಾಗೂ ಬಿರುಗಾಳಿಯ ಅಬ್ಬರಕ್ಕೆ ರಸ್ತೆ ಬದಿಯ ಅಲ್ಲಲ್ಲಿ ಮರಗಳು ಉರುಳಿದ್ದು, ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಬುಧವಾರ ಬೆಳಿಗ್ಗೆ ಸಂಚಾರ ಪೊಲೀಸರು ಹಾಗೂ ಬಿಬಿಎಂಪಿ ಅರಣ್ಯ ಸಂಚಾರ ಘಟಕದ ಸಿಬ್ಬಂದಿ ಮರಗಳನ್ನು ತೆರವುಗೊಳಿಸಿ ವಾಹನ ಸಂಚಾರಕ್ಕೆ ವ್ಯವಸ್ಥೆ ಮಾಡಿದರು.

ಬುಧವಾರ ರಾತ್ರಿಯೂ ವಿಧಾನಸೌಧ ಸುತ್ತಮುತ್ತ, ಚಾಲುಕ್ಯ ವೃತ್ತ, ಹೆಬ್ಬಾಳ, ಯಲಹಂಕ, ಆರ್‌ಟಿ ನಗರ, ಚರ್ಚ್ ರಸ್ತೆ, ಬ್ರಿಗೇಡ್ ರಸ್ತೆ, ಅಶೋಕ ನಗರ, ದೊಮ್ಮಲೂರು, ಹೊಸೂರು ಭಾಗದಲ್ಲಿ ಮಳೆಯಾಗಿದೆ.

ಜೆ.ಪಿ ನಗರದ ಹೊರ ವರ್ತುಲ ರಸ್ತೆಯ ಪುಟ್ಟೇನಹಳ್ಳಿ ಅಂಡರ್‌ಪಾಸ್ ಕಡೆಯಿಂದ ದಾಲ್ಮಿಯ ಜಂಕ್ಷನ್ ಕಡೆಗೆ ತೆರಳುವ ರಸ್ತೆಯಲ್ಲಿ ಬೃಹತ್ ಮರ ಬಿದ್ದು ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು.

ವಸುಮತಿ ಸೇರಿ ನಾಲ್ವರಿಗೆ ‘ಕಸಾಪ ಗೌರವ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ಗೌರವ ದತ್ತಿ ಪ್ರಶಸ್ತಿಗೆ ಲೇಖಕಿಯರಾದ ವಸುಮತಿ ಉಡುಪ, ಬಿ.ಟಿ. ಲಲಿತಾ ನಾಯಕ್ ಸೇರಿ ನಾಲ್ವರು ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದಲ್ಲಿ 2022 ಹಾಗೂ 2023ನೇ ಸಾಲಿಗೆ ಪ್ರಶಸ್ತಿ ಆಯ್ಕೆ ನಡೆದಿದೆ. ಲೇಖಕ ಮಲ್ಲಿಕಾರ್ಜುನ ಹಿರೇಮಠ ಹಾಗೂ ಕಥೆಗಾರ ಅಮರೇಶ ನುಗಡೋಣಿ ಅವರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ತಲಾ ₹ 30 ಸಾವಿರ ನಗದು ಒಳಗೊಂಡಿದೆ.

ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಅವರು ಈ ಪ್ರಶಸ್ತಿ ಸ್ಥಾಪಿಸಿದ್ದಾರೆ. ಸಾಹಿತ್ಯಕ್ಕೆ ಗಣನೀಯ ಕೊಡುಗೆ ನೀಡಿದ ಒಬ್ಬ ಲೇಖಕ ಹಾಗೂ ಒಬ್ಬ ಲೇಖಕಿಗೆ ಪ್ರತಿವರ್ಷ ಪರಿಷತ್ತಿನ ಮೂಲಕ ಪ್ರಶಸ್ತಿ ನೀಡಲಾಗುತ್ತಿದೆ.



ವಸುಮತಿ



ಲಲಿತಾ



ಮಲ್ಲಿಕಾರ್ಜುನ



ಅಮರೇಶ

ಗೌರವ್ ಗುಪ್ತ ಇಂಧನ ಇಲಾಖೆಗೆ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರನ್ನು ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.



ಆ ಹುದ್ದೆಯಲ್ಲಿದ್ದ ಕಪಿಲ್ ಮೋಹನ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ಬೆಂಗಳೂರು ಜಲ ಮಂಡಳಿ ಅಧ್ಯಕ್ಷರಾಗಿದ್ದ ಜಯರಾಮ್ ಎನ್ ಅವರನ್ನು ಮುಖ್ಯಮಂತ್ರಿ-ಯವರ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಲಾಗಿದ್ದು, ಆ ಹುದ್ದೆಯಲ್ಲಿದ್ದ ಶ್ರೀಕರ ಎಂ.ಎಸ್ ಅವರನ್ನು ವರ್ಗಾಯಿಸಲಾಗಿದೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ವಾಗ್ದಾಳಿ

‘ಕಾಂಗ್ರೆಸ್ ಸರ್ಕಾರದ ಬಣ್ಣ ಬಯಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ಯಾರಂಟಿ ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರದ ನೈಜ ಬಣ್ಣ ಒಂದೇ ವಾರದೊಳಗೆ ಬಯಲಾಗಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಸಂಪುಟದ ಮೊದಲ ಸಭೆಯಲ್ಲೇ ಎಲ್ಲ ಗ್ಯಾರಂಟಿಗಳನ್ನೂ ಅನುಷ್ಠಾನಕ್ಕೆ ತರುತ್ತೇವೆ ಎಂದು ಈಗಿನ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಹೇಳಿದ್ದರು. ಈಗ ವರಸೆ ಬದಲಿಸಿ, ಷರತ್ತುಗಳನ್ನು ವಿಧಿಸಲು ಹೊರಟಿದ್ದಾರೆ. ಇದು ಯಾವ ನ್ಯಾಯ’ ಎಂದು ಪ್ರಶ್ನಿಸಿದರು.

‘ಗ್ಯಾರಂಟಿ ಹೆಸರಿನಲ್ಲಿ ಭರವಸೆಗಳನ್ನು ನೀಡಿದ್ದರು. ಅವುಗಳನ್ನು ಜಾರಿ ಮಾಡಿ ಎಂದು ಜನರು ಒತ್ತಾಯಿಸುತ್ತಿದ್ದಾರೆ. ವಿದ್ಯುತ್ ಬಿಲ್ ಕಟ್ಟಲು ನಿರಾಕರಿಸುತ್ತಿದ್ದಾರೆ. ಮಹಿಳೆಯರು ಸರ್ಕಾರಿ ಬಸ್‌ಗಳಲ್ಲಿ ಟಿಕೆಟ್ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ. ಕಾಂಗ್ರೆಸ್ ನಾಯಕರು ಈಗ ನುಡಿದಂತೆ ನಡೆಯಬೇಕು. ಮಾತು ತಪ್ಪಿದರೆ ಜನರಿಗೆ ಮೋಸ ಮಾಡಿದಂತೆ. ನಾವು ಜನರ ಪರ ನಿಲ್ಲುತ್ತೇವೆ’ ಎಂದರು.

‘ಕೊಟ್ಟ ಮಾತಿಗೆ ತಪ್ಪಿದರೆ ಒಂದು ಕ್ಷಣವೂ ಅಧಿಕಾರದಲ್ಲಿ ಇರುವುದಿಲ್ಲ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದರು. ಎಲ್ಲರಿಗೂ ಉಚಿತವಾಗಿ ವಿದ್ಯುತ್ ಪೂರೈಸುವ ಘೋಷಣೆ ಮಾಡಿದ್ದರು. ಈಗ ಮಾರ್ಗಸೂಚಿ ರೂಪಿಸಬೇಕು ಎನ್ನುತ್ತಿದ್ದಾರೆ. ಚುನಾವಣಾ ಪ್ರಚಾರದಲ್ಲಿ ವೀರಾವೇಶದಿಂದ ಮಾತನಾಡಿ ಚಪ್ಪಾಳೆ ಗಿಟ್ಟಿಸಿಕೊಂಡು, ಈಗ ಜನರ ಭಾವನೆಗಳ ಜೊತೆ ಆಟ ಆಡುತ್ತಿದ್ದಾರೆ’ ಎಂದರು.

‘ಹಾದಿ ಬೀದಿಯಲ್ಲಿ ಹೋಗುವವರಿಗೆಲ್ಲ ಗ್ಯಾರಂಟಿ ಯೋಜನೆಗಳ ಸೌಲಭ್ಯ ನೀಡಲಾಗದು ಎಂಬ ಡಿ.ಕೆ. ಶಿವಕುಮಾರ್ ಅವರ ಹೇಳಿಕೆಯನ್ನು ಒಪ್ಪಲಾಗದು. ಚುನಾವಣೆಯಲ್ಲಿ ಭರವಸೆ ಕೊಡುವಾಗ ಅವರಿಗೆ ತಲೆ ಇರಲಿಲ್ಲವಾ? ಈಗ ಅವರಿಗೆ ಮತ ಕೊಟ್ಟವರೆಲ್ಲ ಹಾದಿ, ಬೀದಿಯ ಜನರಾದರೆ’ ಎಂದು ಕೇಳಿದರು.

‘ಜೆಡಿಎಸ್ ಈ ಬೆಳವಣಿಗೆಗಳನ್ನು ಕಾದು ನೋಡಲಿದೆ. ಸರ್ಕಾರ ಜನರಿಗೆ ಮೋಸ ಮಾಡಲು ಪ್ರಯತ್ನಿಸಿದರೆ ಜನರ ಪರ ಹೋರಾಟಕ್ಕೆ ಇಳಿಯಲಿದೆ’ ಎಂದರು.

ಶಾಸಕರಿಗೆ ಧೈರ್ಯ ತುಂಬಿದ ಎಚ್‌.ಡಿ. ದೇವೇಗೌಡ

ಬೆಂಗಳೂರಿನ ತಮ್ಮ ನಿವಾಸದಲ್ಲಿ ಜೆಡಿಎಸ್‌ನ ನೂತನ ಶಾಸಕರ ಜತೆ ಸಭೆ ನಡೆಸಿದ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ, ಸಂಖ್ಯಾಬಲ ಕಡಿಮೆ ಆಗಿರುವುದರಿಂದ ಎದೆಗುಂದದಂತೆ ಧೈರ್ಯ ತುಂಬಿದ್ದಾರೆ.

‘ವಿಧಾನಸಭೆಯಲ್ಲಿ ಪಕ್ಷದ ಬಲ ಕುಗ್ಗಿದೆ ಎಂದು ಧೈರ್ಯ ಕಳೆದುಕೊಳ್ಳುವ ಅಗತ್ಯವಿಲ್ಲ. ನಾನು ಲೋಕಸಭೆಯಲ್ಲಿ ಜೆಡಿಎಸ್‌ನ ಒಬ್ಬನೇ ಸದಸ್ಯನಾಗಿದ್ದೆ. ಈಗಲೂ ನಮ್ಮ ಪಕ್ಷದ ಒಬ್ಬನೇ ಸಂಸದ ಇದ್ದಾರೆ. ಪಕ್ಷದ ಹೋರಾಟ ಕಡಿಮೆ ಆಗಿದೆಯೆ? ನೀವು ಕೂಡ ಹಾಗೆಯೇ ಕೆಲಸ ಮಾಡಬೇಕು’ ಎಂದು ಸಭೆಯಲ್ಲಿದ್ದ 19 ಶಾಸಕರಿಗೂ ಹೇಳಿದ್ದಾರೆ.

ಪೊಲೀಸರ ನೈತಿಕ ಸ್ಥೈರ್ಯ ಕುಗ್ಗಿಸುವ ಕೆಲಸ: ಬೊಮ್ಮಾಯಿ

ಬೆಂಗಳೂರು: ಕಾಂಗ್ರೆಸ್‌ನವರು ಪೊಲೀಸ್ ಇಲಾಖೆಯ ನೈತಿಕ ಸ್ಥೈರ್ಯ ಕುಗ್ಗಿಸುವ ಕೆಲಸ ಮಾಡಿದ್ದಾರೆ ಎಂದು ನಿಕಟಪೂರ್ವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರು ನಡೆಸಿದ ಸಭೆಯಲ್ಲಿ ಪೊಲೀಸರಿಗೆ ಎಚ್ಚರಿಕೆ ನೀಡಿದ್ದಾರೆ. ಕೇಸರೀಕರಣ ಮಾಡಲು ಅವಕಾಶ ಕೊಡುವುದಿಲ್ಲ ಎಂದಿದ್ದಾರೆ. ನಮ್ಮ ಪೊಲೀಸರು ಕೇಸರೀಕರಣ ಮಾಡಿಲ್ಲ. ಇಡೀ ದೇಶದಲ್ಲಿ ಕರ್ನಾಟಕ ಪೊಲೀಸ್ ಉತ್ತಮ ಹೆಸರು ಮಾಡಿದೆ’ ಎಂದೂ ತಿಳಿಸಿದರು.

‘ಕಾಂಗ್ರೆಸ್‌ನ ಕಾರ್ಯಸೂಚಿಯನ್ನು ಜಾರಿ ಮಾಡಲು ಈ ರೀತಿಯ ತೀರ್ಮಾನ ಮಾಡಿದ್ದಾರೆ. ರಾಜ್ಯದಲ್ಲಿ ತುಷ್ಟೀಕರಣ ರಾಜಕಾರಣ ಮಾಡಲು ಮೊದಲ ದಿನವೇ ಕಾಂಗ್ರೆಸ್ ಮುಂದಾಗಿದೆ’ ಎಂದು ಅವರು ಹರಿಹಾಯ್ದಿದ್ದಾರೆ.

ಮಾವು ಬೆಳೆಗಾರರಿಗೆ ಪರಿಹಾರ: ಬಿಜೆಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾನುವಾರ ಸಂಜೆ ಸುರಿದ ಭಾರಿ ಮಳೆಯಿಂದ ಮಾವು ಬೆಳೆಗೆ ಅಪಾರ ನಷ್ಟವಾಗಿದ್ದು, ಸರ್ಕಾರ ಕೂಡಲೇ ರೈತರಿಗೆ ಪರಿಹಾರ ಘೋಷಿಸಬೇಕು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವಥನಾರಾಯಣ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಮಾವು ಕೊಯ್ಲಿಗೆ ಬಂದಿದ್ದು, ಆಲಿಕಲ್ಲು ಮಳೆಯಿಂದ ಬೆಳೆಗೆ ಹಾನಿಯಾಗಿದೆ. ಮರದಲ್ಲಿದ್ದ ಮಾವು ಕೆಳಗೆ ಬಿದ್ದು ನಷ್ಟವಾಗಿದ್ದರೆ, ಮರದಲ್ಲೇ ಉಳಿರುವ ಮಾವಿಗೆ ಹುಳ ಹಿಡಿದು ಕೊಳೆತು ಹೋಗುವ ಸಾಧ್ಯತೆ ಇದೆ. ಇವೆರಡೂ ಉಪಯೋಗಕ್ಕೆ ಬರುವುದಿಲ್ಲ. ರೈತರು ಕಂಗಾಲಾಗಿದ್ದಾರೆ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

ಅಧಿಕಾರಿಗಳನ್ನು ಸ್ಥಳಕ್ಕೆ ಕಳಿಸಿ, ನಷ್ಟದ ಅಂದಾಜು ಮಾಡಿ ತಕ್ಷಣವೇ ಪರಿಹಾರ ಹಣ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ‘ಪಂಚ ಅಭಿಯಾನ’

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಜಲ ಸಂಜೀವಿನಿ ಕಾರ್ಯಕ್ರಮ ಮತ್ತು ಜಲಶಕ್ತಿ ಅಭಿಯಾನದಡಿ ಅಂತರರಾಷ್ಟ್ರೀಯ ಜೀವ ವೈವಿಧ್ಯತಾ ದಿನದ ಪ್ರಯುಕ್ತ ‘ಪಂಚ ಅಭಿಯಾನ’ ಹಮ್ಮಿಕೊಂಡಿದೆ.

ಅಂತರರಾಷ್ಟ್ರೀಯ ಜೀವ ವೈವಿಧ್ಯತಾ ದಿನದಂದು (ಮೇ 22) ಪಂಚ ಅಭಿಯಾನಗಳಿಗೆ ಚಾಲನೆ ನೀಡಲಾಗಿದೆ. ಇವುಗಳನ್ನು ನರೇಗಾಯಡಿ ಅನುಷ್ಠಾನಗೊಳಿಸಲಾಗುವುದು.

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ‘ಮಿಷನ್ ಲೈಫ್’ ಅಡಿ ನರೇಗಾ ಯೋಜನೆಯನ್ನು ಪುನರ್‌ರೂಪಿಸಿ ಜಲಸಂಜೀವಿನಿ ಕಾರ್ಯಕ್ರಮ ಜಾರಿಗೊಳಿಸಲಾಗುತ್ತಿದೆ. ಅಲ್ಲದೇ, ಅಮರತ ಸರೋವರ ಯೋಜನೆಯಡಿ ಪ್ರಾಯೋಗಿಕವಾಗಿ 100 ಕೆರೆಗಳನ್ನು ಆಯ್ಕೆ ಮಾಡಿದ್ದು, ಅವುಗಳನ್ನು ಪರಿಸರ ಸ್ನೇಹಿ ಕೆರೆಗಳನ್ನಾಗಿ ಅಭಿವೃದ್ಧಿಪಡಿಸಲಾಗುವುದು.

- ವಿಪತ್ತು ನಿರ್ವಹಣೆ ಹಾಗೂ ಗೋಮಾಳ ಅಭಿವೃದ್ಧಿ ಅಭಿಯಾನ
- ಕೋಟಿ ವೃಕ್ಷ ಅಭಿಯಾನ (ಹಸಿರೀಕರಣ)
- ನಿಷ್ಕ್ರಿಯ ಕೊಳವೆ ಬಾವಿ ಪುನಶ್ಚೇತನ ಅಭಿಯಾನ
- ಹಸಿರು ಸರೋವರ ಅಭಿಯಾನ
- ಜೈವಿಕ ಅನಿಲ ಅಭಿಯಾನ

ಪಿಟಿಸಿಎಲ್ ಕಾಯ್ದೆಯ ಸಮಗ್ರ ತಿದ್ದುಪಡಿಗೆ ಆಗ್ರಹಿಸಿ ಧರಣಿ

ಅರಣ್ಯ ರೋದನವಾದ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆ (ಪಿಟಿಸಿಎಲ್) ಸಮಗ್ರ ತಿದ್ದುಪಡಿಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ 142 ದಿನಗಳಿಂದ ಅಹೋರಾತ್ರಿ ಧರಣಿ ನಡೆಯುತ್ತಿದ್ದು, ಹೋರಾಟಗಾರರ ಕೂಗು ಅರಣ್ಯ ರೋದನವಾಗಿದೆ.

ಒಳ ಮೀಸಲಾತಿಗೆ ಆಗ್ರಹಿಸಿ ಹೋರಾಟ ಆರಂಭವಾದ ಮರು ದಿನವೇ ಜನವರಿ 2ರಂದು ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ಹೋರಾಟವೂ ಆರಂಭವಾಯಿತು. ಬಜೆಟ್‌ನಲ್ಲಿ ವಿಷಯ ಪ್ರಸ್ತಾಪಿಸಿದ ಹಿಂದಿನ ಸರ್ಕಾರ, ತಿದ್ದುಪಡಿಗೆ ಕ್ರಮ ಕೈಗೊಳ್ಳಲಿಲ್ಲ.

ಕಂದಾಯ ಸಚಿವರಾಗಿದ್ದ ಆರ್. ಅಶೋಕ ಅವರ ಮನೆ ಮುಂದೆಯೂ ಧರಣಿ ನಡೆಸಿ ಮನವರಿಕೆ ಮಾಡಿಕೊಡುವ ಪ್ರಯತ್ನವನ್ನು ಪಿಟಿಸಿಎಲ್ ಹೋರಾಟಗಾರರು ಮಾಡಿದರು. ಆದರೂ, ಸಚಿವ ಸಂಪುಟದ ಮುಂದೆ ವಿಷಯ ಬರಲಿಲ್ಲ. ಚುನಾವಣಾ ನೀತಿ ಸಂಹಿತೆ ಘೋಷಣೆಯಾದರೂ, ಪಟ್ಟು ಬಿಡದೆ ಸಂತ್ರಸ್ತರು ಹೋರಾಟ ಮುಂದುವರಿಸಿದರು.

‘ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಜಿ.ಪರ-ಮೇಶ್ವರ ಅವರು ಚುನಾವಣೆಗೂ ಮುನ್ನ ಧರಣಿಯಲ್ಲಿ ಭಾಗವಹಿಸಿ ಸರ್ಕಾರದ ಮೇಲೆ ಒತ್ತಡ ಹೇರಿದ್ದರು. ಕಾಂಗ್ರೆಸ್ ಸರ್ಕಾರ ಬಂದ ಕೂಡಲೇ ತಿದ್ದುಪಡಿ ಮಾಡುವ ಭರವಸೆ ನೀಡಿದ್ದರು. ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾ-ಳಿಕೆಯಲ್ಲೂ ಈ ವಿಷಯವನ್ನು ಪ್ರಕಟಿ-ಸಿದ್ದರು’ ಎಂದು ಹೋರಾಟಗಾರರು ನೆನಪಿಸಿಕೊಂಡರು.

‘ಚಿತ್ರದುರ್ಗದಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮಾವೇಶದಲ್ಲೂ ಕಾಂಗ್ರೆಸ್ ಭರವಸೆ ನೀಡಿದೆ. ಈಗ ಸರ್ಕಾರ ಬದಲಾಗಿದ್ದು, ಮೊದಲ ಆದ್ಯತೆಯಾಗಿ ಪರಿಗಣಿಸಿ ಕಾಯ್ದೆಗೆ ಸಮಗ್ರ ತಿದ್ದುಪಡಿ ತರಬೇಕು’ ಎಂದು ಹೋರಾಟಗಾರ ಮಂಜುನಾಥ್ ಒತ್ತಾಯಿಸಿದರು.

‘ಪರಿಶಿಷ್ಟ ಜಾತಿ ಮತ್ತು ಪಂಗಡದವರ ಭೂಮಿ ಬಲಾಢ್ಯರ ಪಾಲಾಗುವುದನ್ನು ತಪ್ಪಿಸಲು ಡಿ. ದೇವರಾಜ ಅರಸು ಮತ್ತು ಬಿ. ಬಸವಲಿಂಗಪ್ಪ ಅವರ ದಲಿತ ಪರ ಕಾಳಜಿಯಿಂದಾಗಿ ಈ ಕಾಯ್ದೆ 1978ರಲ್ಲಿ ಜಾರಿಗೆ ಬಂದಿತ್ತು. ಈ ಕಾಯ್ದೆಯಡಿ ಸಲ್ಲಿಕೆಯಾಗುವ ಅರ್ಜಿಗಳನ್ನು ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ ನ್ಯಾಯಾಲಯಗಳು ತಿರಸ್ಕರಿಸುತ್ತಿವೆ. ನ್ಯಾಯಾಲಯಗಳು ಅದೇ ರೀತಿ ತೀರ್ಪುಗಳನ್ನು ನೀಡುತ್ತಿವೆ. ಇದರಿಂದಾಗಿ ದಲಿತರು ಭೂಮಿ ವಂಚಿ-ತರಾಗುತ್ತಿದ್ದಾರೆ. ಇದನ್ನು ತಪ್ಪಿಸಲು ತಿದ್ದುಪಡಿ ಅಗತ್ಯ’ ಎಂದು ಅವರು ಹೇಳಿದರು.



ಪಿಟಿಸಿಎಲ್ ಕಾಯ್ದೆ ಸಮಗ್ರ ತಿದ್ದುಪಡಿಗೆ ಆಗ್ರಹಿಸಿ ಅಹೋರಾತ್ರಿ ಧರಣಿ 142ನೇ ದಿನವೂ ಮುಂದುವರಿದಿದೆ



ನಗರದ ಚಾಮರಾಜಪೇಟೆಯ ಪಾದರಾಯನಪುರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು. –ಪ್ರಜಾವಾಣಿ ಚಿತ್ರ

ಕೆ.ಆರ್.ಪುರ ರೈಲ್ವೆ ಮೇಲ್ಸೇತುವೆ ಕಾಮಗಾರಿ ನನೆಗುದಿಗೆ

ಹಸ್ತಾಂತರಿಸದ ಭೂಮಿ: ಟೆಂಡರ್ ರದ್ದು

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಕೆ.ಆರ್.ಪುರದ ವಿಜ್ಞಾನನಗರ ಸಮೀಪದ ಕಗ್ಗದಾಸಪುರದಲ್ಲಿ ನನೆಗುದಿಗೆ ಬಿದ್ದಿರುವ ರೈಲ್ವೆ ಗೇಟ್ ಮೇಲ್ಸೇತುವೆ ಕಾಮಗಾರಿಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಪ್ರಯತ್ನಿಸಲಾಗುವುದು ಎಂದು ನೈಋತ್ಯ ರೈಲ್ವೆ ಇಲಾಖೆಯ ಅಧಿಕಾರಿಗಳು ಭರವಸೆ ನೀಡಿದ್ದಾರೆ.

‘ಕಗ್ಗದಾಸನಪುರ: ವಾಹನ ಸವಾರರಿಗೆ ನಿತ್ಯ ನರಕಯಾತನೆ, ರೈಲ್ವೆ ಗೇಟ್ ಮೇಲ್ಸೇತುವೆ ನನೆಗುದಿಗೆ’ ಶೀರ್ಷಿಕೆ ಅಡಿ ‘ಪ್ರಜಾವಾಣಿ’ಯ ಮೇ 19ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ವರದಿಗೆ ಇಲಾಖೆ ಅಧಿಕಾರಿಗಳು ಪ್ರತಿಕ್ರಿಯಿಸಿದ್ದಾರೆ.

‘ಕಗ್ಗದಾಸಪುರದ ರೈಲ್ವೆ ಲೆವೆಲ್ ಕ್ರಾಸಿಂಗ್ ಗೇಟ್ ನಂ.13ರ ಮೇಲ್ಸೇತುವೆ ಕಾಮಗಾರಿ ಯೋಜನೆಯು 2012–13ರಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ 50–50 ವೆಚ್ಚ ಹಂಚಿಕೆ ಆಧಾರದ ಮೇಲೆ ಮಂಜೂರು ಮಾಡಲಾಗಿತ್ತು. ಕಾಮಗಾರಿ ವೆಚ್ಚವನ್ನು 2017ರ ಜುಲೈ 31ರಂದು ಮಂಜೂರು ಮಾಡಲಾಗಿತ್ತು. ರೈಲ್ವೆ ಮೇಲ್ಸೇತುವೆ ನಿರ್ಮಿಸಲು 6,959.15 ಚದರ ಮೀಟರ್ ಭೂಮಿಯ ಅಗತ್ಯವಿದ್ದು ಭೂಸ್ವಾಧೀನ ಪ್ರಸ್ತಾವನೆಯನ್ನು 2017ರ ಮಾರ್ಚ್ 21ರಂದು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಮೇಲ್ಸೇತುವೆ ಕಾಮಗಾರಿಗೆ ಅಗತ್ಯವಿರುವ ಭೂಮಿಯನ್ನು ರಾಜ್ಯ ಸರ್ಕಾರ ಇನ್ನೂ ಹಸ್ತಾಂತರಿಸಿಲ್ಲ. ರಾಜ್ಯ ಸರ್ಕಾರದ ಭರವಸೆ ಮೇರೆಗೆ 2019ರಲ್ಲಿ ಟೆಂಡರ್ ಆಹ್ವಾನಿಸಲಾಗಿತ್ತು. ಆದರೆ, ಭೂಮಿ ಹಸ್ತಾಂತರಿಸದ ಪರಿಣಾಮ ಟೆಂಡರ್ ರದ್ದು ಮಾಡಲಾಗಿದೆ. ರಾಜ್ಯ ಸರ್ಕಾರದೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಕಾಮಗಾರಿಯ ತ್ವರಿತ ಅನುಷ್ಠಾನಕ್ಕೆ ಪ್ರಯತ್ನಿಸಲಾಗುವುದು’ ಎಂದು ನೈಋತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಅನೀಶ್ ಹೆಗಡೆ ತಿಳಿಸಿದ್ದಾರೆ.

ಮೆಟ್ರೊ ಪ್ರಯಾಣಿಕರ ಸಂಖ್ಯೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲು ಪ್ರಯಾಣಿಕರ ಸಂಖ್ಯೆ ತಿಂಗಳಿನಿಂದ ತಿಂಗಳಿಗೆ ಏರಿಕೆಯಾಗುತ್ತಿದ್ದು, ವರಮಾನ ಕೂಡ ಹೆಚ್ಚಾಗಿದೆ.

ಫೆಬ್ರುವರಿ ತಿಂಗಳಲ್ಲಿ 1.46 ಕೋಟಿ ಜನ ಪ್ರಯಾಣಿಸಿದ್ದು, ₹34.90 ಕೋಟಿ ವರಮಾನ ಸಂಗ್ರಹವಾಗಿದೆ. ಫೆ.11ರಂದು ಒಂದೇ ದಿನ 5.71 ಲಕ್ಷ ಜನ ಪ್ರಯಾಣಿಸಿದ್ದಾರೆ.

ಮಾರ್ಚ್‌ನಲ್ಲಿ 1.60 ಕೋಟಿ ಜನ ಪ್ರಯಾಣಿಸಿದ್ದು, ₹38.36 ಕೋಟಿ ವರಮಾನ ಸಂಗ್ರಹವಾಗಿದೆ. ಮಾರ್ಚ್ 4 ರಂದು ಒಂದೇ ದಿನ 6.13 ಲಕ್ಷ ಜನ ಪ್ರಯಾಣಿಸಿದ್ದು, ಆ ದಿನ ₹1.48 ಕೋಟಿ ವರಮಾನ ಸಂಗ್ರಹವಾಗಿದೆ.



ಮೆಟ್ರೊ ರೈಲು

ಏಪ್ರಿಲ್‌ನಲ್ಲಿ 1.71 ಕೋಟಿ ಮಂದಿ ಮೆಟ್ರೊ ರೈಲಿನಲ್ಲಿ ಪ್ರಯಾಣ ಮಾಡಿದ್ದು, ₹41.10 ಕೋಟಿ ವರಮಾನ ಬಂದಿದೆ. ಏಪ್ರಿಲ್ 3ರಂದು ಒಂದೇ ದಿನ ₹1.64 ಕೋಟಿ ವರಮಾನ ಬಿಎಂಆರ್‌ಸಿಎಲ್‌ಗೆ ಬಂದಿದೆ. ಸ್ಮಾರ್ಟ್ ಕಾರ್ಡ್ ಬಳಕೆದಾರರ ಸಂಖ್ಯೆಯೇ ಹೆಚ್ಚಿದ್ದು, ಫೆಬ್ರುವರಿಯಲ್ಲಿ ಶೇ 60.35ರಷ್ಟು ಪ್ರಯಾಣಿಕರು ಸ್ಮಾರ್ಟ್ ಕಾರ್ಡ್ ಬಳಸಿದ್ದರೆ, ಶೇ 39.59ರಷ್ಟು ಜನ ಟೋಕನ್ ಖರೀದಿಸಿದ್ದಾರೆ. ಶೇ 0.06 ನಷ್ಟು ಪ್ರಯಾಣಿಕರು ಗುಂಪು ಪ್ರಯಾಣದ ಟಿಕೆಟ್ ಖರೀದಿಸಿದ್ದಾರೆ.

ಮಾರ್ಚ್‌ನಲ್ಲಿ ಶೇ 59.85ರಷ್ಟು ಪ್ರಯಾಣಿಕರು ಸ್ಮಾರ್ಟ್ ಕಾರ್ಡ್ ಬಳಸಿದ್ದು, ಶೇ 40.09ರಷ್ಟು ಜನ ಟೋಕನ್ ಮತ್ತು ಶೇ 0.06ರಷ್ಟು ಪ್ರಯಾಣಿಕರು ಗುಂಪು ಪ್ರಯಾಣದ ಟಿಕೆಟ್ ಖರೀದಿಸಿದ್ದಾರೆ.

ಏಪ್ರಿಲ್‌ನಲ್ಲಿ ಶೇ 54.50ರಷ್ಟು ಪ್ರಯಾಣಿಕರು ಸ್ಮಾರ್ಟ್ ಕಾರ್ಡ್ ಬಳಸಿದ್ದರೆ, ಶೇ 45.45ರಷ್ಟು ಜನ ಟೋಕನ್ ಮತ್ತು ಶೇ 0.05ರಷ್ಟು ಜನ ಗುಂಪು ಪ್ರಯಾಣದ ಟಿಕೆಟ್ ಖರೀದಿಸಿದ್ದಾರೆ.

ಅಯೋಧ್ಯೆ: ಕಾಮಗಾರಿಗೆ ವೇಗ

ಲಖನೌ (ಪಿಟಿಐ): ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ಭವ್ಯ ರಾಮಮಂದಿರವನ್ನು ಮುಂದಿನ ವರ್ಷ ಜನವರಿಯಲ್ಲಿ ಲೋಕಾರ್ಪಣೆ ಮಾಡಲು ಸಿದ್ಧತೆ ನಡೆದಿದೆ. ಈ ಹಿನ್ನೆಲೆಯಲ್ಲಿ ವಿಮಾನ ನಿಲ್ದಾಣ ಮತ್ತು ರೈಲು ನಿಲ್ದಾಣದ ವಿಸ್ತರಣೆ ಸೇರಿದಂತೆ ನಗರದ ಮೂಲಸೌಕರ್ಯ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗಿದೆ ಎಂದು ಉತ್ತರ ಪ್ರದೇಶ ಸರ್ಕಾರ ಹೇಳಿಕೆಯಲ್ಲಿ ತಿಳಿಸಿದೆ.

ಸಹಾದತ್‌ನಿಂದ್ ನಯಾ ಘಾಟ್‌ವರೆಗಿನ (13 ಕಿ.ಮೀ) ರಾಮಪಥ ಕಾಮಗಾರಿ ಪ್ರಗತಿಯಲ್ಲಿದೆ ಎಂದು ತಿಳಿಸಿದೆ.

‘ಎನ್‌ಇಪಿ ತಕ್ಷಣ ರದ್ದುಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಕ್ಕೂಟ ವ್ಯವಸ್ಥೆಗೆ ಮಾರಕವಾಗಿರುವ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) –2020 ಅನ್ನು ವಿಧಾನ ಮಂಡಲದ ಎರಡು ಸದನಗಳಲ್ಲಿ ಚರ್ಚಿಸಿ ತಿರಸ್ಕರಿಸಬೇಕು. ಎನ್‌ಇಪಿ ತಕ್ಷಣ ರದ್ದುಗೊಳಿಸಿ, 2017 ಮತ್ತು 2018ರಲ್ಲಿದ್ದ ಶಿಕ್ಷಣ ಪದ್ಧತಿ ಮರುಜಾರಿಗೊಳಿಸಬೇಕು ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ (ರುಪ್ಸಾ) ಆಗ್ರಹಿಸಿದೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, ‘ರಾಜ್ಯಕ್ಕೆ ಪೂರಕವಾಗುವ ರಾಜ್ಯ ಶಿಕ್ಷಣ ನೀತಿ ರೂಪಿಸಲು ಶಿಕ್ಷಣ ತಜ್ಞ ನಿರಂಜನಾರಾಧ್ಯ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ರಾಜ್ಯ ಶಿಕ್ಷಣ ಆಯೋಗ ರಚಿಸಬೇಕು. ಖಾಸಗಿ ಶಾಲೆಗಳನ್ನು ಗುರಿಯಾಗಿಸಿ ರೂಪಿಸಿರುವ ಅಗ್ನಿ ಅವಘಡ ಸುರಕ್ಷತೆ, ಕಟ್ಟಡ ದಕ್ಷತೆ, ಸ್ಥಿರ ನಿಧಿ, ಅನಧಿಕೃತ ಶಾಲೆಗಳ ಪಟ್ಟಿ ಇತ್ಯಾದಿ ಅವೈಜ್ಞಾನಿಕ ನಿರ್ಧಾರಗಳಿಂದ ಆಗಿರುವ ಸಮಸ್ಯೆಗಳ ಕುರಿತು ಸಮಗ್ರವಾಗಿ ಅಧ್ಯಯನ ನಡೆಸಿ, ತಕ್ಷಣ ಕ್ರಮ ತೆಗೆದುಕೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

‘1995ರ ನಂತರ ಆರಂಭವಾಗಿರುವ ಎಲ್ಲ ಕನ್ನಡ ಮಾಧ್ಯಮ ಶಾಲೆಗಳಿಗೆ ಅನುದಾನ ನೀಡಬೇಕು. ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿರುವ ಶಾಲೆಗಳಲ್ಲಿ ಕಲಿಯುತ್ತಿರುವ ಬಡ ಮಕ್ಕಳಿಗೆ ಬಿಸಿಯೂಟ ವ್ಯವಸ್ಥೆ ವಿಸ್ತರಿಸಬೇಕು. ಡಿಎಸ್‌ಇಆರ್‌ಟಿ, ಡಯಟ್, ಡಿಡಿಪಿಐ, ಬಿಇಒ ಹಂತದಲ್ಲಿನ ಭ್ರಷ್ಟಾಚಾರದಲ್ಲಿ ತೊಡಗಿರುವ ಹಾಗೂ ಕೋಮುದ್ವೇಷ ಮನಸ್ಥಿತಿ ಹೊಂದಿರುವ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಳಗಳಿಂದ ತಕ್ಷಣ ವರ್ಗಾವಣೆ ಮಾಡಬೇಕು. ಶೇ 50ರಷ್ಟು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವ ಖಾಸಗಿ ಶಾಲಾ ಕಾಲೇಜುಗಳ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಅಧ್ಯಯನ ಸಮಿತಿ ರಚಿಸಿ, ಅದರ ಶಿಫಾರಸಿನಂತೆ ಕ್ರಮ ಕೈಗೊಳ್ಳಬೇಕು’ ಎಂದೂ ಒತ್ತಾಯಿಸಿದ್ದಾರೆ.

ಪವಿತ್ರ ವಸ್ತ್ರ ಯೋಜನೆ ಪುನರಾರಂಭಿಸಿ

ಬೆಂಗಳೂರು: ಮಠ, ಧಾರ್ಮಿಕ ಸಂಸ್ಥೆಗಳಿಗೆ ಕಾಶಾಯ ವಸ್ತ್ರ ಪೂರೈಸುವ ‘ಪವಿತ್ರ ವಸ್ತ್ರ ಯೋಜನೆ’ಯನ್ನು ಸರ್ಕಾರ ಕೂಡಲೇ ಪ್ರಾರಂಭಿಸಬೇಕು ಎಂದು ಅಖಿಲ ಭಾರತ ಕೈಮಗ್ಗ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ನಗರದ ಗಾಂಧಿಭವನದಲ್ಲಿ ಬುಧವಾರ ಒಕ್ಕೂಟದ ಅಧ್ಯಕ್ಷ ಸಂಗಪ್ಪ ಮಂಟೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು.

‘ಸಂತರು, ಸನ್ಯಾಸಿಗಳು ತೊಡುವ ವಸ್ತ್ರ, ದೇವರಬಳಕೆಯ ವಸ್ತ್ರಗಳು ಶುದ್ಧ ಕೈಮಗ್ಗದಿಂದಲೇ ಮಾಡಿರಬೇಕು. ಆದ್ದರಿಂದ ಪವಿತ್ರ ವಸ್ತ್ರ ಯೋಜನೆಗೆ ಚಾಲನೆ ನೀಡಬೇಕು’ ಎಂದು ಸಭೆಯಲ್ಲಿ ಒತ್ತಾಯಿಸಲಾಯಿತು.

ಲೋಕಸಭೆ ಚುನಾವಣೆ: ‘ಕೈ’ ಜವಾಬ್ದಾರಿ ಹಂಚಿಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಲೋಕಸಭಾ ಚುನಾವಣೆಗೆ ಸಿದ್ಧರಾಗುವಂತೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಶಾಸಕರಿಗೆ ಸೂಚನೆ ನೀಡಿದ ಬೆನ್ನಲ್ಲೆ, ಚುನಾವಣೆಯ ಜವಾಬ್ದಾರಿ ಹಂಚಿ ನಾಯಕರ ಪಟ್ಟಿಯೊಂದನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಿದ್ಧಪಡಿಸಿದ್ದಾರೆ.

ಈ ಪಟ್ಟಿ ಸಹಿತ ದೆಹಲಿಗೆ ತೆರಳಿರುವ ಅವರು, ಸಂಪುಟ ವಿಸ್ತರಣೆಯ ಜೊತೆಗೆ ಈ ಬಗ್ಗೆಯೂ ಎಐಸಿಸಿ ನಾಯಕರ ಜೊತೆ ಚರ್ಚೆ ನಡೆಸಲಿದ್ದಾರೆ ಎಂದು ಶಿವಕುಮಾರ್ ಅವರ ಆಪ್ತ ಮೂಲಗಳು ತಿಳಿಸಿವೆ.

ಪಟ್ಟಿಯಲ್ಲಿ ಯಾರಿದ್ದಾರೆ?: ತುಮಕೂರು – ಜಿ. ಪರಮೇಶ್ವರ, ಚಿತ್ರದುರ್ಗ – ಟಿ.ಬಿ. ಜಯಚಂದ್ರ, ಶಿವಮೊಗ್ಗ– ಮಧು ಬಂಗಾರಪ್ಪ ಮತ್ತು ಬೇಳೂರು ಗೋಪಾಲಕೃಷ್ಣ, ಚಿಕ್ಕಮಗಳೂರು– ಉಡುಪಿ– ಬಿ.ಕೆ. ಹರಿಪ್ರಸಾದ್, ದಕ್ಷಿಣ ಕನ್ನಡ– ಮಿಥುನ್ ರೈ ಮತ್ತು ಅಶೋಕ್ ರೈ, ಬೆಳಗಾವಿ– ಸತೀಶ್ ಜಾರಕಿಹೊಳಿ ಮತ್ತು ಲಕ್ಷ್ಮೀ ಹೆಬ್ಬಾಳ್ಕರ್, ಹುಬ್ಬಳ್ಳಿ–ಧಾರವಾಡ– ಜಗದೀಶ ಶೆಟ್ಟರ್ ಮತ್ತು ವಿನಯ್ ಕುಲಕರ್ಣಿ, ಕೋಲಾರ– ರಾಮಲಿಂಗಾರೆಡ್ಡಿ ಮತ್ತು ಮಂಜುನಾಥ್, ಬೆಂಗಳೂರು ಗ್ರಾಮಾಂತರ– ಡಿ.ಕೆ. ಸುರೇಶ್, ಉತ್ತರ ಕನ್ನಡ– ಆರ್.ವಿ. ದೇಶಪಾಂಡೆ, ಮೈಸೂರು – ಎಚ್.ಸಿ. ಮಹಾದೇವಪ್ಪ, ಯತೀಂದ್ರ ಸಿದ್ದರಾಮಯ್ಯ, ಮಡಿಕೇರಿ–ಕೊಡುಗು – ಪೊನ್ನಣ್ಣ, ಬಳ್ಳಾರಿ – ವಿ.ಎಸ್. ಉಗ್ರಪ್ಪ ಮತ್ತು ನಾಗೇಂದ್ರ, ಹಾಸನ – ಶಿವಲಿಂಗೇಗೌಡ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ತಂಡ ರಚಿಸಿದ್ದಾರೆ ಎಂದೂ ಮೂಲಗಳು ಹೇಳಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

CONNECT ಕ್ಲಾಸಿಫೈಡ್ಸ್

ಸಂಕ್ಷಿಪ್ತ ಸುದ್ದಿ

ಉಚಿತ ಪ್ರಯಾಣ: ಕೂಡಲೇ ಆದೇಶಕ್ಕೆ ಒತ್ತಾಯ

ಬೆಂಗಳೂರು: ಬಸ್ ಪ್ರಯಾಣಕ್ಕೆ ಟಿಕೆಟ್ ಖರೀದಿಸಲು ಮಹಿಳೆಯರು ಹಿಂದೇಟು ಹಾಕುತ್ತಿದ್ದು, ಅಲ್ಲಲ್ಲಿ ನಿರ್ವಾಹಕರು ಮತ್ತು ಮಹಿಳಾ ಪ್ರಯಾಣಿಕರ ನಡುವೆ ಜಟಾಪಟಿ ನಡೆಯುತ್ತಿದೆ. ಆದ್ದರಿಂದ ಮಹಿಳೆಯರ ಉಚಿತ ಪ್ರಯಾಣಕ್ಕೆ ಕೂಡಲೇ ಆದೇಶ ಹೊರಡಿಸಬೇಕು ಎಂದು ಕೆಎಸ್ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್ ಒತ್ತಾಯಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಫೆಡರೇಷನ್, 'ಭರವಸೆಗಳನ್ನು ತಕ್ಷಣಕ್ಕೆ ಜಾರಿಗೊಳಿಸುವುದು ಕಷ್ಟ ಎಂಬುದು ಗೊತ್ತಿದೆ. ಆದರೂ, ಹೆಚ್ಚು ವಿಳಂಬ ಮಾಡದೆ ಭರವಸೆಗಳನ್ನು ಈಡೇರಿಸಬೇಕು' ಎಂದು ಮನವಿ ಮಾಡಿದೆ. 'ಕಾಂಗ್ರೆಸ್ ಅಧಿಕಾರಕ್ಕೆ ಬಂದಿರುವುದರಿಂದ ಸಹಜವಾಗಿಯೇ ಮಹಿಳೆಯರು ಬಸ್‌ನಲ್ಲಿ ಟಿಕೆಟ್ ಪಡೆದು ಪ್ರಯಾಣಿಸಲು ನಿರಾಕರಿಸುತ್ತಿದ್ದಾರೆ. ಉಚಿತ ಪ್ರಯಾಣಕ್ಕೆ ಅವಕಾಶ ನೀಡುವುದರಿಂದ ನಿಗಮಗಳಿಗೆ ಆಗುವ ಆರ್ಥಿಕ ಹೊರೆಯನ್ನು ಅಂದಾಜು ಮಾಡಿ ಮುಂಗಡವಾಗಿಯೇ ಮಂಜೂರು ಮಾಡಬೇಕು' ಎಂದು ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಡಿ.ಎ.ವಿಜಯಭಾಸ್ಕರ್ ಒತ್ತಾಯಿಸಿದ್ದಾರೆ.

ಮಾವು, ಹಲಸು ಮೇಳ ನಾಳೆಯಿಂದ

ಬೆಂಗಳೂರು: ಹಣ್ಣುಗಳ ರಾಜ ಎಂದೇ ಪ್ರಸಿದ್ಧವಾಗಿರುವ ಮಾವು ಮತ್ತು ಹಲಸಿನ ಮೇಳವು ಇದೇ 26ರಿಂದ ಜೂನ್ 4ರವರೆಗೆ ಲಾಲ್‌ಬಾಗ್‌ನ ಹಾಪ್‌ಕಾಮ್ಸ್ ಪ್ರಧಾನ ಕಚೇರಿಯ ಆವರಣದಲ್ಲಿ ನಡೆಯಲಿದೆ.

'ಮಾವು ಮತ್ತು ಹಲಸು ಬೆಳೆಗಾರರಿಗೆ ಉತ್ತಮ ಮಾರುಕಟ್ಟೆ ಸೌಲಭ್ಯಗಳನ್ನು ಕಲ್ಪಿಸುವ ಜತೆಗೆ ಗ್ರಾಹಕರಿಗೆ ವಿವಿಧ ತಳಿಗಳ ರುಚಿಕರ ಹಣ್ಣುಗಳನ್ನು ರಿಯಾಯಿತಿ ದರದಲ್ಲಿ ಲಭ್ಯವಾಗುವಂತೆ ಮಾಡುವುದೇ ಈ ಮೇಳದ ಉದ್ದೇಶ' ಎಂದು ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣಾ ಸಂಘದ (ಹಾಪ್‌ಕಾಮ್ಸ್) ವ್ಯವಸ್ಥಾಪಕ ನಿರ್ದೇಶಕ ಮಿರ್ಜಿ ಉಮೇಶ ಶಂಕರ ತಿಳಿಸಿದ್ದಾರೆ.

'ರೈತರ ತೋಟಗಳಿಂದ ನೇರವಾಗಿ ಖರೀದಿಸಿ ಫಸಲಿಗೆ ಉತ್ತಮ ಬೆಲೆ ನೀಡುವುದು. ಗ್ರಾಹಕರ ಅನುಕೂಲಕ್ಕೆ ತಕ್ಕಂತೆ 3 ಮತ್ತು 5 ಕೆ.ಜಿಗಳ ಪ್ಯಾಕಿಂಗ್‌ನಲ್ಲಿ ಮಾರಾಟ ವ್ಯವಸ್ಥೆ, ಆಯ್ದ 20 ಮಳಿಗೆಗಳಲ್ಲಿ ಆನ್‌ಲೈನ್ ಮೂಲಕ ಹಣ್ಣುಗಳನ್ನು ಖರೀದಿಸುವ ವ್ಯವಸ್ಥೆ ಇರಲಿದೆ' ಎಂದು ಹೇಳಿದರು.

'ಮೇ 26ರಂದು ನೂತನ ಸಚಿವ ರಾಮಲಿಂಗಾ ರೆಡ್ಡಿ ಮೇಳವನ್ನು ಉದ್ಘಾಟಿಸಲಿದ್ದಾರೆ' ಎಂದರು.

'ಈ ಮೇಳದಲ್ಲಿ ಆಲ್ಫೋನ್ಸೊ, ಬಾದಾಮಿ, ರಸಪುರಿ, ಸೇಂದೂರ, ಮಲಗೋವಾ, ಮಲ್ಲಿಕಾ, ಬಂಗನಪಲ್ಲಿ (ಬೇನಿಷಾ), ದಶೇರಿ, ಕಾಲಪಾಡು, ಕೇಸರ್, ನೀಲಂ, ತೋತಾಪುರಿ, ಇಮಾಂಪಸಂದ ಮಾವಿನ ತಳಿಗಳಿವೆ. ಚಂದ್ರ ಹಲಸು ಸೇರಿ ವಿವಿಧ ಸ್ಥಳೀಯ ತಳಿಗಳನ್ನು ಒಂದೇ ಸೂರಿನಡಿ ಖರೀದಿಸಬಹುದು' ಎಂದು ತಿಳಿಸಿದರು.

ಮಧುಮೇಹ: ಪಾದದ ಆರೈಕೆ ಕುರಿತು ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೂಟ್ ಸೆಕ್ಯೂರ್ ಸಂಸ್ಥೆಯು ಮಧುಮೇಹಿಗಳ ಪಾದಗಳ ಆರೈಕೆ ಬಗ್ಗೆ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಇದೇ ಶನಿವಾರ 'ಪೊಡೊಕಾನ್' ಶೀರ್ಷಿಕೆಯಡಿ ಅಂತರರಾಷ್ಟ್ರೀಯ ಸಮ್ಮೇಳನ ಹಮ್ಮಿಕೊಂಡಿದೆ.

ಅಮೆರಿಕನ್ ಲಿಂಬ್ ಪ್ರಿಸರ್ವೇಶನ್ ಸೊಸೈಟಿ ಮತ್ತು ಐಐಎಸ್‌ಸಿ ಸಹಯೋಗದಲ್ಲಿ ಈ ಸಮ್ಮೇಳನ ನಡೆಯಲಿದೆ. ಮಧುಮೇಹದಿಂದ ಪಾದಗಳಲ್ಲಿ ಕಾಣಿಸಿಕೊಳ್ಳುವ ಹುಣ್ಣುಗಳ ತಡೆಗಟ್ಟುವಿಕೆ, ಚಿಕಿತ್ಸಾ ವಿಧಾನ, ತಂತ್ರಜ್ಞಾನಗಳ ಬಳಕೆ ಬಗ್ಗೆ ತಜ್ಞರು ಚರ್ಚಿಸಲಿದ್ದಾರೆ. 'ಯುವ ಸಾಧಕರ ಪ್ರಶಸ್ತಿ'ಯನ್ನೂ ಸಮ್ಮೇಳನದಲ್ಲಿ ಪ್ರದಾನ ಮಾಡಲಾಗುತ್ತದೆ ಎಂದು ಸಂಸ್ಥೆ ತಿಳಿಸಿದೆ.

ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕ ಡಾ.ರವಿ, ಅಮೆರಿಕನ್ ಲಿಂಬ್ ಪ್ರಿಸರ್ವೇಶನ್ ಸೊಸೈಟಿ ಸಂಸ್ಥಾಪನಾಧ್ಯಕ್ಷ ಡಾ. ಡೇವಿಡ್ ಆರ್ಮ್‌ಸ್ಟ್ರಾಂಗ್ ಪಾಲ್ಗೊಳ್ಳಲಿದ್ದಾರೆ. ಅತ್ಯಾಧುನಿಕ ತಂತ್ರಜ್ಞಾನದ ನೆರವಿನಿಂದ ಮಧುಮೇಹಿಗಳ ಪಾದದ ಸಮಸ್ಯೆಗೆ ಪರಿಹಾರೋಪಾಯ ಕಂಡುಕೊಳ್ಳುವುದು ಸಮ್ಮೇಳನದ ಮುಖ್ಯ ಉದ್ದೇಶ ಎಂದು ಸಂಸ್ಥೆಯ ಸಂಸ್ಥಾಪಕ ಡಾ. ಸಂಜಯ್ ಶರ್ಮಾ ಹೇಳಿದ್ದಾರೆ.

25 ಸ್ಥಳಗಳಲ್ಲಿ ಮಾಲಿನ್ಯ ತಡೆ, ನಾಗರಿಕ–ಪರಿಸರ ಸ್ನೇಹಿ ಜಂಕ್ಷನ್, ಜನರ ಓಡಾಟಕ್ಕಿಲ್ಲ ಬೇಲಿ

ವಿಶ್ರಾಂತಿಯ ತಾಣಗಳಾಗಲಿವೆ ಜಂಕ್ಷನ್

● ಆರ್. ಮಂಜುನಾಥ್

ಬೆಂಗಳೂರು: ನಗರದ ವಿವಿಧ ಜಂಕ್ಷನ್‌ಗಳಲ್ಲಿ ಸಂಚಾರ ದಟ್ಟಣೆಯ ಸಮಸ್ಯೆಗೆ ಸಮಗ್ರ ಪರಿಹಾರ ಇನ್ನೂ ಸಿಗದಿದ್ದರೂ, ಆ ಜಂಕ್ಷನ್‌ಗಳ ಸೌಂದರ್ಯೀಕರಣ ಆರಂಭವಾಗಿದೆ. 25 ಜಂಕ್ಷನ್‌ಗಳು ಕಲ್ಲಿನ ಹಾಸು, ವಿದ್ಯುತ್ ದೀಪ, ಕಾರಂಜಿಗಳಿಂದ ನಳನಳಿಸಲಿವೆ.

ದೂಳು, ಕಸ, ಮುರಿದುಬಿದ್ದ ಕಲ್ಲು, ಬೇಲಿಯಿಂದ ಬೇಸರ ಮೂಡಿಸುತ್ತಿದ್ದ ಜಂಕ್ಷನ್‌ಗಳ ಸ್ವರೂಪವೇ ಬದಲಾಗಲಿದೆ. ಜಂಕ್ಷನ್‌ಗಳ ಸೌಂದರ್ಯವನ್ನು ಸವಿಯುವ ಜೊತೆಗೆ, ಕಾರಂಜಿಯ ಸೊಬಗಿನಲ್ಲಿ ಅಲ್ಲೊಂದಷ್ಟು ಹೊತ್ತು ವಿರಮಿಸಿಕೊಳ್ಳುವ ಅವಕಾಶವೂ ಲಭ್ಯವಾಗಲಿದೆ.

ಜಂಕ್ಷನ್‌ಗಳು ಸೌಂದರ್ಯೀಕರಣಗೊಳ್ಳುವ ಜೊತೆಗೆ ನಾಗರಿಕರು ವಿರಮಿಸಲು ಅವಕಾಶವನ್ನೂ ಕಲ್ಪಿಸಲಾಗಿದೆ. ವಿಶಾಲ ಕಲ್ಲಿನಹಾಸಿನ ಜೊತೆಗೆ ಅಲ್ಲಲ್ಲಿ ಕಲ್ಲಿನ ಕುರ್ಚಿಗಳನ್ನೂ ಅಳವಡಿಸಲಾಗುತ್ತದೆ. ಗಿಡ–ಮರಗಳನ್ನು ಉಳಿಸಿಕೊಂಡು ಅಂದಗೊಳಿಸಲಾಗುತ್ತಿದೆ. 25ರಲ್ಲಿ 23 ಜಂಕ್ಷನ್‌ಗಳಲ್ಲಿ ಕಾರಂಜಿಗಳನ್ನು ಸೃಷ್ಟಿಸಲಾಗುತ್ತಿದೆ. ಇದು ಆಹ್ಲಾದಕರ ವಾತಾವರಣ ನೀಡುವ ಜೊತೆಗೆ ವಾಯುಮಾಲಿನ್ಯವನ್ನು ಅಲ್ಪಮಟ್ಟಿಗೆ ತಡೆಯುತ್ತದೆ.

ಇಂತಹ ಸುಧಾರಣೆ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಬಿಬಿಎಂಪಿ ಸಂಚಾರ ಎಂಜಿನಿಯರಿಂಗ್ ಘಟಕದಿಂದ (ಟಿಇಸಿ) ಕೈಗೊಳ್ಳಲಾಗಿದೆ. ಈ ಜಂಕ್ಷನ್‌ಗಳ ಅಭಿವೃದ್ಧಿಗೆ ₹23.80 ಕೋಟಿ ವೆಚ್ಚವಾಗಲಿದೆ. ಎಲ್ಲ ಜಂಕ್ಷನ್‌ಗಳ ಕಾಮಗಾರಿ ನಡೆಯುತ್ತಿದ್ದು, 10 ತಿಂಗಳಲ್ಲಿ ಮುಗಿಯಲಿವೆ. ಕೆಲವೊಂದು ಜಂಕ್ಷನ್ ಶೀಘ್ರವೇ ನಾಗರಿಕರ ಬಳಕೆಗೆ ಲಭ್ಯವಾಗಲಿವೆ.

ಟೌನ್‌ಹಾಲ್, ಶೇಷಾದ್ರಿ ರಸ್ತೆಯ ಮೌರ್ಯ ವೃತ್ತ, ಹಡ್ಸನ್ ವೃತ್ತ, ಎನ್.ಆರ್.ಸ್ಕ್ವೇರ್‌ನಲ್ಲಿ ಅಭಿವೃದ್ಧಿ ಕಾಮಗಾರಿ ಬಹುತೇಕ ಪೂರ್ಣಗೊಂಡಿವೆ.

'ಟೌನ್ ಹಾಲ್ – ರವೀಂದ್ರ ಕಲಾಕ್ಷೇತ್ರದ ನಡುವಿನ ಹೆಚ್ಚಿನ ಸ್ಥಳವನ್ನು ಬಳಸಿಕೊಂಡು ಸಾಕಷ್ಟು ರೀತಿಯಲ್ಲಿ ಅಭಿವೃದ್ಧಿ ಕೈಗೊಳ್ಳಲಾಗಿದೆ. ಈ ಜಂಕ್ಷನ್‌ಗಳ ಅಭಿವೃದ್ಧಿ ಹಿಂದಿಗಿಂತ ಭಿನ್ನವಾಗಿದೆ. ಇದಕ್ಕೆ ಬೇಲಿ ಹಾಕುವುದಿಲ್ಲ. ಗೇಟ್ ಅಳವಡಿಸುವುದಿಲ್ಲ. ಒಂದೇ ಕಡೆ ಪ್ರವೇಶ, ಒಂದೇ ನಿರ್ಗಮನ ಎಂಬುದಿಲ್ಲ. ಎಲ್ಲೆಡೆಯಿಂದ ಪ್ರವೇಶ, ನಿರ್ಗಮನವಿರುವಂತೆ ವಿನ್ಯಾಸಗೊಳಿಸಲಾಗಿದೆ. ಇದೇ ರೀತಿ ನಗರದ ಎಲ್ಲ ಜಂಕ್ಷನ್‌ಗಳನ್ನೂ ಅಲ್ಲಿನ ಸ್ಥಳಕ್ಕೆ ಅನುಗುಣವಾಗಿ ನಿರ್ಮಿಸಲಾಗುತ್ತಿದೆ' ಎಂದು ಟಿಇಸಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಜಯಸಿಂಹ ಮಾಹಿತಿ ನೀಡಿದರು.

'ಜಂಕ್ಷನ್‌ಗಳ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ಪೂರ್ಣಗೊಂಡ ನಂತರದ ಎರಡು ವರ್ಷದ ನಿರ್ವಹಣೆಯನ್ನು ಆಯಾ ಗುತ್ತಿಗೆದಾರರಿಗೇ ವಹಿಸಲಾಗಿದೆ. ಪ್ರತಿ ಜಂಕ್ಷನ್ ನಿರ್ವಹಣೆಗೆ ಒಬ್ಬ ಸಿಬ್ಬಂದಿ ನೇಮಿಸಲಾಗುತ್ತದೆ' ಎಂದು ಟಿಇಸಿ ವಿಭಾಗದ ಪ್ರದೀಪ್ ತಿಳಿಸಿದರು.





ಬಹುತೇಕ ಪೂರ್ಣಗೊಂಡಿರುವ ಮೌರ್ಯ ಜಂಕ್ಷನ್

75 ಜಂಕ್ಷನ್‌ಗಳಿಗೆ ಅನುಮೋದನೆ ಸಿಕ್ಕಿಲ್ಲ!

ನಗರದ ಜಂಕ್ಷನ್‌ಗಳನ್ನು ಪಾದಚಾರಿಗಳಿಗೆ ಸುರಕ್ಷಿತವಾಗಿರಿಸಲು, ವಾಯುಮಾಲಿನ್ಯ ನಿಯಂತ್ರಿಸಲು 75 ಜಂಕ್ಷನ್‌ಗಳನ್ನು ಕಾರಂಜಿ ಸಹಿತ ಅಭಿವೃದ್ಧಿಪಡಿಸುವ 'ಸುರಕ್ಷ 75 –ಮಿಷನ್ 2023' ಯೋಜನೆಗೆ ಚಾಲನೆ ನೀಡಲಾಗಿದ್ದರೂ, ಅದಕ್ಕೆ ಸರ್ಕಾರದಿಂದ ಅನುಮತಿ ಸಿಕ್ಕಿಲ್ಲ.

ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಈ ಯೋಜನೆಗೆ ಚಾಲನೆ ನೀಡಿದ್ದರು. ಬಿಬಿಎಂಪಿ ಬಜೆಟ್‌ನಲ್ಲೂ ಅದರ ಪ್ರಸ್ತಾಪವಾಗಿತ್ತು. ಯೋಜನೆಗೆ ಸರ್ಕಾರದಿಂದ ಅನುಮತಿ ಸಿಗಬೇಕಿದೆ. ಆ ನಂತರ ಟೆಂಡರ್ ಕರೆದು ಕಾಮಗಾರಿ ಆರಂಭಿಸಬೇಕಿದೆ. ₹ 150 ಕೋಟಿ ವೆಚ್ಚದ ಯೋಜನೆಗೆ ವಲಯವಾರು ಜಂಕ್ಷನ್‌ಗಳನ್ನು ಗುರುತಿಸಲಾಗಿದೆ. ಪೂರ್ವ ವಲಯದಲ್ಲಿ ಹೆಚ್ಚು ಅಂದರೆ 13, ಮಹದೇವಪುರ–ದಕ್ಷಿಣ ವಲಯದಲ್ಲಿ ತಲಾ 12, ಪೂರ್ವ ವಲಯದಲ್ಲಿ 11 ಜಂಕ್ಷನ್ ಅಭಿವೃದ್ಧಿಪಡಿಸುವ ಯೋಜನೆ ಇದೆ.

ಜಂಕ್ಷನ್‌ಗಳು	ಎಷ್ಟು ವೆಚ್ಚ?
ಹಡ್ಸನ್ ವೃತ್ತ	₹2.44 ಕೋಟಿ
ಎನ್.ಆರ್.ಸ್ಕ್ವೇರ್	₹2.69 ಕೋಟಿ
ಟೌನ್‌ಹಾಲ್	₹96.46 ಲಕ್ಷ
ಬ್ರಿಗೇಡ್ ರಸ್ತೆ	₹73.13 ಲಕ್ಷ
ಮೇಯೊ ಹಾಲ್	₹1.76 ಕೋಟಿ
ಕೆ.ಎಚ್.ವೃತ್ತ	₹1.74 ಕೋಟಿ
ಅಶೋಕ ಪಿಲ್ಲರ್	₹1.36 ಕೋಟಿ
ಡೇರಿ ವೃತ್ತ	₹55.50 ಲಕ್ಷ
ಹಡ್ಸನ್ ಪೊಲೀಸ್ ಪಾರ್ಕ್	₹77.50 ಲಕ್ಷ
ಕಾರ್ಲೆ	₹52.97 ಲಕ್ಷ
ಗುಬ್ಬಿ ತೋಟದಪ್ಪ ಛತ್ರ ರಸ್ತೆ	₹59.41 ಲಕ್ಷ
ಎಂಟಿಆರ್ ಗೇಟ್	₹61.57 ಲಕ್ಷ
ಸರ್ಕಲ್ ಮಾರಮ್ಮ	₹58.93 ಲಕ್ಷ
ವಿಧಾನಸೌಧ	₹87.95 ಲಕ್ಷ
ಗಾಲ್ಫ್ ಕೋರ್ಸ್	₹1.08 ಕೋಟಿ
ಉಪ್ಪಾರಪೇಟೆ	₹68.77 ಲಕ್ಷ
ಸುಮನಹಳ್ಳಿ	₹40.63 ಲಕ್ಷ
ಮಾಧವನ್ ಪಾರ್ಕ್	₹31.01 ಲಕ್ಷ
ಬಿಇಎಲ್	₹30.93 ಲಕ್ಷ
ಹೆಬ್ಬಾಳ	₹41.85 ಲಕ್ಷ
ಕಂಟೋನ್ಮೆಂಟ್	₹97.12 ಲಕ್ಷ
ಜ್ಞಾನಭಾರತಿ	₹47.85 ಲಕ್ಷ
ಗುಟ್ಟಹಳ್ಳಿ	₹1.71 ಕೋಟಿ
ದೊಮ್ಮಲೂರು	₹84.94 ಲಕ್ಷ
ಸುರಂಜನ್ ದಾಸ್	₹32.18 ಲಕ್ಷ

ಎದ್ದೇಳು ಕರ್ನಾಟಕ: ಅಭಿನಂದನಾ ಸಮಾವೇಶ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಜನ ಜಾಗೃತಿ ಮೂಡಿಸಿದ 'ಎದ್ದೇಳು ಕರ್ನಾಟಕ' ಸಂಘಟನೆ ಇದೇ 26ರಂದು ನಗರದ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಭಾಂಗಣದಲ್ಲಿ ರಾಜ್ಯಮಟ್ಟದ ಅಭಿನಂದನಾ ಸಮಾವೇಶ ಆಯೋಜಿಸಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ವೀರಸಂಗಯ್ಯ, 'ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ದ್ವೇಷ ರಾಜಕಾರಣವನ್ನು ಕೊನೆಗಾಣಿಸಲು 'ಎದ್ದೇಳು ಕರ್ನಾಟಕ'ದ 112 ಪ್ರಗತಿಪರ ಸಂಘಟನೆಗಳ ಐಕ್ಯ ವೇದಿಕೆ ರಾಜ್ಯದಾದ್ಯಂತ ಅನೇಕ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿದೆ. 103 ವಿಧಾನಸಭೆ ಕ್ಷೇತ್ರಗಳನ್ನು ಸೂಕ್ಷ್ಮ ಎಂದು ಗುರುತಿಸಿ ಜಾತ್ಯತೀತ ಮತಗಳು ಕ್ರೋಢೀಕರಣವಾಗಲು ಶ್ರಮಿಸಿದೆ' ಎಂದು ಹೇಳಿದರು.

'10ಲಕ್ಷಕ್ಕೂ ಹೆಚ್ಚಿನ ವಿವಿಧ ಬಗೆಯ ಸಾಹಿತ್ಯವನ್ನು ಮುದ್ರಿಸಿ ಹಂಚಲಾಯಿತು. ಸಾಮಾಜಿಕ ಮಾಧ್ಯಮಗಳಲ್ಲಿ 7 ಹಾಡುಗಳ ಆಲ್ಬಂ, 80ಕ್ಕೂ ಹೆಚ್ಚು ವಿಡಿಯೋಗಳನ್ನು ಪ್ರಸರಣ ಮಾಡಲಾಯಿತು. 250ಕ್ಕೂ ಹೆಚ್ಚು ಕಾರ್ಯಾಗಾರಗಳನ್ನು ನಡೆಸಲಾಯಿತು. ಈ ಅಭಿಯಾನದಲ್ಲಿ ಸಾಹಿತಿಗಳು, ಚಿಂತಕರು, ಕಲಾವಿದರು ಪಾಲ್ಗೊಂಡಿದ್ದರು. ಅವರಿಗೆಲ್ಲ ಅಭಿನಂದಿಸಲು ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ' ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾಹಿತಿ ದೇವನೂರ ಮಹಾದೇವ, ವಿಜಯಾ, ಪುರುಷೋತ್ತಮ ಬಿಳಿಮಲೆ, ರೆಹಮತ್ ತರೀಕೆರೆ, ದು.ಸರಸ್ವತಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

'ಮರೆಯಾಗುತ್ತಿದೆ ಮಾನವೀಯ ಮೌಲ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದಲಾಗುತ್ತಿರುವ ಸಮಾಜದಲ್ಲಿ ಮಾನವೀಯ ಮೌಲ್ಯಗಳು ಮರೆಯಾಗುತ್ತಿವೆ' ಎಂದು ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಬೇಸರ ವ್ಯಕ್ತಪಡಿಸಿದರು.

ಬೆಳಗೆರೆ ಕೃಷ್ಣಶಾಸ್ತ್ರಿ ಅವರ ಜನ್ಮದಿನಾಚರಣೆ ಪ್ರಯುಕ್ತ ಭಾರತೀಯ ವಿದ್ಯಾಭವನ ಮತ್ತು ಶಾರದಾ ಮಂದಿರ ವಿದ್ಯಾಸಂಸ್ಥೆ ಜಂಟಿಯಾಗಿ ನಗರದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಎಚ್. ಅಲ್ಲಿಸಾಬ್ ಅವರ 'ಸಟೀಕ ಶಬ್ದ ಮಂಜರಿ ಕೋಶ' ಕೃತಿ ಬಿಡುಗಡೆ ಮಾಡಿದರು.

'ಅಮೆರಿಕದಲ್ಲಿ ಟ್ರೂಮನ್ ಅಧ್ಯಕ್ಷರಾಗಿದ್ದಾಗ ಮೊದಲ ಬಾರಿ ಅಣುಬಾಂಬ್ ತಯಾರಿಸಲಾಯಿತು. ಆಗ ಐನ್‌ಸ್ಟೈನ್ 'ಮಾನವ ತನ್ನ ಅಸ್ತಿತ್ವಕ್ಕಾಗಿ ಹೊಸ ದಾರಿಗಳನ್ನು ಕಂಡುಕೊಳ್ಳಬೇಕು' ಎಂದು ಕರೆ ನೀಡಿದ್ದರು. 1953ರಲ್ಲಿ ನಡೆದ ಯುದ್ಧಗಳಿಂದ ಕ್ರೂರ ಮತ್ತು ಕರುಣಾಜನಕ ಸನ್ನಿವೇಶವನ್ನು ಕಂಡ ಸಮಾಜ, ಮತ್ತೆ ಮಾನವೀಯ ಮೌಲ್ಯಗಳ ಅವಶ್ಯಕತೆಯನ್ನು ಸಾಬೀತುಪಡಿಸಿತು. ಈ ಸಮಾಜದಲ್ಲಿ ಮಾನವೀಯ ಮೌಲ್ಯಗಳು ಮರೆಯಾಗದಂತೆ ನೋಡಿಕೊಳ್ಳಬೇಕು' ಎಂದು ಹೇಳಿದರು.

ವಿದ್ವಾಂಸ ಕೃಷ್ಣಮೂರ್ತಿ ಹನೂರು, 'ಬೆಳಗೆರೆ ಕೃಷ್ಣ ಶಾಸ್ತ್ರಿ ಅವರನ್ನು ಅರ್ಥ ಮಾಡಿಕೊಳ್ಳಲು ನಾನು ಅನೇಕ ರೀತಿಯಲ್ಲಿ ಪ್ರಯತ್ನಪಟ್ಟಿದ್ದೇನೆ. ಅವರನ್ನು ಹಂತ ಹಂತವಾಗಿ ತಿಳಿದುಕೊಂಡೆ' ಎಂದರು.

ಶಾರದಾ ಮಂದಿರ ವಿದ್ಯಾಸಂಸ್ಥೆ ಕಾರ್ಯದರ್ಶಿ ರಾಮಕೃಷ್ಣ, ಭಾರತೀಯ ವಿದ್ಯಾಭವನ ನಿರ್ದೇಶಕ ಎಚ್.ಎನ್. ಸುರೇಶ್, ಜಂಟಿ ನಿರ್ದೇಶಕಿ ನಾಗಲಕ್ಷ್ಮಿ ಕೆ. ರಾವ್, ಪ್ರಕಾಶಕ ಅಭಿನವ ರವಿಕುಮಾರ್ ಮತ್ತಿತರರು ಇದ್ದರು.

ಇಂದಿರಾ ಕ್ಯಾಂಟೀನ್ ತಿಂಡಿ ದರ ಹೆಚ್ಚಳ ಸಾಧ್ಯತೆ

ಉಪಾಹಾರ ದರ ₹5ರಿಂದ ₹10ಕ್ಕೆ ಹೆಚ್ಚಳಕ್ಕೆ ಚಿಂತನೆ ● ಕ್ಯಾಂಟೀನ್ ಸಂಖ್ಯೆ 243ಕ್ಕೆ ಏರಿಸಲು ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಇಂದಿರಾ ಕ್ಯಾಂಟೀನ್ ಉಪಾಹಾರ ದರ ₹5ರಿಂದ ₹10ಕ್ಕೆ ಹೆಚ್ಚಳವಾಗುವ ಸಾಧ್ಯತೆ ಇದೆ.

ಈಗ ನೀಡುತ್ತಿರುವ ಉಪಾಹಾರ ಪ್ರಮಾಣ ಹೆಚ್ಚಳ ಮಾಡಲು ಆಲೋಚಿಸಿರುವ ಬಿಬಿಎಂಪಿ ಅಧಿಕಾರಿಗಳು, ದರ ಹೆಚ್ಚಳ ಆಗಲಿದೆ ಎಂಬ ಸುಳಿವು ನೀಡಿದ್ದಾರೆ.

'ಶ್ರಮಿಕರು ಬೆಳಿಗ್ಗೆ ಮತ್ತು ಮಧ್ಯಾಹ್ನ ಹೆಚ್ಚಿನ ಸಂಖ್ಯೆಯಲ್ಲಿ ಇಂದಿರಾ ಕ್ಯಾಂಟೀನ್ ಉಪಯೋಗ ಪಡೆಯುತ್ತಿದ್ದಾರೆ. ರಾತ್ರಿ ಊಟಕ್ಕೆ ಅಷ್ಟೇನು ಬೇಡಿಕೆ ಇಲ್ಲ. ರಾತ್ರಿ ವೇಳೆ ಬೇಡಿಕೆಗೆ ಅನುಗುಣವಾಗಿ ಆಹಾರ ಸಿದ್ಧಪಡಿಸಿ ಬೆಳಿಗಿನ ಉಪಾಹಾರಕ್ಕೆ ನೀಡುತ್ತಿರುವ ಆಹಾರದ ಪ್ರಮಾಣ ಹೆಚ್ಚಳ ಮಾಡಲು ಆಲೋಚಿಸಲಾಗಿದೆ. ಪ್ರಮಾಣ ಹೆಚ್ಚಾಗುವುದರಿಂದ ಉಪಾಹಾರದ ಬೆಲೆಯನ್ನು ₹5ರಿಂದ ₹10ಕ್ಕೆ ಹೆಚ್ಚಳ ಮಾಡಬಹುದೇ ಎಂದು ಪರಿಶೀಲಿಸಲಾಗುತ್ತಿದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಆದರೆ, ಆ ಹೊರೆಯನ್ನು ಫಲಾನುಭವಿಗಳಿಗೆ ವರ್ಗಾಯಿಸುವುದಿಲ್ಲ. ಸರ್ಕಾರದಿಂದ ನೆರವು ಕೇಳಲಾಗುವುದು' ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸ್ಪಷ್ಟಪಡಿಸಿದರು.

ಈ ಹಿಂದೆ 198 ಕಡೆ ಇಂದಿರಾ ಕ್ಯಾಂಟೀನ್ ಮತ್ತು 10 ಮೊಬೈಲ್ ಕ್ಯಾಂಟೀನ್‌ಗಳಿದ್ದವು. ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ಮೇರೆಗೆ ಈಗ ಮತ್ತೊಮ್ಮೆ ಈ ಕ್ಯಾಂಟೀನ್‌ಗಳಿಗೆ ಮರುಜೀವ ನೀಡಲು ಬಿಬಿಎಂಪಿ ಅಧಿಕಾರಿಗಳು ಸಜ್ಜಾಗುತ್ತಿದ್ದಾರೆ. ವಾರ್ಡ್‌ಗಳ ಸಂಖ್ಯೆ 243ಕ್ಕೆ ಏರಿಕೆಯಾಗಿರುವುದರಿಂದ ಕ್ಯಾಂಟೀನ್‌ಗಳ ಸಂಖ್ಯೆಯನ್ನೂ ಹೆಚ್ಚಿಸಲು ಮುಂದಾಗಿದ್ದಾರೆ.

'ಕ್ಯಾಂಟೀನ್‌ಗಳಿಗೆ ಆಹಾರ ಪೂರೈಕೆ ಮಾಡಲು ಹೊಸದಾಗಿ ಟೆಂಡರ್ ಆಹ್ವಾನಿಸಲಾಗುತ್ತಿದೆ. ಹಾಳಾಗಿರುವ ಅಡುಗೆ ಮನೆಯ ಸಲಕರಣೆಗಳನ್ನು ಬದಲಿಸಬೇಕಾಗಿದೆ. ಬೇಡಿಕೆ ನೋಡಿಕೊಂಡು ಮೊಬೈಲ್ ಕ್ಯಾಂಟೀನ್ ತೆರೆಯುವ ಬಗ್ಗೆ ಮುಂದಿನ ದಿನಗಳಲ್ಲಿ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಹಣಕಾಸು) ಜಯರಾಂ ರಾಯಪುರ ಅವರು 'ಪ್ರಜಾವಾಣಿ'ಗೆ ತಿಳಿಸಿದರು.



ಸರ್ಕಾರಕ್ಕೆ ಪ್ರಸ್ತಾವ: ತುಷಾರ್ ಗಿರಿನಾಥ್

'ಇಂದಿರಾ ಕ್ಯಾಂಟೀನ್‌ಗಳ ಸಂಖ್ಯೆ ಹೆಚ್ಚಳ ಮತ್ತು ಆಹಾರದ ಗುಣಮಟ್ಟ ಹೆಚ್ಚಳಕ್ಕೆ ಬೇಕಾಗುವ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಮೂರು ನಾಲ್ಕು ವರ್ಷಗಳಿಂದ ಸರ್ಕಾರದಿಂದ ಅನುದಾನ ಬಂದಿಲ್ಲ. ಹೊಸದಾಗಿ 45 ಕ್ಯಾಂಟೀನ್‌ಗಳನ್ನು ತೆರೆಯಬೇಕಿದ್ದು, ಅದಕ್ಕೆ ಬಂಡವಾಳ ಬೇಕಾಗುತ್ತದೆ. ಗುಣಮಟ್ಟ ಮತ್ತು ಆಹಾರದ ಪ್ರಮಾಣ ಹೆಚ್ಚಳ ಮಾಡಬೇಕೆಂದರೆ ದರ ಹೆಚ್ಚಳ ಮಾಡಬೇಕಾಗುತ್ತದೆ. ಆದರೆ, ಅದು ನಾಗರಿಕರಿಂದಲ್ಲ, ಸರ್ಕಾರದಿಂದ ಕೇಳಲಾಗುವುದು' ಎಂದು ಹೇಳಿದರು.

ಮಹಿಳಾ ಕುಸ್ತಿಪಟುಗಳ ಹೋರಾಟಕ್ಕೆ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿಯಲ್ಲಿ ಹೋರಾಟ ನಡೆಸುತ್ತಿರುವ ಮಹಿಳಾ ಕುಸ್ತಿಪಟುಗಳಿಗೆ ಬೆಂಬಲ ಸೂಚಿಸಿ, ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಒ) ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

'ಹೋರಾಟನಿರತ ಕುಸ್ತಿಪಟುಗಳೊಂದಿಗೆ ನಾವಿದ್ದೇವೆ', 'ಲೈಂಗಿಕ ಕಿರುಕುಳ ನೀಡಿದ ಆರೋಪಿಗೆ ಶಿಕ್ಷೆ ವಿಧಿಸಿರಿ' ಎಂದು ವಿದ್ಯಾರ್ಥಿಗಳು ಘೋಷಣೆ ಕೂಗಿದರು.

ಸಿನಿಮಾ ನಿರ್ದೇಶಕ ಬಿ. ಸುರೇಶ ಮಾತನಾಡಿ, 'ಹೆಣ್ಣುಮಕ್ಕಳ ಮೇಲಿನ ಲೈಂಗಿಕ ಕಿರುಕುಳ, ಹಿಂಸೆಯಂತಹ ಪ್ರಕರಣ ದೇಶದಾದ್ಯಂತ ಎಲ್ಲ ಕ್ಷೇತ್ರಗಳಲ್ಲೂ ನಡೆಯುತ್ತಿದೆ. ಸಿನಿಮಾ, ಕ್ರೀಡೆ, ಕಚೇರಿಗಳು ಯಾವ ಕ್ಷೇತ್ರವೂ ಹೊರತಾಗಿಲ್ಲ. ಹೆಣ್ಣು ಮಕ್ಕಳನ್ನು ಕೇವಲ ಭೋಗದ ವಸ್ತುವಾಗಿ ನೋಡುವ ದೃಷ್ಟಿಕೋನ ಎಲ್ಲೆಡೆ ಇದೆ. ಇದು ಸಮಾಜದ ಸ್ವಾಸ್ಥ್ಯ ಹಾಳುಗೆಡವುತ್ತಿದೆ. ಈ ಕೆಟ್ಟ ಪ್ರವೃತ್ತಿ, ಮನಸ್ಥಿತಿ ಮೊದಲು ಬದಲಾಗಬೇಕು' ಎಂದು ಹೇಳಿದರು.

'ಮಹಿಳಾ ಕುಸ್ತಿಪಟುಗಳ ವಿಚಾರದಲ್ಲಿ ಕೇಂದ್ರದ ಬಿಜೆಪಿ ಸರ್ಕಾರವೇ ಕುಸ್ತಿ ಫೆಡರೇಶನ್ ಮುಖ್ಯಸ್ಥ, ಆರೋಪಿ ಸ್ಥಾನದಲ್ಲಿರುವ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ರಕ್ಷಿಸುತ್ತಿದೆ. ಅದೆಷ್ಟೋ ಪ್ರಕರಣಗಳಲ್ಲಿ ಅಧಿಕಾರ ನಡೆಸುವ ಸರ್ಕಾರಗಳೇ ಆರೋಪಿಗಳನ್ನು ರಕ್ಷಣೆ ಮಾಡುತ್ತವೆ. ದೇಶದಲ್ಲಿ ಹೋರಾಟ ಮತ್ತಷ್ಟು ತೀಕ್ಷ್ಣಗೊಳ್ಳಬೇಕು. ಪುರುಷರು ಸಹ ಹೆಣ್ಣು ಮಕ್ಕಳ ಜೊತೆಯಾಗಿ ನಿಂತು ಬೇಡಿಕೆಗಳು ಈಡೇರುವವರೆಗೂ ಅವರಿಗೆ ಬೆಂಬಲವಾಗಿ ನಿಲ್ಲಬೇಕು' ಎಂದು ಆಗ್ರಹಿಸಿದರು.

ಎಐಡಿಎಸ್‌ಒ ರಾಜ್ಯ ಖಜಾಂಚಿ ಅಭಯಾ ದಿವಾಕರ್, 'ಮಹಿಳಾ ಕುಸ್ತಿಪಟುಗಳ ಹೋರಾಟ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿದೆ. ವಿದ್ಯಾರ್ಥಿ ಸಮೂಹ ನಿಮ್ಮ ಹೋರಾಟವನ್ನು ಸಂಪೂರ್ಣ ಬೆಂಬಲಿಸುತ್ತೇವೆ. ಆಳುವ ಸರ್ಕಾರಗಳು ಕಿಂಚಿತ್ತೂ ಹೆಣ್ಣುಮಕ್ಕಳ ರಕ್ಷಣೆ, ಭದ್ರತೆ ಕಡೆ ಗಮನ ಹರಿಸದೇ ಇರುವುದು, ಕನಿಷ್ಠ ಪ್ರತಿಕ್ರಿಯೆ ಸಹ ನೀಡದೆ ಇರುವುದು ಅವರ ಧೋರಣೆಯನ್ನು ತೋರಿಸುತ್ತದೆ' ಎಂದು ಹೇಳಿದರು.

ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಎಚ್.ಎಚ್.ಹಣಮಂತ, ಸಂಘಟನೆಯ ರಾಜ್ಯ ಅಧ್ಯಕ್ಷರಾದ ಕೆ.ಎಸ್.ಅಶ್ವಿನಿ, ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಹಾಜರಿದ್ದರು.

ರೈತ ಸಂಘದ ಪ್ರತಿಭಟನೆ: ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಬಂಧಿಸುವಂತೆ ಆಗ್ರಹಿಸಿ ರಾಜ್ಯ ರೈತ ಸಂಘ (ಕೋಡಿಹಳ್ಳಿ ಚಂದ್ರಶೇಖರ್ ಬಣ)ದ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ರೈತರು ಪ್ರತಿಭಟನೆ ನಡೆಸಿದರು.

ಕೇಂದ್ರ ಸರ್ಕಾರದ ವಿರುದ್ಧ ರೈತ ಮುಖಂಡರು ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು. ಕೇಂದ್ರ ಸರ್ಕಾರವು ಆರೋಪಿಗಳನ್ನು ಯಾವುದೇ ಕಾರಣಕ್ಕೂ ರಕ್ಷಣೆ ಮಾಡಬಾರದು. ಅವರನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು.



ಕುಸ್ತಿ ಫೆಡರೇಶನ್ ಮುಖ್ಯಸ್ಥ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಎಐಡಿಎಸ್‌ಒ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ



ಅಬ್ದುಲ್ ರೆಹಮಾನ್ ಪಾಷ ಅವರ 'ಕನ್ನಡೇತರರಿಗೆ ಕನ್ನಡ ಕಲಿಸುವವರ ಕೈಪಿಡಿ' ಪುಸ್ತಕವನ್ನು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಬಿಡುಗಡೆಗೊಳಿಸಿದರು.

'ಕನ್ನಡ ಕಲಿಯಿರಿ, ಅದು ಬಹಳ ಸರಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಭಾಷೆ ಬಹಳ ಸರಳ. ಕರ್ನಾಟಕದಲ್ಲಿರುವ ಪ್ರತಿಯೊಬ್ಬರು ಈ ಭಾಷೆಯನ್ನು ಕಲಿಯಬೇಕು' ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಹೇಳಿದರು.

ಫೆಡರೇಷನ್ ಆಫ್ ಮುಸ್ಲಿಂ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರೊ. ಎಂ. ಅಬ್ದುಲ್ ರೆಹಮಾನ್ ಪಾಷ ಬರೆದಿರುವ 'ಕನ್ನಡೇತರರಿಗೆ ಕನ್ನಡ ಕಲಿಸುವವರ ಕೈಪಿಡಿ' ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ನನ್ನ ಹಾಗೆ ಕನ್ನಡ ಭಾಷೆಯನ್ನು ಕಲಿತ ಅನೇಕರು ಆಡಳಿತ ಮತ್ತು ಇತರೆ ಕ್ಷೇತ್ರಗಳಲ್ಲಿ ಜನಪರವಾದ ಕೆಲಸಗಳನ್ನು ಮಾಡಿದ್ದಾರೆ. ಕನ್ನಡ ಭಾಷೆ ಎಲ್ಲರನ್ನು ಒಂದಾಗುವಂತೆ ಬೆಸೆಯುತ್ತದೆ. ಈ ನಿಟ್ಟಿನಲ್ಲಿ ಈ ಪುಸ್ತಕ ಸಹಾಯಕವಾಗಲಿದೆ' ಎಂದು ತಿಳಿಸಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಎ.ಮುರಿಗೆಪ್ಪ ಮಾತನಾಡಿ, 'ಅಬ್ದುಲ್ ರೆಹಮಾನ್ ಪಾಷ ಅವರು ಭಾಷೆಯನ್ನು ಕಲಿಸುವ ಕುರಿತು ಇರುವ ಸಿದ್ಧಾಂತ ಮತ್ತು ಕಾರ್ಯವಿಧಾನಗಳನ್ನು ತಾವೇ ನಾಲ್ಕು ದಶಕಗಳ ಕಾಲ ಬಳಸಿ ಸಾವಿರಾರು ಜನ ಕನ್ನಡೇತರರಿಗೆ ಕನ್ನಡ ಕಲಿಸಿದ ಅನುಭವದಿಂದ ಈ ಕೈಪಿಡಿಯನ್ನು ಸಿದ್ಧಪಡಿಸಿದ್ದಾರೆ. ಪ್ರತಿಯೊಂದು ಹಂತದಲ್ಲಿಯೂ ಅವರು ಕೊಡುವ ಉದಾಹರಣೆಗಳು, ಪ್ರಸಂಗಗಳು ಕನ್ನಡ ಬೋಧನೆಗೆ ಪೂರಕ ಸಾಧನಗಳನ್ನು ಒದಗಿಸುತ್ತವೆ. ಅವರು ಬಳಸುವ ಸರಳ ಶೈಲಿ, ಓದುಗರೊಂದಿಗೆ ಸಂಭಾಷಿಸುವಂತೆ ಬರೆಯುವ ವಿಧಾನ ಇಂಥ ತಾಂತ್ರಿಕ ಬರವಣಿಗೆಗೆ ಉತ್ತಮ ಮಾದರಿಯಾಗಿದೆ' ಎಂದು ಹೇಳಿದರು.

'ಫೆಮಿ' ಅಧ್ಯಕ್ಷ ಇಕ್ಬಾಲ್ ಅಹ್ಮದ್, ಪ್ರಾಧ್ಯಾಪಕ ಶೇಖ್ ಹಾರೂನ್ ಸಫ್ದರ್, ಹಾರೂನ್ ಬಾಷಾ, ಮುಹಮ್ಮದ್ ನವಾಝ್ ಇದ್ದರು.

478ನೇ ರ್‍ಯಾಂಕ್ ಪಡೆದ ಮುಳಬಾಗಿಲಿನ ಮನೋಜ್ ಕುಮಾರ್


ಅನಾಥ ಆಶ್ರಮದ ಹುಡುಗ ಯುಪಿಎಸ್‌ಸಿ ಪಾಸ್

ಪ್ರಜಾವಾಣಿ ವಾರ್ತೆ

ಕೋಲಾರ / ಮುಳಬಾಗಿಲು: ತಂದೆಯ ಅಕಾಲಿಕ ನಿಧನದ ನಂತರ ಬಾಲ್ಯದಲ್ಲೇ ಅನಾಥಾಲಯದಲ್ಲಿ ಬೆಳೆದ ಹುಡುಗ ಮೊದಲ ಪ್ರಯತ್ನದಲ್ಲಿಯೇ ಯುಪಿಎಸ್‌ಸಿ ಪರೀಕ್ಷೆಯಲ್ಲಿ 478ನೇ ರ್‍ಯಾಂಕ್ ಗಳಿಸಿದ್ದಾನೆ.

ಮುಳಬಾಗಿಲು ನಗರದ ಶ್ರೀಲಕ್ಷ್ಮಿ ವೆಂಕಟೇಶ್ವರ ಆರ್ಫನ್ ಎಜುಕೇಷನಲ್ ಚಾರಿಟಬಲ್ ಟ್ರಸ್ಟ್ ಅನಾಥ ಆಶ್ರಮದಲ್ಲಿರುವ ಮನೋಜ್ ಕುಮಾರ್ ಮೊದಲ ಪ್ರಯತ್ನದಲ್ಲೇ ಈ ಸಾಧನೆ ಮಾಡಿದ್ದಾರೆ.

ಮನೋಜ್ ಮೂಲತಃ ಆಂಧ್ರ ಪ್ರದೇಶ ಚಿತ್ತೂರು ಜಿಲ್ಲೆಯವರು. ಬಾಲ್ಯ ದಲ್ಲೇ ಆನಾಥಾಶ್ರಮ ಸೇರಿದ ಮನೋಜ್, ಟ್ರಸ್ಟ್‌ನ ಎಲ್ಲರ ಹೆಮ್ಮೆಯ ಹುಡುಗ. ಟ್ರಸ್ಟ್‌ನ ಸಂಸ್ಥಾಪಕಿ ಚಿನ್ಮಯಿ ಅವರೇ ಮನೋಜ್‌ಗೆ ಆಸರೆ ಹಾಗೂ ಸ್ಫೂರ್ತಿ. 2010ರಲ್ಲಿ ಆರಂಭವಾದ ಟ್ರಸ್ಟ್‌ನಲ್ಲಿ ಈವರೆಗೆ ಸುಮಾರು 500 ಬಡವರಿಗೆ ಹಾಗೂ ಅನಾಥರಿಗೆ ಬಿ.ಕಾಂ, ಎಸ್ಸೆಸ್ಸೆಲ್ಸಿ, ಡಿಪ್ಲೊಮಾ, ಸ್ನಾತಕೋತ್ತರ ಪದವಿಗಳಲ್ಲಿ ಶಿಕ್ಷಣ ಕೊಡಿಸಿದ್ದಾರೆ. ಈಗ ಸುಮಾರು 50 ಮಂದಿ ಅನಾಥಾಲಯದಲ್ಲಿ ಓದುತ್ತಿದ್ದಾರೆ.



> **ಅನಾಥಾಶ್ರಮದ ಸಂಸ್ಥಾಪಕರಾದ ಚಿನ್ಮಯಿ ಸ್ವಂತ ಮಗನಿಗಿಂತಲೂ ನನ್ನನ್ನು ಚೆನ್ನಾಗಿ ಬೆಳೆಸಿದ್ದಾರೆ. ಅವರೂ ಯುಪಿಎಸ್‌ಸಿ ಪರೀಕ್ಷೆ ಬರೆಯಬೇಕು ಅಂದುಕೊಂಡಿದ್ದರು. ಸಾಧ್ಯವಾಗಿರಲಿಲ್ಲ**
> **ಮನೋಜ್ ಕುಮಾರ್,** ಯುಪಿಎಸ್‌ಸಿಯಲ್ಲಿ 478ನೇ ಸ್ಥಾನ

> **ಮನೋಜ್ ಅನಾಥನಲ್ಲ. ಸ್ವಂತ ಮಗನೆಂದೇ ಭಾವಿಸಿದ್ದೇನೆ. ಆತನ ಸಾಧನೆಯಿಂದ ನನಗೆ ಅತೀವ ಸಂತೋಷವಾಗಿದೆ**
> **ಚಿನ್ಮಯಿ,** ಶ್ರೀಲಕ್ಷ್ಮಿ ವೆಂಕಟೇಶ್ವರ ಅರ್ಫನ್ ಎಜುಕೇಷನಲ್ ಚಾರಿಟೆಬಲ್ ಟ್ರಸ್ಟ್ ಸಂಸ್ಥಾಪಕಿ

ಮನೋಜ್ ಮುಳಬಾಗಿಲು ನಗರದಲ್ಲಿ ಎಸ್ಸೆಸ್ಸೆಲ್ಸಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿ, ಬಳಿಕ ಕೋಲಾರದಲ್ಲಿ ಪಿಯುಸಿ (ವಿಜ್ಞಾನ), ನಂತರ ಬೆಂಗಳೂರಿನಲ್ಲಿ ಬಿಸಿಎ ಪದವಿ ಶಿಕ್ಷಣ ಪೂರೈಸಿದರು. ಹೈದರಾಬಾದ್‌ನ ಲಾ ಎಕ್ಸಲೆನ್ಸ್ ಕೇಂದ್ರದಲ್ಲಿ ಯುಪಿಎಸ್‌ಸಿ ತರಬೇತಿ ಪಡೆದರು. ಈ ಮಧ್ಯೆ ಮುಳಬಾಗಿಲು ನಗರಸಭೆಯಲ್ಲಿ ತಾಂತ್ರಿಕ ಆಪರೇಟರ್ ಆಗಿ ಉದ್ಯೋಗ ಗಿಟ್ಟಿಸಿಕೊಂಡರು. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಕನ್ನಡ ಮತ್ತು ಪಬ್ಲಿಕ್ ಅಡ್ಮಿನಿಸ್ಟ್ರೇಶನ್ ವಿಷಯ ಆಯ್ಕೆ ಮಾಡಿಕೊಂಡಿದ್ದರು.

'ಮುಳಬಾಗಿಲು ನಗರಸಭೆಯಲ್ಲಿ ಉದ್ಯೋಗದಲ್ಲಿದ್ದೆ. ಕೋವಿಡ್ ಸಮಯದಲ್ಲಿ ಯುಪಿಎಸ್‌ಸಿ ಪರೀಕ್ಷೆ ಬರೆಯಲು ತೀರ್ಮಾನಿಸಿದೆ. ನಿತ್ಯ ಎಂಟು ಗಂಟೆ ಓದುತ್ತಿದ್ದೆ. ಬಳಿಕ ಕೋಚಿಂಗ್ ಕೇಂದ್ರಕ್ಕೆ ಸೇರಿದೆ. ನನ್ನ ಕನಸು ಐಎಎಸ್ ಅಧಿಕಾರಿ ಆಗಬೇಕು ಎಂಬುದು. ಈಗ ಬಂದಿರುವ ರ್‍ಯಾಂಕ್ ಸಾಲದು. ಮತ್ತೊಮ್ಮೆ ಪರೀಕ್ಷೆ ಬರೆದು ರ್‍ಯಾಂಕ್ ಸುಧಾರಿಸಿಕೊಳ್ಳುವೆ' ಎಂದು ಮನೋಜ್ 'ಪ್ರಜಾವಾಣಿ'ಗೆ ತಿಳಿಸಿದರು. 'ನನ್ನ ಈ ಸಾಧನೆಗೆ ಚಿನ್ಮಯಿ ಅವರೇ ಸ್ಫೂರ್ತಿ. ಅವರೇ ಓದಲು ಸಹಕಾರ ನೀಡಿದರು. ಯುಪಿಎಸ್‌ಸಿ ಪರೀಕ್ಷೆ ಬರೆಯಲು ಪ್ರೇರಣೆ ತುಂಬಿದರು' ಎಂದರು.

ಯುಪಿಎಸ್‌ಸಿ: 5 ಮಂದಿಗೆ ರ್‍ಯಾಂಕ್

ಬೆಂಗಳೂರು: ಪುಷ್ಪಗಂಗ ಎಂಟರ್‌ಪ್ರೈಸಸ್‌ನ 'ಧೀಕ್ಷಣ' ಕೇಂದ್ರದಲ್ಲಿ ತರಬೇತಿ ಪಡೆದ 5 ಅಭ್ಯರ್ಥಿಗಳು ಕೇಂದ್ರ ನಾಗರಿಕ ಸೇವಾ ಆಯೋಗದ (ಯುಪಿಎಸ್‌ಸಿ) ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದಿದ್ದಾರೆ. ಸಂಸ್ಕೃತಿ ಸೋಮಾನಿ 49ನೇ ರ್‍ಯಾಂಕ್ ಪಡೆದಿದ್ದಾರೆ. ರುಹಾನಿ (159), ಅಂಕೂರ್ ಕುಮಾರ್ (257), ಮನ್‌ಪ್ರೀತ್ ಸಿಂಗ್ (616) ಮತ್ತು ಶ್ರೇಯಾ ಸಿಂಗ್ (639) ರ್‍ಯಾಂಕ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಇಂಡಿಯಾ 4 ಐಎಎಸ್': 25 ಮಂದಿ ರ್‍ಯಾಂಕ್

ಬೆಂಗಳೂರು: ಕೇಂದ್ರ ನಾಗರಿಕ ಸೇವಾ ಆಯೋಗದ (ಯುಪಿಎಸ್‌ಸಿ) ಪರೀಕ್ಷೆಯಲ್ಲಿ 'ಇಂಡಿಯಾ 4 ಐಎಎಸ್' ಸಂಸ್ಥೆಯಲ್ಲಿ ತರಬೇತಿ ಪಡೆದ 25 ಅಭ್ಯರ್ಥಿಗಳು ರ್‍ಯಾಂಕ್ ಪಡೆದಿದ್ದಾರೆ.

ಇಲ್ಲಿ ತರಬೇತಿ ಪಡೆದವರಲ್ಲಿ ಭಾವನಾ ಎಚ್.ಎಸ್. (55), ಸೂರಜ್ ಡಿ. (197), ಸೌರಭ್ ನರೇಂದ್ರ (198), ಆಕಾಶ್ ಎ.ಎಲ್. (210), ರವಿರಾಜ್ ಅವಸ್ತಿ (224), ಚೆಲುವರಾಜ್ (238), ಸೌರಭ್ ಕೆ. (260), ಧಾಮಿನಿ ಎಂ. ದಾಸ್ (345), ಶೃತಿ ಯರಗಟ್ಟಿ (362), ಪೂಜಾ ಎಂ. (390), ಭಾನುಪ್ರಕಾಶ್ ಜೆ. (448), ಕೈಲಾಶ್ ಟಿ. (465) ಉತ್ತಮ ಸಾಧನೆ ಮಾಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ತರಗತಿ ಕಾರ್ಯಕ್ರಮ, ಪರೀಕ್ಷಾ ಸರಣಿ ಹಾಗೂ ತಜ್ಞರ ಮಾರ್ಗದರ್ಶನ ಅಭ್ಯರ್ಥಿಗಳ ಯಶಸ್ಸಿಗೆ ಕಾರಣವಾಗುತ್ತಿದೆ ಎಂದು ಸಂಸ್ಥೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಮಹಡಿಯಿಂದ ವ್ಯಕ್ತಿ ಜಿಗಿದು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಕರಣವೊಂದರಲ್ಲಿ ವ್ಯಕ್ತಿಯನ್ನು ವಶಕ್ಕೆ ಪಡೆಯಲು ಮನೆಗೆ ತೆರಳಿದ್ದಾಗ ಆತ ಮಹಡಿಯಿಂದ ಜಿಗಿದು ಮೃತಪಟ್ಟಿರುವ ಘಟನೆ ಬೊಮ್ಮನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಬೇಗೂರು ರಸ್ತೆಯಲ್ಲಿ ಬುಧವಾರ ರಾತ್ರಿ ನಡೆದಿದೆ.

ಹುಸೇನ್ (31) ಮೃತಪಟ್ಟ ವ್ಯಕ್ತಿ.

'4ನೇ ಮಹಡಿಯಲ್ಲಿ ವ್ಯಕ್ತಿಯನ್ನು ವಶಕ್ಕೆ ಪಡೆಯಲು ಮುಂದಾಗಿದ್ದೆವು. ಆಗ ಆತ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಜಿಗಿದು ಸಾವನ್ನಪ್ಪಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಶಕ್ಕೆ ಪಡೆಯಲು ಬಂದಿದ್ದ ಬೊಮ್ಮನಹಳ್ಳಿ ಠಾಣೆಯ ನಾಲ್ವರು ಪೊಲೀಸರು ಹಲ್ಲೆ ನಡೆಸಿದ್ದಾರೆ ಎಂದು ಕುಟುಂಬಸ್ಥರು ಆರೋಪಿಸಿ, ಪ್ರತಿಭಟನೆ ನಡೆಸಿದರು.

ವೃದ್ಧೆ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿನಿಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಣಕಾಸಿನ ವಿಚಾರಕ್ಕೆ ಮಹಿಳೆಯೊಬ್ಬರು ವೃದ್ಧೆ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾರೆ.

ನಂದಿನಿಲೇಔಟ್ ನಿವಾಸಿ ಗಿರಿಜಮ್ಮ(70) ಅವರಿಗೆ ತಲೆಗೆ ಗಾಯವಾಗಿದೆ. ಹಲ್ಲೆ ನಡೆಸಿದವರು ಎನ್ನಲಾದ ಶಾಂತಮ್ಮ ಅವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಗಿರಿಜಮ್ಮ ಮತ್ತು ಶಾಂತಮ್ಮ ಅಕ್ಕಪಕ್ಕದ ನಿವಾಸಿಗಳು. ಇಬ್ಬರ ನಡುವೆ ಹಣಕಾಸಿನ ವ್ಯವಹಾರ (ಚೀಟಿ) ಇತ್ತು. ಹಣ ನೀಡುವ ವಿಚಾರಕ್ಕೆ ಗಲಾಟೆ ನಡೆದು ಗಿರಿಜಮ್ಮ ಮನೆಯಲ್ಲಿ ಮಲಗಿದ್ದ ವೇಳೆ ಶಾಂತಮ್ಮ ಮನೆಗೆ ನುಗ್ಗಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾರೆ. ಗಿರಿಜಮ್ಮ ಒಂಟಿಯಾಗಿ ಮನೆಯಲ್ಲಿ ವಾಸವಾಗಿದ್ದರು ಎಂದು ಮೂಲಗಳು ತಿಳಿಸಿವೆ.

ಘಟನೆ ಸಂಬಂಧ ಪೊಲೀಸರಿಗೆ ಮಾಹಿತಿ ನೀಡಲಾಗಿದ್ದು, ಪೊಲೀಸರೇ ಗಿರಿಜಮ್ಮ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಆದರೆ, ಕೊಲೆಯತ್ನ ಪ್ರಕರಣ ದಾಖಲಾಗಿದ್ದರೂ ಶಾಂತಮ್ಮ ಅವರಿಂದ ಬರೀ ಹೇಳಿಕೆ ಪಡೆದು ಮನೆಗೆ ಕಳುಹಿಸಲಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

'ಮಹಿಳೆಯರ ಮೇಲೆ ಭ್ರಷ್ಟಾಚಾರ ಪರಿಣಾಮದ ಚರ್ಚೆ'

ನವದೆಹಲಿ(ಪಿಟಿಐ): ಜಿ–20 ಶೃಂಗಸಭೆಯ ಭ್ರಷ್ಟಾಚಾರ ವಿರೋಧಿ ಕಾರ್ಯಕಾರಿ ಸಮಿತಿ ಸಭೆ ಹೃಷಿಕೇಶದಲ್ಲಿ ಗುರುವಾರ ನಡೆಯಲಿದ್ದು, ಮಹಿಳೆಯರ ಮೇಲೆ ಭ್ರಷ್ಟಾಚಾರದ ಪರಿಣಾಮ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆ ನಡೆಯಲಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ನಿಧನ ವಾರ್ತೆ

ಕೆ.ಜಿ.ರಾಜಪ್ಪ



ನೆಲಮಂಗಲ: ನಿವೃತ್ತ ಮುಖ್ಯಶಿಕ್ಷಕ ಪಟ್ಟಣದ ನಿವಾಸಿ ಕೆ.ಜಿ.ರಾಜಪ್ಪ(75) ಬುಧವಾರ ಬೆಳಗಿನ ಜಾವ ನಿಧನರಾಗಿದ್ದಾರೆ.

ಸಂಜೆ ತ್ಯಾಮಗೊಂಡ್ಲು ಹೋಬಳಿ ಕೋಡಿಹಳ್ಳಿಯಲ್ಲಿ ಅಂತ್ಯ ಸಂಸ್ಕಾರ ನಡೆಯಿತು. ಮೃತರಿಗೆ ಶಂಕರಬಿದರಿ ಯುವ ಬ್ರಿಗೇಡ್ ಹಾಗೂ ವಿಜಯಸೇನೆ ರಾಜ್ಯಾಧ್ಯಕ್ಷ ಸಚ್ಚಿದಾನಂದಮೂರ್ತಿ ಸೇರಿದಂತೆ ಮೂವರು ಪುತ್ರಿಯರು ಇದ್ದಾರೆ

ತುಂಬಿದ ಹೂಳು • ಕುಗ್ಗಿದ ನೀರು ಸಂಗ್ರಹ ಸಾಮರ್ಥ್ಯ • ನಾಗರಿಕರ ಆತಂಕ

ಹೊಸಕೆರೆಗೆ ಒಳಚರಂಡಿ ನೀರು

• ರಂಗಸ್ವಾಮಿ ಕಣಿಯರ್

ಕೆಂಗೇರಿ: ಹಲವು ದಶಕಗಳ ಕಾಲ ಕೆಂಗೇರಿ ಸುತ್ತಮುತ್ತ ನಾಗರಿಕರಿಗೆ ಜೀವಜಲವಾಗಿದ್ದ ಹೊಸಕೆರೆಯು ಈಗ ಒಳಚರಂಡಿ ನೀರು, ಹೂಳು, ಜೊಂಡು ಹಾಗೂ ತ್ಯಾಜ್ಯ ವಸ್ತುಗಳಿಂದ ಕಲುಷಿತಗೊಂಡಿದೆ.

ಸುಮಾರು ಒಂದು ಕಿಲೋ ಮೀಟರಿಗೂ ಹೆಚ್ಚು ಉದ್ದನೆಯ ಅಚ್ಚುಕಟ್ಟು ಪ್ರದೇಶ ಹೊಂದಿರುವ ಕೆಂಗೇರಿ ಹೊಸಕೆರೆ, ನಿರ್ವಹಣೆ ಕೊರತೆಯಿಂದ ಅವಸಾನದತ್ತ ತಲುಪಿದೆ. ಕೆರೆಯ ಒಡಲು ಹೂಳಿನಿಂದ ಆವೃತವಾಗಿದೆ. ಕೆರೆ ತುಂಬೆಲ್ಲಾ ಜೊಂಡು ಬೆಳೆದು ನಿಂತಿದೆ. ಸಂಗ್ರಹ ಸಾಮರ್ಥ್ಯ ಕುಂಠಿತಗೊಂಡು, ಕಳೆದ ಮೂರು ದಿನಗಳಿಂದ ಸುರಿಯುತ್ತಿರುವ ಮಳೆ ನೀರು ಕೂಡ ಪೋಲಾಗುತ್ತಿದೆ. ಇದರೊಂದಿಗೆ ಒಳಚರಂಡಿ ನೀರು ಸಹ ಕೆರೆಯ ಒಡಲು ಸೇರುತ್ತಿದೆ. ಕೆರೆಯ ನೀರಿನಲ್ಲಿ ನೊರೆ ಕಂಡು ಬರುತ್ತಿದ್ದು, ಇದು ಸುತ್ತಮುತ್ತ ನಾಗರಿಕರ ಆತಂಕಕ್ಕೆ ಕಾರಣವಾಗಿದೆ.

ಕೆರೆ ಅಭಿವೃದ್ಧಿಗೆ ಈಗಾಗಲೇ ಎರಡು ಬಾರಿ ಅನುದಾನ ಬಿಡುಗಡೆಯಾಗಿದೆ. ಕೆಲ ವರ್ಷಗಳ ಹಿಂದೆ ₹ 3 ಕೋಟಿ ವೆಚ್ಚದಲ್ಲಿ ಕೆರೆಗೆ ಕಾಯಕಲ್ಪ ನೀಡಲಾಗಿತ್ತಾದರೂ ಯಾವುದೇ ಸುಧಾರಣೆಯಾಗಿರಲಿಲ್ಲ. ಕಳೆದ ಮಾರ್ಚ್ ತಿಂಗಳಲ್ಲಿ ₹ 8.8 ಕೋಟಿ ವೆಚ್ಚದಲ್ಲಿ ಕೆರೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿತ್ತು.



ಕೆರೆಯಲ್ಲಿ ತುಂಬಿರುವ ಜೊಂಡು ಹಾಗೂ ತ್ಯಾಜ್ಯ ವಸ್ತುಗಳು

ಮುಖ್ಯಾಂಶಗಳು

- ಕೆಂಗೇರಿ ಸುತ್ತಮುತ್ತ ನಾಗರಿಕರಿಗೆ ಜೀವಜಲ ಆಗಿದ್ದ ಹೊಸಕೆರೆ
- ನಿರ್ವಹಣೆ ಕೊರತೆಯಿಂದ ಅವಸಾನದತ್ತ

ನಿಧಾನಗತಿಯ ಕಾಮಗಾರಿಯಿಂದ ಕೆರೆ ಪುನಶ್ಚೇತನ ಕಾರ್ಯಕ್ಕೆ ಹಿನ್ನಡೆಯಾಗಿದೆ.

ಆರೋಪ-ಪ್ರತ್ಯಾರೋಪ: ಕೆರೆಯಲ್ಲಿ ಕಂಡು ಬರುತ್ತಿರುವ ನೊರೆ ಬಗ್ಗೆ ಪ್ರತಿಕ್ರಿಯೆ ನೀಡಿದ ಬಿಬಿಎಂಪಿ ಕೆರೆ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಪಾಲಕ ಎಂಜಿನಿಯರ್ ಗೀತಾ, 'ಜಲಮಂಡಳಿ ನಿರ್ಲಕ್ಷ್ಯದಿಂದ ಕೊಳಚೆ ನೀರು ಕೆರೆಗೆ ಸೇರಿ, ಇಂತಹ ಅವಘಡಗಳು ಸಂಭವಿಸುತ್ತಿದೆ' ಎಂದು ದೂರಿದರು.

ಜಲಮಂಡಳಿ ಕಾರ್ಯಪಾಲಕ ಎಂಜಿನಿಯರ್ ನವನೀತ್, 'ಹೆಚ್ಚುವರಿ ಮಳೆಯಾದಾಗ ಇಂತಹ ಅವಘಡಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಒಳಚರಂಡಿ ನೀರಿನೊಂದಿಗೆ ಮೇಲ್ಚಾವಣಿ ನೀರು ಸೇರಿದರೆ ಮ್ಯಾನ್ ಹೋಲ್‌ಗಳು ಒಡೆದು, ಕೊಳಚೆ ನೀರು ಕೆರೆ ಕಟ್ಟೆಗಳಿಗೆ ಸೇರುತ್ತದೆ. ಮಳೆ ನೀರು ಸಂಗ್ರಹಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ಕ್ರಮ ವಹಿಸಬೇಕು' ಎಂದರು.

20 ಅಡಿಗೆ ಕುಸಿದ ಆಳದ ಮಟ್ಟ

'ಹೊಸಕೆರೆಯು ಸುಮಾರು 48 ಅಡಿ ಆಳ ಹೊಂದಿತ್ತು. ಈ ಮೂಲಕ ನಗರದಲ್ಲೇ ಅತ್ಯಂತ ಆಳವಾದ ಕೆರೆ ಎಂಬ ಖ್ಯಾತಿಗೆ ಪಾತ್ರವಾಗಿತ್ತು. ದಿನ ಕಳೆದಂತೆ ಹೂಳು ತುಂಬಿ, ಕೆರೆಯ ಆಳ ಕೇವಲ 20 ಅಡಿಗೆ ಕುಸಿದಿದೆ. ನೀರು ಸಂಗ್ರಹ ಸಾಮರ್ಥ್ಯವೂ ಕುಗ್ಗಿದೆ. ಸುತ್ತಮುತ್ತಲ ಪ್ರದೇಶದ ಅಂತರ್ಜಲ ಮಟ್ಟವೂ ಕ್ಷೀಣಿಸುತ್ತಿದೆ' ಎಂದು ಸ್ಥಳೀಯ ಮೀನುಗಾರ ತಾತಾರಾವ್ ಬೇಸರ ವ್ಯಕ್ತಪಡಿಸಿದರು.

'ಜಲಮಂಡಳಿ ನಿರ್ಲಕ್ಷ್ಯದಿಂದ ಕೆರೆಯ ಒಡಲು ಕಲುಷಿತಗೊಳ್ಳುತ್ತಿದೆ. ಅನುದಾನ ಬಿಡುಗಡೆಯಾದರೂ ವೇಗವಾಗಿ ಕಾಮಗಾರಿ ನಡೆಯುತ್ತಿಲ್ಲ. ಕೊಳಚೆ ನೀರು ಸೇರದಂತೆ ಬಿಬಿಎಂಪಿ ಹಾಗೂ ಜಲಮಂಡಳಿ ಅಧಿಕಾರಿಗಳು ಗುಣಮಟ್ಟದ ಕಾಮಗಾರಿಗೆ ಮುಂದಾಗಬೇಕು' ಎಂದು ಕೆರೆ ಭೂ ಸಂರಕ್ಷಣಾ ಸಮಿತಿ ಅಧ್ಯಕ್ಷ ಎನ್. ಕದರಪ್ಪ ಆಗ್ರಹಿಸಿದರು.

ಸುದ್ದಿ 2 ನಿಮಿಷ

ನೀರೆಂದು ಭಾವಿಸಿ ಆ್ಯಸಿಡ್ ಸೇವನೆ: ಸುಟ್ಟ ಬಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಂಗೇರಿಯ ಐಷಾರಾಮಿ ಹೋಟೆಲ್‌ವೊಂದರಲ್ಲಿ ಬಾಟಲಿಯಲ್ಲಿ ನೀರಿನ ಬದಲಿಗೆ ಆ್ಯಸಿಡ್ ತುಂಬಿಸಿದ್ದು, ಅದನ್ನು ಸೇವಿಸಿದ ಗ್ರಾಹಕರೊಬ್ಬರ ಬಾಯಿ ಸುಟ್ಟು ಹೋಗಿದೆ. ಘಟನೆ ಸಂಬಂಧ ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಶೋ ಮಿತ್ತಲ್ (45) ಅವರು ತಮ್ಮ ಪುತ್ರ ಶ್ರೂ ರುದ್ರಾಕ್ಷ್‌ನನ್ನು ನಗರದ ಕುಂಬಳಗೂಡು ಬಳಿಯ ಕ್ರೈಸ್ಟ್ ವಿ.ವಿ ಕಾಲೇಜಿಗೆ ಪ್ರವೇಶ ಕಲ್ಪಿಸಲು ದೆಹಲಿಯಿಂದ ಬೆಂಗಳೂರಿಗೆ ವಿಮಾನದಲ್ಲಿ ಬಂದಿದ್ದರು. ವಿಮಾನ ನಿಲ್ದಾಣದಿಂದ ಮುಂಗಡ ಪಾವತಿಯ ಕ್ಯಾಬ್ ಬುಕ್ ಮಾಡಿಕೊಂಡು ಕೆಂಗೇರಿ ಸಮೀಪದ ಮೈಸೂರು ರಸ್ತೆಯ ರಾಯಲ್ ಐರಾವತ್ ರೆಸಿಡೆನ್ಸಿ ಹೋಟೆಲ್‌ಗೆ ಬಂದು ಕೊಠಡಿ ಪಡೆದು ಅಲ್ಲಿಯೇ ಸ್ನಾನ ಮಾಡಿ ಕೊಠಡಿಯಲ್ಲಿದ್ದ ನೀರಿನ ಬಾಟಲ್ ಅನ್ನು ತೆಗೆದುಕೊಂಡು ಅದೇ ಕ್ಯಾಬ್‌ನಲ್ಲಿ ಕಾಲೇಜಿಗೆ ತೆರಳಿದ್ದರು. ಕಾಲೇಜು ಬಳಿ ಬಾಯಾರಿಕೆ ನೀಗಿಸಿಕೊಳ್ಳಲು ಹೋಟೆಲ್‌ನಿಂದ ತಂದಿದ್ದ ನೀರಿನ ಬಾಟಲ್ ತೆಗೆದು ನೀರು ಸೇವಿಸಿದ್ದಾರೆ. ಆಗ ಅವರಿಗೆ ಬಾಯಿ ಸುಟ್ಟ ಅನುಭವವಾಗಿದೆ. ತಕ್ಷಣವೇ ಕ್ರೈಸ್ಟ್ ಯುನಿವರ್ಸಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಬಾಟಲಿ ಪರಿಶೀಲಿಸಿದಾಗ ಆ್ಯಸಿಡ್ ಎಂಬುದು ಗೊತ್ತಾಗಿದೆ. ಆ್ಯಸಿಡ್ ತುಂಬಿಸಿಟ್ಟವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಶೋ ಮಿತ್ತಲ್ ಅವರು ದೂರು ನೀಡಿದ್ದಾರೆ.

'ಹೋಟೆಲ್ ಕೊಠಡಿಯಲ್ಲಿ ಆ್ಯಸಿಡ್ ಹೇಗೆ ಬಂದಿದೆ ಎಂಬುದರ ಕುರಿತು ಹೋಟೆಲ್ ಸಿಬ್ಬಂದಿಯನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಅಥವಾ ಅಶೋ ಅವರು ಬೇರೆ ಎಲ್ಲಿಯಾದರೂ ನೀರಿನ ಬಾಟಲ್ ಖರೀದಿಸಿದರೇ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿಧಾನಸೌಧ ಬಳಿ ಯುವತಿ ಅಪಹರಣಕ್ಕೆ ಯತ್ನ: ಇಬ್ಬರು ವಶಕ್ಕೆ



ಬೆಂಗಳೂರು: ವಿಧಾನಸೌಧ ಎದುರೇ ಬುಧವಾರ ರಾತ್ರಿ ಯುವತಿಯ ಅಪಹರಣಕ್ಕೆ ಮುಂದಾಗಿದ್ದ ಇಬ್ಬರು ಆರೋಪಿಗಳನ್ನು ಕೇಂದ್ರೀಯ ಭದ್ರತಾ ಪಡೆಯ ಸಿಬ್ಬಂದಿ ಹಿಡಿದು ವಿಧಾನಸೌಧ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಯುವತಿಯನ್ನು ಮೆಟ್ರೊ ನಿಲ್ದಾಣ ಭದ್ರತೆಗೆ ನಿಯೋಜಿಸಿದ್ದ ಕೇಂದ್ರೀಯ ಮೀಸಲು ಪಡೆಯ ಸಿಬ್ಬಂದಿ ರಕ್ಷಿಸಿ ಕುಟುಂಬಸ್ಥರ ಜತೆಗೆ ಕಳುಹಿಸಿದ್ದಾರೆ. ಆರೋಪಿಗಳಾದ ಜಗದೀಶ್ ಮತ್ತು ಜಗನ್ ಅವರನ್ನು ವಶಕ್ಕೆ ಪಡೆದಿರುವ ವಿಧಾನಸೌಧ ಠಾಣೆ ಪೊಲೀಸರು ವಿಚಾರಣೆ ನಡೆಸಿದ್ದಾರೆ.

'ಕೆಲಸ ಮುಗಿಸಿಕೊಂಡು ಯುವತಿ ಮನೆಗೆ ತೆರಳುತ್ತಿದ್ದರು. ಆಗ ಕಾರಿನಲ್ಲಿ ಬಂದ ಆರೋಪಿಗಳು ಆಕೆಯನ್ನು ಕಾರಿಗೆ ಹತ್ತಿಸಿಕೊಳ್ಳಲು ಯತ್ನಿಸಿದ್ದಾರೆ. ಯುವತಿ ಕಿರುಚಿದಾಗ ಸ್ಥಳದಲ್ಲಿದ್ದ ಭದ್ರತಾ ಸಿಬ್ಬಂದಿ ಯುವತಿಯನ್ನು ರಕ್ಷಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಸಂಬಂಧಿಯಿಂದ ಕೃತ್ಯ?: 'ಯುವತಿ ತಂದೆ ಇತ್ತೀಚೆಗೆ ನಿಧನರಾಗಿದ್ದರು. ಅನುಕಂಪದ ಆಧಾರದಲ್ಲಿ ತಂದೆಯ ಕೆಲಸ ಮಗಳಿಗೆ ಸಿಕ್ಕಿತ್ತು. ಯುವತಿಯ ತಂದೆಯ ಎರಡನೇ ಪತ್ನಿಗೆ ಅನುಕಂಪದ ಕೆಲಸ ಸಿಗಬೇಕೆಂದು ಆಕೆಯ ಸಹೋದರ ಗಲಾಟೆ ನಡೆಸುತ್ತಿದ್ದ. ಜತೆಗೆ, ಈ ಯುವತಿಯನ್ನು ಮದುವೆ ಆಗುವಂತೆಯೂ ಪೀಡಿಸುತ್ತಿದ್ದ. ಯುವತಿಗೆ ಇಷ್ಟ ಇರಲಿಲ್ಲ ಎನ್ನಲಾಗಿದೆ' ಎಂದು ಪೊಲೀಸರು ಹೇಳಿದರು.

ಅರಣ್ಯಾಧಿಕಾರಿಗಳ ಮೇಲೆ ಕ್ರಮದ ತೂಗುಗತ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಗೋವಾ–ಕುಂದಾಪುರ ನಡುವಿನ ರಾಷ್ಟ್ರೀಯ ಹೆದ್ದಾರಿಯ ಚತುಷ್ಪಥ ಕಾಮಗಾರಿ ವೇಳೆ ಟೋಲ್ ಪ್ಲಾಜಾ ನಿರ್ಮಾಣಕ್ಕೆ ಅರಣ್ಯ ಸಂರಕ್ಷಣಾ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿ 6 ಎಕರೆ (2.46 ಹೆಕ್ಟೇರ್) ಅರಣ್ಯ ಬಳಕೆಗೆ ಅನುಮತಿ ನೀಡಿದ ಪ್ರಕರಣದ ಕುರಿತು ಸಮಗ್ರ ವರದಿ ಹಾಗೂ ಅಧಿಕಾರಿಗಳ ವಿವರಗಳನ್ನು ನೀಡುವಂತೆ ಕರ್ನಾಟಕ ಸರ್ಕಾರಕ್ಕೆ ಕೇಂದ್ರ ಪರಿಸರ, ಅರಣ್ಯ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ನಿರ್ದೇಶಿಸಿದೆ.

ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವ ಸಚಿವಾಲಯದ ಉಪ ಮಹಾನಿರ್ದೇಶಕರು, 'ಕರ್ನಾಟಕ ಸರ್ಕಾರವು ಈ ಹಿಂದೆ ಸಲ್ಲಿಸಿರುವ ವರದಿ ಅಪೂರ್ಣವಾಗಿದೆ. ನಿಯಮ ಉಲ್ಲಂಘನೆಯ ಕುರಿತ ಸಮಗ್ರ ವರದಿ ಹಾಗೂ ನಿಯಮ ಉಲ್ಲಂಘಿಸಿದ ಅರಣ್ಯ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಹೆಸರುಗಳನ್ನು ಇದೇ 31ರೊಳಗೆ ಸಲ್ಲಿಸಬೇಕು' ಎಂದು ಸೂಚಿಸಿದ್ದಾರೆ.

ರೋಡಿಕ್ ಕನ್ಸಲ್ಟೆಂಟ್ ಕಂಪನಿಯ ಎಂಜಿನಿಯರ್, ಎಕಾಮ್ ಏಷ್ಯಾ ಕಂಪನಿಯ ಇಬ್ಬರು ಎಂಜಿನಿಯರ್ ಲೋಪ ಎಸಗಿದ್ದಾರೆ ಎಂದು ಇಲಾಖೆ ಸಚಿವಾಲಯಕ್ಕೆ ವರದಿ ನೀಡಿತ್ತು.

ವಿವಿಧ ಜಯಂತಿಗಳ ದಿನಾಂಕ, ಸ್ಥಳ ನಿಗದಿ

ಬೆಂಗಳೂರು:2023–24 ನೇ ಸಾಲಿನಲ್ಲಿ ಜಿಲ್ಲಾಡಳಿತಗಳ ಮೂಲಕ ವಿವಿಧ ಮಹಾಪುರುಷರ ಜಯಂತಿಗಳನ್ನು ರಾಜ್ಯಮಟ್ಟದಲ್ಲಿ ಎಲ್ಲೆಲ್ಲಿ ಆಚರಿಸಬೇಕು ಎಂದು ಸೂಚನೆ ನೀಡಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆದೇಶ ಹೊರಡಿಸಿದೆ.

ರಾಜ್ಯ ಮಟ್ಟದ ಕಾರ್ಯಕ್ರಮಕ್ಕೆ ₹5 ಲಕ್ಷ, ಜಿಲ್ಲಾ ಮಟ್ಟದ ಕಾರ್ಯಕ್ರಮಕ್ಕೆ ₹50 ಸಾವಿರ ಮತ್ತು ತಾಲ್ಲೂಕು ಮಟ್ಟದ ಕಾರ್ಯಕ್ರಮಕ್ಕೆ ₹20 ಸಾವಿರ ನಿಗದಿ ಮಾಡಲಾಗಿದೆ.

ಜಯಂತಿ	ದಿನಾಂಕ	ಜಿಲ್ಲೆ
ನಾಲ್ವಡಿ ಕೃಷ್ಣರಾಜ ಒಡೆಯರ್	04.06.23	ಮಂಡ್ಯ
ಕೆಂಪೇಗೌಡ	27.06.23	ಹಾಸನ
ಫ.ಗು.ಹಳಕಟ್ಟಿ	02.07.23	ವಿಜಯಪುರ
ಹಡಪದ ಅಪ್ಪಣ್ಣ	03.07.23	ಧಾರವಾಡ
ನುಲಿಯ ಚಂದಯ್ಯ	31.08.23	ಬೆಂಗಳೂರು(ಗ್ರಾ)
ಬ್ರಹ್ಮಶ್ರೀ ನಾರಾಯಣಗುರು	31.08.23	ಉಡುಪಿ
ಶ್ರೀಕೃಷ್ಣ	06.09.23	ದಕ್ಷಿಣಕನ್ನಡ
ವಿಶ್ವಕರ್ಮ	17.09.23	ವಿಜಯನಗರ
ಕಿತ್ತೂರು ರಾಣಿ ಚನ್ನಮ್ಮ	23.10.23	ಬೆಳಗಾವಿ
ಒನಕೆ ಓಬವ್ವ	11.11.23	ದಾವಣಗೆರೆ
ಕನಕ ಜಯಂತಿ	30.11.23	ಗದಗ
ವಿಶ್ವಮಾನವ ದಿನಾಚರಣೆ	29.12.23	ಮೈಸೂರು
ಅಮರಶಿಲ್ಪಿ ಜಕಣಾಚಾರಿ ದಿನ	01.01.24	ತುಮಕೂರು
ಶಿವಯೋಗಿ ಸಿದ್ಧರಾಮ	15.01.24	ಚಿತ್ರದುರ್ಗ
ಮಹಾಯೋಗಿ ವೇಮನ	19.01.24	ರಾಯಚೂರು
ಅಂಬಿಗರ ಚೌಡಯ್ಯ	21.01.24	ಕಾರವಾರ
ಸವಿತಾ ಮಹರ್ಷಿ	ರಥಸಪ್ತಮಿ ದಿನ	ಚಿಕ್ಕಬಳ್ಳಾಪುರ
ಮಡಿವಾಳ ಮಾಚಿದೇವ	01.02.24	ರಾಮನಗರ
ಸಂತ ಸೇವಾಲಾಲ್	15.02.24	ಯಾದಗಿರಿ
ಕಾಯಕ ಶರಣರ ಜಯಂತಿ	ಮಹಾಶಿವರಾತ್ರಿ	ಕೊಪ್ಪಳ
ಛತ್ರಪತಿ ಶಿವಾಜಿ	19.02.24	ಬಾಗಲಕೋಟೆ
ಸಂತಕವಿ ಸರ್ವಜ್ಞ	20.02.24	ಕೊಡಗು
ಯೋಗಿ ನಾರೇಯಣ	ಪಾಲ್ಗುಣ ಮಾಸದ ಹುಣ್ಣಿಮೆ	ಕೋಲಾರ
ರೇಣುಕಾಚಾರ್ಯ	16.03.24	ಹಾವೇರಿ
ದೇವರದಾಸಿಮಯ್ಯ	2024 ನೇ ಕ್ಯಾಲೆಂಡರ್ ಅನ್ವಯ	ಕಲಬುರಗಿ

ಮಕ್ಕಳ ಕಸ್ಟಡಿ ಪ್ರಕರಣ: ವಿಭಾಗೀಯ ಪೀಠದ ಆದೇಶ

ಹೇಬಿಯಸ್ ಕಾರ್ಪಸ್ ಸ್ವೀಕಾರಾರ್ಹವಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳ ಕಸ್ಟಡಿ ಪ್ರಕರಣಗಳಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿಗಳು ಸ್ವೀಕಾರಾರ್ಹವಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, 'ಮಕ್ಕಳ ಕಸ್ಟಡಿ ಪ್ರಕರಣಗಳಲ್ಲಿ ಸೋಲುವ ಪೋಷಕರಿಗೆ ಸಾಕಷ್ಟು ಭೇಟಿಯ ಹಕ್ಕು ನೀಡಬೇಕಾಗುತ್ತದೆ. ಆ ಮೂಲಕ ಮಗು ತಂದೆಯ ಜತೆ ಸಾಮಾಜಿಕ, ಭೌತಿಕ ಸಂಪರ್ಕ ಕಳೆದುಕೊಳ್ಳದಂತೆ ನೋಡಿಕೊಳ್ಳಬೇಕಾಗುತ್ತದೆ' ಎಂದು ಹೇಳಿದೆ.

'ನನ್ನ ಅಪ್ರಾಪ್ತ ವಯಸ್ಸಿನ ಮಗನನ್ನು ಕೋರ್ಟ್ ಮುಂದೆ ಹಾಜರುಪಡಿಸಲು ನಿರ್ದೇಶಿಸಬೇಕು' ಎಂದು ಕೋರಿ ತಂದೆಯೊಬ್ಬರು ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಲೋಕ್ ಅರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.



'ಮಗುವಿನ ಭೇಟಿ ಹಕ್ಕು, ಕಸ್ಟಡಿ ಮತ್ತು ಪೋಷಕತ್ವಕ್ಕೆ ಸಂಬಂಧಿಸಿದಂತೆ ಪತಿಯೊಂದಿಗೆ ಮಾಡಿಕೊಂಡಿರುವ ಒಪ್ಪಂದವನ್ನು ಪಾಲನೆ ಮಾಡಬೇಕು' ಎಂದು ಪತ್ನಿಗೆ ನಿರ್ದೇಶಿಸಿರುವ ನ್ಯಾಯಪೀಠ, 'ಬೇಸಿಗೆ ರಜೆಯಲ್ಲಿ ಮಗುವನ್ನು ತಂದೆಯ ವಶಕ್ಕೆ ಒಪ್ಪಿಸಬೇಕು' ಎಂದು ಆದೇಶಿಸಿದೆ.

ಪ್ರಕರಣವೇನು?: ದಂಪತಿ 2011ರಲ್ಲಿ ಬೆಂಗಳೂರಿನಲ್ಲಿ ಮದುವೆಯಾಗಿದ್ದರು. ಕೌಟುಂಬಿಕ ವ್ಯಾಜ್ಯದ ಹಿನ್ನೆಲೆಯಲ್ಲಿ 2014ರ ನಂತರ ಇಬ್ಬರೂ ದೂರವಾದರು. ನಂತರ ಪತ್ನಿ, ಸಿಆರ್‌ಪಿಸಿ ಕಲಂ 125ರ ಅಡಿ, 'ನನಗೆ ಮತ್ತು ಮಗುವಿಗೆ ಜೀವನಾಂಶ ನೀಡಬೇಕು' ಎಂದು ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆದರೆ, ಪತಿ ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ವೇಳೆ ಇಬ್ಬರೂ ಸೌಹಾರ್ದಯುತವಾಗಿ ಪ್ರಕರಣ ಬಗೆಹರಿಸಿಕೊಳ್ಳುವುದಾಗಿ ಒಪ್ಪಂದ ಮಾಡಿಕೊಂಡಿದ್ದರು. ಅದರನ್ವಯ ಮಗುವನ್ನು ಪತ್ನಿಯ ಸುಪರ್ದಿಗೆ ನೀಡಿ, ಪತಿಗೆ ಮಗುವಿನ ಭೇಟಿಯ ಹಕ್ಕು ನೀಡಲಾಗಿತ್ತು.

'ಜನಪ್ರತಿನಿಧಿಗಳಿಂದ ಕನ್ನಡದ ಅಸ್ಮಿತೆಗೆ ಧಕ್ಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಲವು ಜನಪ್ರತಿನಿಧಿಗಳು ನಾಡು-ನುಡಿಯ ಅಭಿಮಾನ ಮರೆತು, ಕನ್ನಡದ ಅಸ್ಮಿತೆಗೆ ಧಕ್ಕೆ ತರುವಂತೆ ವರ್ತಿಸುತ್ತಿದ್ದಾರೆ. ಕನ್ನಡ ಭಾಷೆ, ಸಂಸ್ಕೃತಿಯನ್ನು ಕಡೆಗಣಿಸುವುದು ಸ್ವಂತ ತಾಯಿಯನ್ನು ಕಡೆಗಣಿಸಿದಂತೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಬೇಸರ ವ್ಯಕ್ತಪಡಿಸಿದ್ದಾರೆ.

'ನೂತನವಾಗಿ ಆಯ್ಕೆಯಾಗಿರುವ ಶಾಸಕರು ಹಾಗೂ ಸಚಿವರಲ್ಲಿ ಕೆಲವರು ಪ್ರಮಾಣವಚನದ ವೇಳೆ ಕನ್ನಡ ಭಾಷೆಯನ್ನು ಕಡೆಗಣಿಸಿ, ಅನ್ಯಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಿರುವುದು ಅಕ್ಷಮ್ಯ. ಇದನ್ನು ಕನ್ನಡಿಗರು ಹಾಗೂ ಕಸಾಪ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಜಮೀರ್ ಅಹಮ್ಮದ್ ಖಾನ್ ಅವರು ಇಂಗ್ಲಿಷ್‌ನಲ್ಲಿ ಪ್ರಮಾಣ ಸ್ವೀಕರಿಸಿದ್ದಾರೆ. ಅವರು ಪ್ರತಿನಿಧಿಸುತ್ತಿರುವ ಚಾಮರಾಜಪೇಟೆ ಕ್ಷೇತ್ರದಲ್ಲೇ ಪರಿಷತ್ತಿನ ಕೇಂದ್ರ ಕಚೇರಿ ಇದ್ದು, ಅವರಿಗೆ ಕನ್ನಡದ ಬಗ್ಗೆ ಅಭಿಮಾನ ಇಲ್ಲದಿರುವುದು ಬೇಸರದ ಸಂಗತಿ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ನೂತನವಾಗಿ ಆಯ್ಕೆಯಾಗಿ, ಪ್ರಮಾಣವಚನ ಸ್ವೀಕರಿಸಿರುವ ಶಾಸಕರಲ್ಲಿ ನಾಲ್ವರು ಕನ್ನಡ ಭಾಷೆಯನ್ನು ಕಡೆಗಣಿಸಿದ್ದಾರೆ' ಎಂದು ಆರೋಪಿಸಿದ್ದಾರೆ.



ಸಾಮೂಹಿಕ ವಿವಾಹ

ಶ್ರೀರಾಮನಹಳ್ಳಿಯಲ್ಲಿರುವ ಕೇಂದ್ರ ಗ್ರಾಮಾಭಿವೃದ್ಧಿ ಮಂಡಳಿ ಹಾಗೂ ಪೀಪಲ್ ಟ್ರಸ್ಟ್ ಸೇವಾಕೇಂದ್ರ ಜಂಟಿಯಾಗಿ ಯಲಹಂಕದಲ್ಲಿ ಆಯೋಜಿಸಿದ್ದ 20ನೇ ವರ್ಷದ ಉಚಿತ ಸಾಮೂಹಿಕ ವಿವಾಹದಲ್ಲಿ 16 ಜೋಡಿ ನೂತನ ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಏರ್‌ಕ್ರಾಫ್ಟ್ ಸೊಸೈಟಿ ಅಧ್ಯಕ್ಷ, 6 ನಿರ್ದೇಶಕರಿಗೆ ಜೈಲು

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಹೈಕೋರ್ಟ್‌ನ ಮಧ್ಯಂತರ ಆದೇಶ ಉಲ್ಲಂಘಿಸಿ ಸದಸ್ಯರಲ್ಲದ ವ್ಯಕ್ತಿಗಳಿಗೂ ಸೈಟು ಹಂಚಿಕೆ ಮಾಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ನಗರದ, 'ಏರ್‌ಕ್ರಾಫ್ಟ್ ಎಂಪ್ಲಾಯೀಸ್ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್' ಅಧ್ಯಕ್ಷ ಹಾಗೂ ಆರು ಮಂದಿ ನಿರ್ದೇಶಕರಿಗೆ ಹೈಕೋರ್ಟ್ ತಲಾ ಮೂರು ತಿಂಗಳ ಜೈಲು ಶಿಕ್ಷೆ ವಿಧಿಸಿದೆ.

ಸೊಸೈಟಿ ಸದಸ್ಯರಾದ ಎಂ. ಶಶಿಧರನ್ ಹಾಗೂ ವಿ. ಮುನಿಯಪ್ಪ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಹಾಗೂ ಎಂ.ಜಿ. ಉಮಾ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಸೊಸೈಟಿ ಅಧ್ಯಕ್ಷ ಕೆ.ಭೂಪಾಲ, ನಿರ್ದೇಶಕರಾದ ಎಸ್.ಎನ್.ಶಿವಮೂರ್ತಿ, ಸೋಮಣ್ಣ, ಎಸ್. ಸದಾಶಿವಪ್ಪ, ಕೆ.ಸಿ. ಸರಳಾ, ಡಿ. ಶ್ರೀನಿವಾಸ್ ಹಾಗೂ ಸಿ.ಎಚ್. ಶಂಕರ್ ಅವರನ್ನು ನ್ಯಾಯಪೀಠ ದೋಷಿಗಳೆಂದು ತೀರ್ಮಾನಿಸಿದೆ. ಎಲ್ಲ ಆರೋಪಿಗಳಿಗೂ ಮೂರು ತಿಂಗಳ ಸಾಧಾರಣ ಜೈಲು ಶಿಕ್ಷೆ ಹಾಗೂ ತಲಾ ₹ 2 ಸಾವಿರ ದಂಡ ವಿಧಿಸಿದೆ. 'ದಂಡ ಪಾವತಿಸಲು ವಿಫಲವಾದರೆ ಹೆಚ್ಚುವರಿ 15 ದಿನಗಳ ಶಿಕ್ಷೆ ಅನುಭವಿಸಬೇಕು' ಎಂದು ಆದೇಶದಲ್ಲಿ ವಿವರಿಸಲಾಗಿದೆ.

'ಹೈಕೋರ್ಟ್ ಏಕಸದಸ್ಯ ನ್ಯಾಯಪೀಠವು 2017ರಲ್ಲಿ ಹೊರಡಿಸಿದ್ದ ಮಧ್ಯಂತರ ಆದೇಶವನ್ನು ಉದ್ದೇಶಪೂರ್ವಕವಾಗಿಯೇ ಉಲ್ಲಂಘಿಸಿ, ಎರಡು ನಿವೇಶನಗಳನ್ನು ಸೊಸೈಟಿಯ ಸದಸ್ಯರಲ್ಲದ ಮೂರನೇ ವ್ಯಕ್ತಿಗಳಿಗೆ ಪರಭಾರೆ ಮಾಡಲಾಗಿದೆ. ಪ್ರಕರಣದ ಏಳೂ ಆರೋಪಿಗಳ ವಿರುದ್ಧದ ಆರೋಪಗಳು ಸಂಶಯಾತೀತವಾಗಿ ಸಾಬೀತಾಗಿವೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಕೋರಿಕೆ ಏನಿತ್ತು?: 'ಸಹಕಾರ ಸಂಘಗಳ ರಿಜಿಸ್ಟ್ರಾರ್ ಅವರಿಂದ ಸದಸ್ಯರ ಜ್ಯೇಷ್ಠತಾ ಪಟ್ಟಿಗೆ ಅನುಮೋದನೆ ಪಡೆಯದೆ ಸೊಸೈಟಿಯು, ಸದಸ್ಯರಲ್ಲದ ಮೂರನೇ ವ್ಯಕ್ತಿಗಳಿಗೆ 2020ರ ಮಾರ್ಚ್ 3ರಂದು ಎರಡು ನಿವೇಶನ ಮಾರಾಟ ಮಾಡಿದೆ. ಅವರಿಗೆ ಕ್ರಯ ಮಾಡಿಕೊಡುವ ಮೂಲಕ ಉದ್ದೇಶಪೂರ್ವಕವಾಗಿ ಏಕಸದಸ್ಯ ನ್ಯಾಯಪೀಠದ ಆದೇಶ ಉಲ್ಲಂಘಿಸಲಾಗಿದೆ. ಆದ್ದರಿಂದ, ಸಂಬಂಧಿಸಿದ ಆರೋಪಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ದೂರುದಾರರು ಕೋರಿದ್ದರು.

ಲಂಚ: ಮಹಿಳಾ ಪಿಎಸ್‌ಐ ಸಹಿತ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದಿರುವ ಕೌಟುಂಬಿಕ ಕಲಹದ ಆರೋಪಿಯೊಬ್ಬರ ಬಂಧನ ಮತ್ತು ಬಿಡುಗಡೆ ಪ್ರಕ್ರಿಯೆ ಪೂರ್ಣಗೊಳಿಸಲು ₹15,000 ಲಂಚ ಪಡೆದ ಆರೋಪದ ಮೇಲೆ ಶಿವಾಜಿನಗರ ಮಹಿಳಾ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಸವಿತಾ ಕನಮಡಿ ಮತ್ತು ಕಾನ್‌ಸ್ಟೆಬಲ್‌ಗಳ ಶೋಭಾ ತಲ್ವಾರ್, ಸೋಮಶೇಖರ್ ಅವರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ವ್ಯಕ್ತಿಯೊಬ್ಬರ ವಿರುದ್ಧ ಅವರ ಪತ್ನಿ ಶಿವಾಜಿನಗರ ಮಹಿಳಾ ಪೊಲೀಸ್ ಠಾಣೆಯಲ್ಲಿ ಕೌಟುಂಬಿಕ ದೌರ್ಜನ್ಯ ಆರೋಪದಡಿ ಪ್ರಕರಣ ದಾಖಲಿಸಿದ್ದರು. ಆರೋಪಿತರಿಗೆ ನ್ಯಾಯಾಲಯ ಷರತ್ತುಬದ್ಧ ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು. ನ್ಯಾಯಾಲಯದ ಆದೇಶದೊಂದಿಗೆ ಸವಿತಾ ಅವರನ್ನು ಮಂಗಳವಾರ ಭೇಟಿ ಮಾಡಿದ್ದ ಆರೋಪಿಯು, ಜಾಮೀನಿನಲ್ಲಿರುವ ಷರತ್ತುಗಳನ್ನು ಪೂರೈಸುವ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಮನವಿ ಮಾಡಿದ್ದರು.

'ನ್ಯಾಯಾಲಯದ ಆದೇಶದ ಪ್ರತಿಯನ್ನು ಎಸೆದಿದ್ದ ಪಿಎಸ್‌ಐ, ಬಂಧನ ಮತ್ತು ಬಿಡುಗಡೆ ಪ್ರಕ್ರಿಯೆ ಪೂರ್ಣಗೊಳಿಸಲು ₹ 20,000 ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದರು. ಆರೋಪಿಯು ಚೌಕಾಸಿ ನಡೆಸಿದಾಗ ₹15,000 ಕೊಡುವಂತೆ ಕೇಳಿದ್ದರು. ಮಂಗಳವಾರವೇ ಮುಂಗಡವಾಗಿ ₹10,000 ಪಡೆದಿದ್ದರು. ಬುಧವಾರ ₹5,000 ತಲುಪಿಸುವಂತೆ ಸೂಚಿಸಿದ್ದರು' ಎಂದು ಲೋಕಾಯುಕ್ತದ ಅಧಿಕಾರಿಗಳು ತಿಳಿಸಿದ್ದಾರೆ.

ಬುಧವಾರ ಸಂಜೆ ಶಿವಾಜಿ ನಗರ ಮಹಿಳಾ ಪೊಲೀಸ್ ಠಾಣೆಗೆ ಹೋದ ದೂರುದಾರರು ₹ 5,000 ಲಂಚದ ಹಣವನ್ನು ಪಿಎಸ್‌ಐಗೆ ತಲುಪಿಸಿದರು. ತಕ್ಷಣ ದಾಳಿ ಮಾಡಿದ ಲೋಕಾಯುಕ್ತ ಪೊಲೀಸರು, ಹಣದೊಂದಿಗೆ ಸವಿತಾ ಅವರನ್ನು ಬಂಧಿಸಿದರು ಎಂದು ಮಾಹಿತಿ ನೀಡಿದ್ದಾರೆ.

ಕಾನ್‌ಸ್ಟೆಬಲ್ ಗಿರೀಶ್ ಕೂಡ ಆರೋಪಿಯಾಗಿದ್ದು, ಕಾರ್ಯಾಚರಣೆ ವೇಳೆ ಅವರು ಸ್ಥಳದಲ್ಲಿ ಇರಲಿಲ್ಲ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಘಟಿಕೋತ್ಸವ

891 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ 891 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ನೀಡಲಾಯಿತು.

ಸೋಮವಾರ ನಡೆದ ಪದವಿ ಪ್ರದಾನ ಕಾರ್ಯಕ್ರಮದಲ್ಲಿ 2023ನೇ ಸಾಲಿನಲ್ಲಿ ಎಂಜಿನಿಯರಿಂಗ್ ಪದವಿ ಪೂರೈಸಿದ ವಿದ್ಯಾರ್ಥಿಗಳಿಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಉಪಕುಲಪತಿ ಎಸ್. ವಿದ್ಯಾಶಂಕರ್ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡಿದರು.

ನಂತರ ಮಾತನಾಡಿದ ಅವರು, 'ವಿದ್ಯಾರ್ಥಿಗಳು ಜ್ಞಾನ ಮತ್ತು ಹೊಸ ಕೌಶಲ್ಯಗಳನ್ನು ಅಳವಡಿಸಿಕೊಳ್ಳಬೇಕು. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ಕೈಗೊಳ್ಳಬೇಕು. ದಾವಣಗೆರೆಯಲ್ಲಿ ವಿಟಿಯುನ ಸ್ಟಾರ್ಟ್‌ಅಪ್ ಕ್ಯಾಂಪಸ್ ಪ್ರಾರಂಭವಾಗಲಿದೆ. ಪದವೀಧರರನ್ನು ಉದ್ಯಮಿಗಳನ್ನಾಗುವಂತೆ ಮಾಡುವುದೇ ಇದರ ಉದ್ದೇಶವಾಗಿದೆ. ಇದರಿಂದ, ಅವರು ಉದ್ಯೋಗವನ್ನು ಹುಡುಕುವ ಬದಲು ಉದ್ಯೋಗವನ್ನು ಸೃಷ್ಟಿಸಬಹುದು' ಎಂದು ಹೇಳಿದರು.



ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸೋಮವಾರ ನಡೆದ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ವಿಟಿಯು ಉಪಕುಲಪತಿ ಎಸ್. ವಿದ್ಯಾಶಂಕರ್ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಪ್ರಾಂಶುಪಾಲ ರಜತ್ ಹೆಗಡೆ ಎಂ.ಎಂ., ಸಿ.ಕೆ. ಮರಿಗೌಡ ಇದ್ದಾರೆ

ಪ್ರಾಂಶುಪಾಲ ರಜತ್ ಹೆಗಡೆ ಎಂ.ಎಂ. ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಸಂಸ್ಥೆಯ ಉಪಪ್ರಾಂಶುಪಾಲ ಸಿ.ಕೆ. ಮರಿಗೌಡ ವಾರ್ಷಿಕ ವರದಿಯನ್ನು ಮಂಡಿಸಿದರು.

ವಿಶ್ವವಿದ್ಯಾಲಯ ಮಟ್ಟದಲ್ಲಿ ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು ಸಂಯೋಜಿತ ಕಾಲೇಜುಗಳ ಶೈಕ್ಷಣಿಕ ಶ್ರೇಣಿಯಲ್ಲಿ ಎರಡನೇ ಸ್ಥಾನದಲ್ಲಿದೆ ಎಂದು ತಿಳಿಸಿದರು.

ಮಳೆ: ಶಿರಸಿ, ಬೆಳಗಾವಿಯ ವಿವಿಧೆಡೆ ವಿದ್ಯುತ್ ಕಂಬಗಳಿಗೆ ಹಾನಿ • ವಾಹನ ಸಂಚಾರ ಅಸ್ತವ್ಯಸ್ತ • ಮೂರು ಎತ್ತುಗಳು ಬಲಿ

ನೆಲಕಚ್ಚಿದ ಫಸಲು: ಸಿಡಿಲಿಗೆ ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರವೂ ಪೂರ್ವ ಮುಂಗಾರು ಮಳೆಯ ಅರ್ಭಟ ಮುಂದುವರಿದಿದ್ದು, ಸಿಡಿಲಿಗೆ ಕೃಷಿ ಕಾರ್ಮಿಕ ಮಹಿಳೆ ಸೇರಿದಂತೆ ಇಬ್ಬರು ಮೃತಪಟ್ಟಿದ್ದಾರೆ. ಮೂರು ಎತ್ತುಗಳು ಬಲಿಯಾಗಿವೆ. ಹಲವೆಡೆ ಅಡಿಕೆ, ಬಾಳೆ, ತೆಂಗಿನ ಮರಗಳು ನೆಲಕ್ಕುರುಳಿದ್ದು, ರೈತರು ಲಕ್ಷಾಂತರ ರೂಪಾಯಿ ನಷ್ಟ ಅನುಭವಿಸುವಂತಾಗಿದೆ.

ಬಾಗಲಕೋಟೆ ಜಿಲ್ಲೆಯ ಇಳಕಲ್ ತಾಲ್ಲೂಕಿನ ಬೆನಕನಡೋಣಿಯಲ್ಲಿ ಸಿಡಿಲು ಬಡಿದು ವಿಜಯಲಕ್ಷ್ಮಿ ಹಲಕಲ್ (36) ಎಂಬುವರು ಮೃತಪಟ್ಟಿದ್ದಾರೆ. ಹೊಲದ ಕೆಲಸ ಮುಗಿಸಿಕೊಂಡು ಮರಳಿ ಮನೆಗೆ ಬರುವಾಗ ಸಿಡಿಲು ಬಡಿದಿದೆ.

ಕಲಬುರಗಿ ಜಿಲ್ಲೆಯ ಚಿತ್ತಾಪುರ ಪಟ್ಟಣ ಹೊರವಲಯದಲ್ಲಿ ಸಿಡಿಲು ಬಡಿದು ದಿಗ್ಗಾಂವ ಗ್ರಾಮದ ಭೀಮಾಶಂಕರ ಸಾಬಣ್ಣ ನೀಲಹಳ್ಳಿ (25) ಎಂಬುವರು ಮೃತಪಟ್ಟಿದ್ದು, ಆರು ಮಂದಿ ಗಾಯಗೊಂಡಿದ್ದಾರೆ.

ಮೂರು ಎತ್ತುಗಳು ಬಲಿ: ಕಲಬುರಗಿ ಜಿಲ್ಲೆಯ ಕಾಳಗಿ ತಾಲ್ಲೂಕಿನ ಅರಣಕಲ್ ಗ್ರಾಮದಲ್ಲಿ ಸಿಡಿಲು ಬಡಿದು ಮಲ್ಲಪ್ಪ ಗುಂಡಪ್ಪ ರೇವಗ್ಗಿ ಎಂಬುವರಿಗೆ ಸೇರಿದ ಎತ್ತು ಸಾವನ್ನಪ್ಪಿದೆ. ಆಳಂದ ತಾಲ್ಲೂಕಿನ ಸನಗುಂದಾ ಗ್ರಾಮದ ರೈತ ಮಲ್ಲಿಕಾರ್ಜುನ ಮಗ್ಗಲಿನ ಅವರಿಗೆ ಸೇರಿದ ಎತ್ತು ಹಾಗೂ ಗೋಳಾ (ಬಿ) ಗ್ರಾಮದ ರೈತ ಖಾಜಾಸಾಬ ಚಾಂದಸಾಬ ಕೋಡಿ ಅವರ ಎತ್ತು ಸಿಡಿಲಿಗೆ ಬಲಿಯಾಗಿವೆ.

ಬೆಳಗಾವಿಯ ವಿವಿಧ ಬಡಾವಣೆಗಳಲ್ಲಿ ಕಳೆದ ಎರಡು ದಿನಗಳಿಂದ ಸುರಿದ ಮಳೆಯಿಂದಾಗಿ 47 ವಿದ್ಯುತ್ ಕಂಬಗಳು, 8 ವಿದ್ಯುತ್ ಪರಿವರ್ತಕಗಳಿಗೆ ಹಾನಿಯಾಗಿದ್ದು, ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ. ಜಗಳಿ ಜಲಸಗರದ ಸರ್ಕಾರಿ ಶಾಲೆ ಹಾಗೂ ರೈತರೊಬ್ಬರ ತಗಡಿನ ಶೆಡ್‌ನಲ್ಲಿದ್ದ ಪತ್ರಾಸ್‌ಗಳು ಬಿರುಗಾಳಿ, ಮಳೆಗೆ ಹಾರಿಹೋಗಿವೆ.

ಕೊಡಗು ಮತ್ತು ಹಾಸನದ ಕೆಲವೆಡೆ ಮರಗಳು ಉರುಳಿ ಬಿದ್ದು ವಾಹನ ಸಂಚಾರ ಸ್ಥಗಿತಗೊಂಡಿತ್ತು. ಮನೆಗಳ ಚಾವಣಿಯ ಶೀಟ್‌ಗಳು ಹಾರಿಹೋಗಿವೆ. ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು ಸೆಸ್ಕ್‌ಗೆ ನಷ್ಟವಾಗಿದೆ.

ಮಡಿಕೇರಿ ನಗರದಲ್ಲಿ ಮಧ್ಯಾಹ್ನ ಧಾರಾಕಾರ ಮಳೆ ಸುರಿಯಿತು. ಸುಂಟಿಕೊಪ್ಪ ಸಮೀಪದ ಚೆಟ್ಟಳ್ಳಿ ಮಾರ್ಗ ಮಧ್ಯದ ಶ್ರೀದೇವಿ ತೋಟದ ಕೆರೆ ಬಳಿ ಮರವೊಂದು ರಸ್ತೆಯ ಮೇಲೆ ಬಿದ್ದು ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆ ಹೋಬಳಿಯ ಮಾದಲಗೆರೆ ಗ್ರಾಮದಲ್ಲಿ ಚಂಚೀಗೌಡ, ರಾಮೇಗೌಡ, ರಾಜೇಗೌಡ ಎಂಬುವರ ಮನೆಯ ಶೀಟ್, ಹಂಚುಗಳು ಹಾರಿಹೋಗಿವೆ. ಬೆಳಗೀಹಳ್ಳಿಯಲ್ಲಿ ತೆಂಗಿನ ಮರಗಳು, ಬಾಳೆಗೆ ಹಾನಿಯಾಗಿದೆ.

ಹುಣಸೂರು ತಾಲ್ಲೂಕಿನ ಬನ್ನಿಕುಪ್ಪೆ ಪಂಚಾಯಿತಿ ವ್ಯಾಪ್ತಿಯ ವಿವಿಧೆಡೆ ಮಳೆಯಿಂದಾಗಿ ತೆಂಗು, ಸಪೋಟ ಮತ್ತು ಮನೆಗಳಿಗೆ ಹಾನಿಯಾಗಿದೆ.

ಬೀದರ್ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಸಾಧಾರಣ ಮಳೆ ಸುರಿಯಿತು. ನಗರದಲ್ಲಿ 40 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದು, ಬಿಸಿಲ ಧಗೆಯಿಂದ ಜನರು ಬೇಸತ್ತರು. ಸಂಜೆ ಸುರಿದ ಮಳೆ ಸ್ವಲ್ಪಮಟ್ಟಿಗೆ ತಂಪು ನೀಡಿದರೂ ಸೆಕೆ ಮಾತ್ರ ಕಡಿಮೆ ಆಗಿಲ್ಲ.

ವಿಜಯಪುರ ಜಿಲ್ಲೆಯ ತಾಳಿಕೋಟೆಯ ವಿವಿಧೆಡೆ ಜೋರು ಮಳೆಯಾಗಿದೆ. ಮೈಸೂರು, ಪಿರಿಯಾಪಟ್ಟಣ, ಸಕಲೇಶಪುರ, ಅರಸೀಕೆರೆ, ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಸಾಧಾರಣ ಮಳೆಯಾಗಿದೆ. ಕಲಬುರಗಿ ನಗರ ಸೇರಿದಂತೆ ಜಿಲ್ಲೆಯ ಕೆಲವೆಡೆ ಗಾಳಿ ಸಹಿತ ಮಳೆ ಸುರಿದಿದೆ.



ಕೊಡಗು ಜಿಲ್ಲೆಯ ಸುಂಟಿಕೊಪ್ಪ ಸಮೀಪದ ಶ್ರೀದೇವಿ ಬಳಿ ಮರ ಉರುಳಿ ಬಿದ್ದು ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು

ಮತ್ತೆ ಮೂರು ದಿನ ಮಳೆ

ಬೆಂಗಳೂರು: ರಾಜ್ಯಾದ್ಯಂತ ಮೂರು ದಿನಗಳ ಕಾಲ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಗುರುವಾರ ದಕ್ಷಿಣ ಒಳನಾಡಿನ ಹಲವೆಡೆ, ಕರಾವಳಿ ಮತ್ತು ಉತ್ತರ ಒಳನಾಡಿನ ಕೆಲವೆಡೆ ಮಳೆಯಾಗುವ ಸಾಧ್ಯತೆಯಿದೆ. ಶುಕ್ರವಾರ ಉತ್ತರ ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಒಣಹವೆ ಕಾಣಿಸಿಕೊಳ್ಳಲಿದೆ. ಉಳಿದೆಡೆ ಮಳೆ ಮುಂದುವರಿಯುವ ಸಾಧ್ಯತೆಯಿದೆ ಎಂದು ಹೇಳಿದೆ.

ರಾಜ್ಯಾದ್ಯಂತ ಒಂದೆರಡು ಕಡೆ ಬಿರುಗಾಳಿ ಸಹಿತ ಗುಡುಗು ಸಾಧ್ಯತೆಯಿದ್ದು, ಗಾಳಿಯ ವೇಗವು ಒಳನಾಡಿನಲ್ಲಿ ಗಂಟೆಗೆ 40ರಿಂದ 50 ಕಿ.ಮೀ. ಹಾಗೂ ಕರಾವಳಿಯಲ್ಲಿ 30ರಿಂದ 40 ಕಿ.ಮೀ. ಇರಲಿದೆ ಎಂದು ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಅಥವಾ ರಾತ್ರಿ ವೇಳೆ ಬಿರುಗಾಳಿ, ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಗಾಳಿಯ ವೇಗವು ಗಂಟೆಗೆ 40ರಿಂದ 50 ಕಿ.ಮೀ. ತಲುಪಲಿದೆ ಎಂದು ಹೇಳಿದೆ. ಬುಧವಾರ ಬೆಳಿಗ್ಗೆ 8.30ಕ್ಕೆ ಅಂತ್ಯಗೊಂಡಂತೆ ಹಿಂದಿನ 24 ಗಂಟೆಯ ಅವಧಿಯಲ್ಲಿ ಶಿವಮೊಗ್ಗದ ಹುಂಚದಕಟ್ಟೆಯಲ್ಲಿ (6 ಸೆಂ.ಮೀ.) ಗರಿಷ್ಠ ಮಳೆಯಾಗಿದೆ. ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ (41 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ.



ಶಿರಸಿ ತಾಲ್ಲೂಕಿನ ಬಿಸಲಕೊಪ್ಪದ ಮುಡೇಬೈಲ್ ಗ್ರಾಮದಲ್ಲಿ ಅಡಿಕೆ ಹಾಗೂ ಬಾಳೆ ಗಿಡಗಳು ನೆಲ ಕಚ್ಚಿರುವುದು —ಪ್ರಜಾವಾಣಿ ಚಿತ್ರ

ಧರೆಗುರುಳಿದ 200ಕ್ಕೂ ಹೆಚ್ಚು ಮರಗಳು

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಬಿಸಲಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಂಗಳವಾರ ತಡರಾತ್ರಿ ಸುರಿದ ಬಿರುಗಾಳಿ ಸಹಿತ ಮಳೆಯಿಂದ ಮನೆಗಳು ಹಾಗೂ ಬೆಳೆಗಳಿಗೆ ಅಪಾರ ಹಾನಿಯಾಗಿದೆ.

ಗಾಳಿಯ ಅಬ್ಬರಕ್ಕೆ 200ಕ್ಕೂ ಹೆಚ್ಚು ಮರಗಳು ವಿದ್ಯುತ್ ಕಂಬಗಳು ಮತ್ತು ತಂತಿಗಳ ಮೇಲೆ ಉರುಳಿ ಬಿದ್ದ ಪರಿಣಾಮ ವಿದ್ಯುತ್ ಪೂರೈಕೆ ಅಸ್ತವ್ಯಸ್ತಗೊಂಡಿತ್ತು.

ಹಲವೆಡೆ ಮನೆಯ ಹೆಂಚುಗಳು ಹಾರಿ ಹೋಗಿವೆ. ತೆಂಗಿನ ಮರಗಳು ತುಂಡಾಗಿ ಬಿದ್ದಿವೆ. ನೂರಾರು ಅಡಿಕೆ ಹಾಗೂ ಬಾಳೆ ಗಿಡಗಳು ನೆಲಕ್ಕುರುಳಿವೆ. ಹೆಸ್ಕಾಂ, ಅರಣ್ಯ ಇಲಾಖೆ ಸಿಬ್ಬಂದಿ ವಿದ್ಯುತ್ ಕಂಬಗಳ ಮೇಲೆ ಬಿದ್ದಿರುವ ಮರಗಳನ್ನು ತೆರವುಗೊಳಿಸುತ್ತಿದ್ದಾರೆ.

ನೆಲಕ್ಕೆ ಉರುಳಿದ ವಿದ್ಯುತ್ ಕಂಬ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿವಿಧೆಡೆ ಮರ ಹಾಗೂ ವಿದ್ಯುತ್ ಕಂಬಗಳು ನೆಲಕ್ಕೆ ಉರುಳಿವೆ. ವಿದ್ಯುತ್ ತಂತಿಯ ಮೇಲೆ ಮರದ ಕೊಂಬೆಗಳು ಬಿದ್ದ ಕಾರಣ ವಿದ್ಯುತ್ ವ್ಯತ್ಯಯವಾಗಿದೆ. ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಜನರು ರಾತ್ರಿಯಿಡಿ ನೀರನ್ನು ಹೊರ ಹಾಕಿದರು. ಹೊಲ, ತೋಟಗಳಿಗೆ ಮಳೆ ನೀರು ನುಗ್ಗಿದ ಕಾರಣ ಸೊಪ್ಪು, ಹಣ್ಣು, ತರಕಾರಿ ಬೆಳೆಗಳು ನೀರಿನಲ್ಲಿ ನಿಂತಿವೆ.

ಬಿಸಿಲಿಗೆ ಕೂಲಿಕಾರ್ಮಿಕ ಸಾವು

ಜಾಲಹಳ್ಳಿ (ರಾಯಚೂರು ಜಿಲ್ಲೆ): ದೇವದುರ್ಗ ತಾಲ್ಲೂಕು ಮುಂಡರಗಿ ಗ್ರಾಮದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆರೆ ಹೂಳೆತ್ತುವ ಕಾರ್ಯದಲ್ಲಿ ತೊಡಗಿದ್ದ ಸಿದ್ದಣ್ಣ(40) ಬಿಸಿಲಿಗೆ ಅಸ್ವಸ್ಥರಾಗಿ ಕುಸಿದು ಬಿದ್ದು, ಆಸ್ಪತ್ರೆಗೆ ಸಾಗಿಸುವಾಗ ಮಾರ್ಗ ಮಧ್ಯದಲ್ಲೇಯೇ ಬುಧವಾರ ಮೃತಪಟ್ಟಿದ್ದಾರೆ.

'ಸಿದ್ದಣ್ಣ ಅವರಿಗೆ ಮೊದಲೇ ಅನಾರೋಗ್ಯದ ಸಮಸ್ಯೆ ಇತ್ತು ಎನ್ನುವ ಮಾಹಿತಿ ಇದೆ. ಬೆಳಿಗ್ಗೆ ಕೆಲಸಕ್ಕೆ ಹಾಜರಾಗಿದ್ದರು. ಸ್ವಲ್ಪ ಹೊತ್ತಿನ ಬಳಿಕ ಕುಸಿದು ಬಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿಯೇ ಮೃತಪಟ್ಟಿದ್ದಾರೆ' ಎಂದು ಪಿಡಿಒ ಸೋಮನಾಥ ಪ್ರತಿಕ್ರಿಯಿಸಿದರು.

ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಪಂಪಾಪತಿಸ್ವಾಮಿ ಮಾತನಾಡಿ, 'ಮಾನವೀಯತೆ ಆಧಾರದಲ್ಲಿ ಮೃತರ ಕುಟುಂಬಕ್ಕೆ ಸರ್ಕಾರದಿಂದ ದೊರೆಯುವ ಎಲ್ಲ ಪರಿಹಾರವನ್ನು ಒದಗಿಸುತ್ತೇವೆ' ಎಂದು ತಿಳಿಸಿದರು.

ಅಕ್ಕಿ ಮುಹೂರ್ತ ಇಂದು

ಪ್ರಜಾವಾಣಿ ವಾರ್ತೆ

ಉಡುಪಿ: ಕೃಷ್ಣಮಠದ ಭಾವಿ ಪರ್ಯಾಯ ಪೀಠವಾಗಿರುವ ಪುತ್ತಿಗೆ ಮಠದಲ್ಲಿ ಮೇ 25ರಂದು ಪರ್ಯಾಯ ಪೂರ್ವಭಾವಿಯಾಗಿ ಅಕ್ಕಿ ಮುಹೂರ್ತ ನಡೆಯಲಿದೆ.

ಬೆಳಿಗ್ಗೆ 7.30ಕ್ಕೆ ಪ್ರಾರ್ಥನೆಯೊಂದಿಗೆ ಅಕ್ಕಿ ಮುಹೂರ್ತಕ್ಕೆ ಚಾಲನೆ ಸಿಗಲಿದೆ. ಬಳಿಕ ಚಂದ್ರಮೌಳೇಶ್ವರ, ಅನಂತೇಶ್ವರ ಹಾಗೂ ಕೃಷ್ಣನ ದರ್ಶನ ನಡೆಯಲಿದೆ. 8.45ಕ್ಕೆ ತುಂಡಲ ಸಂಗ್ರಹ, 9 ಗಂಟೆಗೆ ವಿವಿಧ ಸಂಘ ಸಂಸ್ಥೆಗಳಿಂದ ಅಕ್ಕಿ ಸಂಗ್ರಹ ಸಂಕಲ್ಪ ನಡೆಯಲಿದೆ. 9.30ಕ್ಕೆ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಶ್ರೀಗಳು ಆಶೀರ್ವಚನ ನೀಡಲಿದ್ದಾರೆ.

ಮುಹೂರ್ತದ ಹಿನ್ನೆಲೆ: ಕೃಷ್ಣಮಠದಲ್ಲಿ ಶತಮಾನಗಳಿಂದ ನಡೆದುಕೊಂಡು ಬಂದಿರುವ ಪರ್ಯಾಯೋತ್ಸವದ ಪೂರ್ವಭಾವಿಯಾಗಿ ಪರ್ಯಾಯ ಪೀಠ ಅಲಂಕರಿಸುವ ಮಠ ನಾಲ್ಕು ಮುಹೂರ್ತಗಳನ್ನು ನಡೆಸುತ್ತದೆ. ಪರ್ಯಾಯ ಆರಂಭಕ್ಕೂ ಒಂದು ವರ್ಷದ ಮುನ್ನವೇ ಮುಹೂರ್ತಗಳು ಆರಂಭವಾಗುತ್ತವೆ.

ಮೊದಲಿಗೆ ಬಾಳೆ ಮುಹೂರ್ತ ನಡೆಯುತ್ತದೆ. ಪರ್ಯಾಯದ ಅವಧಿಯಲ್ಲಿ ಭಕ್ತರ ದಾಸೋಹಕ್ಕೆ ಬಾಳೆ ಎಲೆಗಳ ಕೊರತೆ ಆಗದಿರಲಿ ಎಂಬುದು ಬಾಳೆ ಮುಹೂರ್ತದ ಉದ್ದೇಶ.

ನಾಲ್ಕನೇ ಪರ್ಯಾಯ

ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಶ್ರೀಗಳು ಈಗಾಗಲೇ 3 ಪರ್ಯಾಯಗಳನ್ನು ಯಶಸ್ವಿಯಾಗಿ ನಡೆಸಿದ್ದು 2024ರ ಜನವರಿಯಲ್ಲಿ ಕಿರಿಯ ಯತಿ ಸುಶೀಂದ್ರ ತೀರ್ಥ ಸ್ವಾಮೀಜಿ ಅವರೊಂದಿಗೆ ಚತುರ್ಥ ಪರ್ಯಾಯ ಆರಂಭಿಸಲಿದ್ದಾರೆ.

ನಂತರ ಕ್ರಮವಾಗಿ ಅಕ್ಕಿ ಮುಹೂರ್ತ, ಕಟ್ಟಿಗೆ ಮುಹೂರ್ತ ಹಾಗೂ ಭತ್ತ ಮುಹೂರ್ತಗಳು ನಡೆಯುತ್ತವೆ. ಪರ್ಯಾಯದ ಅವಧಿಯಲ್ಲಿ ಭೋಜನ ತಯಾರಿಸಲು ಆಹಾರ ಪದಾರ್ಥಗಳ ಕೊರತೆಯಾಗದಿರಲಿ ಎಂದು ಅಕ್ಕಿ ಹಾಗೂ ಭತ್ತ ಮೂಹೂರ್ತ ಮಾಡಲಾಗುತ್ತದೆ. ಹಾಗೆಯೇ ಉರುವಲಿಗೆ ಕಟ್ಟಿಗೆ ಸಮಸ್ಯೆಯಾಗಬಾರದು ಎಂದು ಕಟ್ಟಿಗೆ ಮುಹೂರ್ತ ನೆರವೇರಿಸಲಾಗುತ್ತದೆ.

ಬಾವಿ ಪರ್ಯಾಯ ಮಠವಾಗಿರುವ ಪುತ್ತಿಗೆ ಮಠ ಈಗಾಗಲೇ ಬಾಳೆ ಮುಹೂರ್ತ ನೆರವೇರಿಸಿದ್ದು ಗುರುವಾರ ಭತ್ತ ಮುಹೂರ್ತ ನಡೆಯಲಿದೆ. ಮುಂದಿನ ಪರ್ಯಾಯಕ್ಕೆ ಸಜ್ಜಾಗಿದ್ದೇವೆ ಎಂಬ ಸೂಚನೆಯನ್ನು ಮುಟ್ಟಿಸುವುದು ಮೂಹೂರ್ತಗಳ ಆಚರಣೆಯ ಹಿಂದಿರುವ ಉದ್ದೇಶವೂ ಹೌದು.

ಪುತ್ತೂರು ಹಲ್ಲೆ ಪ್ರಕರಣ; ಒಂದಾಗುತ್ತಿದೆ ವಿರೋಧಿ ಬಣ

ಈಗ ನಳಿನ್ ಟಾರ್ಗೆಟ್

ಪ್ರಜಾವಾಣಿ ವಾರ್ತೆ

ಮಂಗಳೂರು: ಪುತ್ತೂರು ವಿಧಾನಸಭಾ ಕ್ಷೇತ್ರದ ಬಿಜೆಪಿಯಲ್ಲಿನ ಬಂಡಾಯದ ಕಿಡಿ ಇನ್ನೂ ಆರಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೂ ಜಾಗರಣ ವೇದಿಕೆ, ಬಜರಂಗದಳದಂತಹ ಸಂಘಟನೆಗಳಲ್ಲಿ ಸಕ್ರಿಯರಾಗಿರುವ ಹಿಂದುತ್ವವಾದದ ಪ್ರತಿಪಾದಕರಲ್ಲಿ ಕೆಲವರು, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ವಿರುದ್ಧವೇ ತಿರುಗಿ ಬಿದ್ದಿದ್ದಾರೆ.

'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನಳಿನ್ ಕಣಕ್ಕಿಳಿದರೆ ಸೋಲಿಸುತ್ತೇವೆ' ಎಂಬ ಸವಾಲನ್ನೂ ಹಾಕುತ್ತಿದ್ದಾರೆ.

'ಹಿಂದುತ್ವ ವಿಚಾರಧಾರೆಗೆ ಸಂಬಂಧಿಸಿದ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ಮುಂದಾಳುಗಳನ್ನು ಉದ್ದೇಶಪೂರ್ವಕವಾಗಿ ಅಧಿಕಾರದಿಂದ ದೂರ ಇಡಲಾಗುತ್ತಿದೆ' ಎಂಬುದು ಅವರ ಸಿಟ್ಟಿಗೆ ಕಾರಣ.


ಪ್ರವೀಣ್ ನೆಟ್ಟಾರು ಹತ್ಯೆ ವೇಳೆ ಹಿಂದುತ್ವವಾದಿ ಕಾರ್ಯಕರ್ತರ ಒಳಬೇಗುದಿ ಮೊದಲ ಬಾರಿಗೆ ಬಹಿರಂಗವಾಗಿ ಕಾಣಿಸಿಕೊಂಡಿತ್ತು. ವಿಧಾನಸಭಾ ಚುನಾವಣೆಯಲ್ಲಿ ಪುತ್ತೂರು ಕ್ಷೇತ್ರದ ಬಿಜೆಪಿ ಟಿಕೆಟ್ ಅನ್ನು ಹಿಂದೂ ಜಾಗರಣ ವೇದಿಕೆಯ ಮುಖಂಡ ಅರುಣ್ ಕುಮಾರ್ ಪುತ್ತಿಲ ಅವರಿಗೆ ನಿರಾಕರಿಸಿದಾಗ, ಹಿಂದುತ್ವವಾದಿ ಕಾರ್ಯಕರ್ತರ ಸಿಟ್ಟಿನ ಮತ್ತೊಂದು ರುದ್ರರೂಪದ ದರ್ಶನವಾಯಿತು.

ಇದರ ಪರಿಣಾಮ ಬಿಜೆಪಿ ಅಭ್ಯರ್ಥಿ ಆಶಾ ತಿಮ್ಮಪ್ಪಗೌಡ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟರೆ, ಪಕ್ಷೇತರರಾಗಿ ಸ್ಪರ್ಧಿಸಿದ್ದ ಅರುಣಕುಮಾರ್ ಪುತ್ತಿಲ ಅವರು ಕಾಂಗ್ರೆಸ್ ಅಭ್ಯರ್ಥಿ ಅಶೋಕ್ ಕುಮಾರ್ ರೈ ವಿರುದ್ಧ ಕೇವಲ 4,149 ಮತಗಳ ಅಂತರದಿಂದ ಸೋತರು. ಪುತ್ತಿಲ ಸೋತರೂ ಎದೆಗುಂದದ ಬೆಂಬಲಿಗರು 'ಸಂಸತ್ತಿಗೆ ಪುತ್ತಿಲ' ಎಂಬ ಸಂದೇಶವನ್ನು ಈ ಫಲಿತಾಂಶದ ದಿನವೇ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟರು.

ಬ್ಯಾನರ್ ವಿವಾದ: ಪುತ್ತೂರಿನಲ್ಲಿ ಇತ್ತೀಚೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ಸಂಸದ ಸದಾನಂದ ಗೌಡ ಅವರ ಭಾವಚಿತ್ರ ಇರುವ ಬ್ಯಾನರ್ ಅಳವಡಿಸಿ ಅದಕ್ಕೆ, ಚಪ್ಪಲಿ ಹಾರ ಹಾಕಿದ ಪ್ರಕರಣದ ಆರೋಪಿಗಳ ಮೇಲೆ ನಡೆದಿದೆ ಎನ್ನಲಾದ ಪೊಲೀಸ್ ದೌರ್ಜನ್ಯ ಬಜರಂಗದಳ, ಹಿಂದೂ ಜಾಗರಣ ವೇದಿಕೆಯಂತಹ ಸಂಘಟನೆಗಳವರ ಕಿಚ್ಚನ್ನು ಮತ್ತಷ್ಟು ಹೆಚ್ಚಿಸಿದೆ.

ಬ್ಯಾನರ್ ಅಳವಡಿಸಿದವರಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿ ಬಿಜೆಪಿ ಸ್ಥಳೀಯ ಮುಖಂಡರಾದ ಸಂಜೀವ ಮಠಂದೂರು, ಆಶಾ ತಿಮ್ಮಪ್ಪ ಗೌಡ ಅವರ ನೇತೃತ್ವದಲ್ಲಿ ಪುತ್ತೂರಿನಲ್ಲಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಇದರ ಬೆನ್ನಲ್ಲೇ ಒಂಬತ್ತು ಮಂದಿಯನ್ನು ಪೊಲೀಸರು ಬಂಧಿಸಿದ್ದರು. ಈ ಘಟನೆ ನಡೆಯುವಾಗ ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗಿತ್ತಾದರೂ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದಿರಲಿಲ್ಲ. ಬಿಜೆಪಿ ಮುಖಂಡರ ಕುಮ್ಮಕ್ಕಿನಿಂದಲೇ ಈ ಪ್ರಕರಣದ ಆರೋಪಿಗಳಿಗೆ ಪೊಲೀಸರು ಮನಸೋ ಇಚ್ಛೆ ಥಳಿಸಿದ್ದಾರೆ ಎಂಬುದು ಪುತ್ತಿಲ ಅಭಿಮಾನಿಗಳ ಆರೋಪ.

ಈ ಪ್ರಕರಣವನ್ನೇ ಅವಕಾಶವಾಗಿ ಬಳಸಿಕೊಂಡು ನಳಿನ್ ಕುಮಾರ್ ಕಟೀಲ್ ವಿರೋಧಿ ಬಣ, ನಳಿನ್ ಅವರನ್ನು ಹಣಿಯುವ ಕೆಲಸದಲ್ಲಿ ತೊಡಗಿದೆ.



ಮಾದರಿ ಪ್ರಶ್ನೋತ್ತರ

ಸಾಮಾನ್ಯ ಜ್ಞಾನ

1) ಕಾಸ್ಮಿಕ್ ಗುರುತ್ವಾಕರ್ಷಣ ಅಲೆಗಳ ಗ್ರಹಿಸಬಲ್ಲ ಲಿಗೋ(Laser Interferometer Gravitational wave Observatory (ಲಿಗೊ-LIGO)) ಭಾರತದಲ್ಲಿ ಸ್ಥಾಪಿಸಲು ಸಿದ್ದತೆಗಳು ನಡೆಯುತ್ತಿವೆ. ಹಾಗಾದರೆ ಅದು ಎಲ್ಲಿ?

ಎ) ಮಹಾರಾಷ್ಟ್ರದ ಔಂಧನಾಗನಾಥ್ ಬಿ) ತಮಿಳುನಾಡಿನ ಸೇಲಂ
ಸಿ) ಆಂಧ್ರಪ್ರದೇಶದ ವಿಶಾಖಪಟ್ಟಣಂ ಡಿ) ಗುಜರಾತ್‌ನ ಗಾಂಧಿನಗರ

ಉತ್ತರ: ಎ

(ವಿವರಣೆ: ಮಹಾರಾಷ್ಟ್ರದ ಔಂಧನಾಗನಾಥ್‌ನಲ್ಲಿ ₹2600 ಕೋಟಿ ವೆಚ್ಚದಲ್ಲಿ (Laser Interferometer Gravitational wave Observatory(ಲಿಗೊ-LIGO) ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಇದು ಕಾಸ್ಮಿಕ್ ಗುರುತ್ವಾಕರ್ಷಣ ಅಲೆಗಳನ್ನು(Cosmic Gravitational Waves) ಗ್ರಹಿಸಬಲ್ಲವು. ಈ ಅಲೆಗಳ ಪ್ರಬಲ ಮೂಲಗಳೆಂದರೆ ಸೂಪರ್‌ನೋವಾಗಳು, ನ್ಯೂಟ್ರಾನ್ ನಕ್ಷತ್ರಗಳು ಮತ್ತು ಬಿಗ್‌ಬ್ಯಾಂಗ್‌ಗಳು ಹಾಗೂ ವಿಶ್ವದಲ್ಲಿರುವ ನಿಗೂಢ ವಸ್ತುವಾಗಿರುವ ಬ್ಲಾಕ್ ಹೋಲ್‌ಗಳು ಸೇರಿವೆ. ಲಿಗೊ ಯೋಜನೆಯು ಈಗಾಗಲೇ ಅಮೆರಿಕದ ವಾಷಿಂಗ್ಟನ್‌ನ ಹ್ಯಾನ್‌ಫೋರ್ಡ್ ಮತ್ತು ಲೂಸಿಯಾನದ ಲಿವಿಂಗ್‌ಸ್ಟನ್‌ನಲ್ಲಿ ಕಾಸ್ಮಿಕ್ ಗುರುತ್ವಾಕರ್ಷಣ ಅಲೆಗಳ ಶೋಧಕವನ್ನು ಹೊಂದಿದೆ)

2. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಅಮೆರಿಕದಲ್ಲಿ ಉನ್ನತ ಶಿಕ್ಷಣಕ್ಕೆ ನೀಡಿದ ಮಹತ್ವದ ಕೊಡುಗೆಗಾಗಿ ಶಿಕ್ಷಣ ತಜ್ಞೆ, ಭಾರತೀಯ ಮೂಲದ ಅಮೆರಿಕನ್ ಪ್ರಜೆ ನೀಲಿ ಬೆಂಡಪುಡಿ ಅವರಿಗೆ 2023 ಸಾಲಿನ ಇಮಿಗ್ರೆಂಟ್ ಅಚೀವ್‌ಮೆಂಟ್ ಅವಾರ್ಡ್ ಪುರಸ್ಕಾರವನ್ನು (Immigrant Achievement Award) ನೀಡಲಾಗಿದೆ.

2) ನೀಲಿ ಬೆಂಡಪುಡಿ ಅವರನ್ನು ಅಮೆರಿಕ ಮತ್ತು ಭಾರತದ ವಿಶ್ವ ವಿದ್ಯಾಲಯಗಳ ನಡುವಿನ ಸಹಭಾಗಿತ್ವವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸ್ಥಾಪಿಸಿರುವ ಕಾರ್ಯಪಡೆಗೆ ಸಹ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಅಲ್ಲದೇ ಇವರು ಈಗಾಗಲೇ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ (Pennsylvania State University) ಅಧ್ಯಕ್ಷರಾಗಿದ್ದಾರೆ.

ಉತ್ತರ ಸಂಕೇತಗಳು

ಎ) 1 ಮಾತ್ರ ಸರಿಯಾಗಿದೆ
ಬಿ) 2 ಮಾತ್ರ ಸರಿಯಾಗಿದೆ
ಸಿ) 1 ಮತ್ತು 2 ಎರಡೂ ಸರಿಯಾಗಿವೆ
ಡಿ) 2 ಮತ್ತು 3 ಎರಡೂ ತಪ್ಪಾಗಿವೆ

ಉತ್ತರ: ಸಿ

ಐಎಎಸ್, ಕೆಎಎಸ್, ಕೆಪಿಎಸ್‌ಸಿ ಸೇರಿದಂತೆ ವಿವಿಧ ಹುದ್ದೆಗಳಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

3. ನಾನಾ ಕಾರಣಗಳಿಂದ ಅನಾರೋಗ್ಯಕ್ಕೆ ತುತ್ತಾದ ಆನೆಗಳಿಗೆ ಆರೈಕೆ ಮಾಡಲು ನಮ್ಮ ರಾಜ್ಯದಲ್ಲಿ ಮೊದಲ ಆನೆಗಳ ಆರೈಕೆ ಕೇಂದ್ರವನ್ನು (Elephant Care Centre) ಆರಂಭಿಸಲಾದೆ, ಹಾಗಾದರೆ ಆ ಕೇಂದ್ರ ಎಲ್ಲಿದೆ ?

ಎ) ಕೋಲಾರ ತಾಲ್ಲೂಕಿನ ಖಾಜಿಕಲ್ಲಹಳ್ಳಿಯ ಬಳಿಯಲ್ಲಿರುವ ಲಕ್ಷ್ಮಿಪುರ ಅರಣ್ಯ ವಲಯ.
ಬಿ) ಧರ್ಮಸ್ಥಳದ ಉಜಿರೆ ಪಶ್ಚಿಮ ಘಟ್ಟ ಅರಣ್ಯವಲಯ
ಸಿ) ಬೆಳಗಾವಿಯ ಖಾನಾಪುರ ಅರಣ್ಯ ವಲಯ
ಡಿ) ಉತ್ತರ ಕನ್ನಡದ ಕೈಗಾ ಪ್ರದೇಶದಲ್ಲಿರುವ ಅರಣ್ಯವಲಯ

ಉತ್ತರ: ಎ

4) ಎಲ್‌ಐಸಿ ಯ ಮೊದಲ ಸಿಇಓ ಆಗಿ ಯಾರನ್ನು ನೇಮಕ ಮಾಡಲಾಗಿದೆ?

ಎ) ಸಿದ್ಧಾರ್ಥ ಮೊಹಂತಿ
ಬಿ) ಜಯರಾಮ್ ರಮೇಶ್
ಸಿ) ಜಗದೀಶ್ ಕಾರಂತ್ ಜಗದಾಳೆ
ಡಿ) ಮಂಜುನಾಥ್ ಪ್ರಸನ್ನ

ಉತ್ತರ: ಎ



5) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ರಿಪೋರ್ಟ್ ವಿದೌಟ್ ಬಾರ್ಡರ್ಸ್ ಹೆಸರಿನ ಸರ್ಕಾರೇತರ ಸಂಸ್ಥೆ ಬಿಡುಗಡೆ ಮಾಡಿದ ವಿಶ್ವ ಪತ್ರಿಕಾ ಸ್ವಾತಂತ್ರ್ಯದ ಸೂಚ್ಯಂಕದಲ್ಲಿ ಭಾರತವು 161ನೇ ಸ್ಥಾನವನ್ನು ಹೊಂದಿದೆ.

2) 1985ರಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ರಿಪೋರ್ಟ್ ವಿದೌಟ್ ಬಾರ್ಡರ್ಸ್ ಸ್ಥಾಪಿಸಲಾಯಿತು. ಯೂನಿವರ್ಸಲ್ ಡಿಕ್ಲೆರೇಷನ್ ಆಫ್ ಹ್ಯೂಮನ್ ರೈಟ್ಸ್‌ನ 19ನೇ ಆರ್ಟಿಕಲ್‌ನ ತತ್ವದಡಿ ಇದರ ಸ್ಥಾಪನೆ ಮಾಡಲಾಗಿದೆ.

3) ರಾಜಕೀಯ ಸಂದರ್ಭ, ಕಾನೂನು ಚೌಕಟ್ಟು, ಆರ್ಥಿಕ ಸಂದರ್ಭ ಹಾಗೂ ಪತ್ರಕರ್ತರ ಸುರಕ್ಷತೆ ಎಂಬ ಐದು ವಿಭಾಗಗಳ ಆಧಾರದಲ್ಲಿ ವಿಶ್ವ ಪತ್ರಿಕಾ ಸ್ವಾತಂತ್ರ್ಯದ ಸೂಚ್ಯಂಕ ಸಿದ್ದಪಡಿಸಲಾಗಿದೆ.

4) ವಿಶ್ವ ಪತ್ರಿಕಾ ಸ್ವಾತಂತ್ರ್ಯದ ಸೂಚ್ಯಂಕವನ್ನು 2002ರಿಂದ ಬಿಡುಗಡೆ ಮಾಡಲಾಗುತ್ತಿದೆ.

ಉತ್ತರ ಸಂಕೇತಗಳು

ಎ) 1, 2 ಮತ್ತು 3 ಮಾತ್ರ ಸರಿಯಾಗಿದೆ
ಬಿ) 2, 3 ಮತ್ತು 4 ಮಾತ್ರ ಸರಿಯಾಗಿದೆ
ಸಿ) 1 ಮತ್ತು 2 ಮಾತ್ರ ಸರಿಯಾಗಿದೆ
ಡಿ) 1 ರಿಂದ 4ರತನಕ ಎಲ್ಲವೂ ಸರಿಯಾಗಿದೆ

ಉತ್ತರ: ಡಿ

6) ಯುಟ್ರಿಕ್ಯುಲೇರಿಯಾ ರ್ಸೆಲ್ಲಾಟಾ(Utricularia Furcellata). ಈ ಸಸ್ಯ ಕ್ರಿಮಿ-ಕೀಟಗಳನ್ನು ಬೇಸ್ತು ಬೀಳಿಸಿ, ಅವುಗಳನ್ನೇ ತಿಂದು ಬದುಕುತ್ತದೆ. ಇಂಥ ಸಸ್ಯ ಇತ್ತೀಚಿಗೆ ಎಲ್ಲಿ ಪತ್ತೆಯಾಗಿದೆ ?

ಎ) ಉತ್ತರಾಖಂಡದ ಸುಂದರ್ ಮಂಡಲ ಕಣಿವೆ
ಬಿ) ಕರ್ನಾಟಕದ ಪಶ್ಚಿಮ ಘಟ್ಟದ ಭಾಗ
ಸಿ) ತಮಿಳುನಾಡಿನ ಪೂರ್ವ ಘಟ್ಟ ಭಾಗ
ಡಿ) ಉತ್ತರ ಪ್ರದೇಶದ ವಾರಣಾಸಿಯ ಉತ್ತರ ಭಾಗದಲ್ಲಿ

ಉತ್ತರ: ಎ

7) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಬ್ರಿಟಿಷ್ ಪ್ಯಾರಾ ಒಲಿಂಪಿಕ್ಸ್ ಆಗಿರುವ ಸ್ಪ್ರಿಂಟರ್ ಜಾನ್ ಮೆಕ್‌ಫಾಲ್ (John McFall) ಅವರನ್ನು ಯುರೋಪಿಯನ್ ಬಾಹ್ಯಾಕಾಶ ಸಂಸ್ಥೆಯು ಗಗನಯಾತ್ರಿಯಾಗಿ ಆಯ್ಕೆ ಮಾಡಿದೆ. ಹೀಗಾಗಿ ವಿಶ್ವದ ಮೊದಲ ಅಂಗವಿಕಲ ಗಗನಯಾತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

2) ಜಾನ್ ಮೆಕ್‌ಪಾಲ್ (John McFall) ಅವರು 19 ವರ್ಷದವ ರಾಗಿದ್ದಾಗ ಮೋಟಾರ್ ಸೈಕಲ್ ಅಪಘಾತವೊಂದರಲ್ಲಿ ಕಾಲನ್ನು ಕಳೆದುಕೊಂಡರು. ನಂತರದ ದಿನಗಳಲ್ಲಿ ವೈದ್ಯಕೀಯ ಶಿಕ್ಷಣವನ್ನು ಪಡೆದು ವೈದ್ಯರಾಗಿ ವೃತ್ತಿ ಜೀವನವನ್ನು ನಡೆಸುತ್ತಿದ್ದಾರೆ.

3) 2008ರಲ್ಲಿ ಬೀಜಿಂಗ್‌ನಲ್ಲಿ ನಡೆದ ಪ್ಯಾರಾ ಒಲಿಂಪಿಕ್ಸ್‌ನಲ್ಲಿ ಬ್ರಿಟನ್ ದೇಶವನ್ನು ಜಾನ್‌ಮೆಕ್ ಫಾಲ್ ಪ್ರತಿನಿಧಿಸಿದ್ದರು

4) 2022ರಲ್ಲಿ ಯುರೋಪಿಯನ್ ಬಾಹ್ಯಾಕಾಶ ಸಂಸ್ಥೆಯು ಒಟ್ಟು 22 ವ್ಯಕ್ತಿಗಳನ್ನು ಗಗನಯಾತ್ರಿಯಾಗಿ ಭಾಗವಹಿಸಲು ತರಬೇತಿಗೆ ಆಯ್ಕೆ ಮಾಡಿತ್ತು

ಉತ್ತರ ಸಂಕೇತಗಳು

ಎ) 2 ಮತ್ತು 3 ಹೇಳಿಕೆಗಳು ಮಾತ್ರ ಸರಿಯಾಗಿವೆ
ಬಿ) 2 ಮತ್ತು 4 ಹೇಳಿಕೆಗಳು ಮಾತ್ರ ಸರಿಯಾಗಿವೆ
ಸಿ) 2 ರಿಂದ 3 ತನಕದ ಹೇಳಿಕೆಗಳು ಮಾತ್ರ ಸರಿಯಾಗಿವೆ
ಡಿ) 1 ರಿಂದ 4 ತನಕ ಎಲ್ಲಾ ಹೇಳಿಕೆಗಳು ಸರಿಯಾಗಿವೆ

ಉತ್ತರ:ಡಿ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

'ಗುರು' ಅಧ್ಯಯನಕ್ಕೆ 'ಜ್ಯೂಸ್ ಮಿಷನ್'



ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ವಿದ್ಯಮಾನವೊಂದರ ಕುರಿತು ಮಾಹಿತಿ ಇಲ್ಲಿದೆ.

ಏಪ್ರಿಲ್ 14, 2023ರಂದು ಫ್ರೆಂಚ್ ಗಯಾನಾದ ಕುರು ಏರಿಯಾನಸ್ಪೇಸ್ ಉಡಾವಣಾ ಕೇಂದ್ರದಿಂದ 'ಜ್ಯೂಸ್ ಮಿಷನ್ ಹೊತ್ತ ಏರಿಯಾನ -5 ರಾಕೆಟ್, ಗುರುಗ್ರಹದತ್ತ ಹಾರಿದ ದೃಶ್ಯ (ಚಿತ್ರ: ಜೋಡಿ ಎಮೆಟ್/ಎಎಫ್‌ಪಿ)

ಪ್ರಚಲಿತ

ಹನುಮನಾಯಕ್ ರಾಥೋಡ್

ಭೂಮಿಯಿಂದ 890 ದಶಲಕ್ಷ ಕಿಲೋಮೀಟರ್ ದೂರದಲ್ಲಿರುವ ಗುರು ಗ್ರಹವು ಸೌರಮಂಡಲದ ಅತಿ ದೊಡ್ಡ ಗ್ರಹವಾಗಿದೆ. ಗಾತ್ರದಲ್ಲಿ ಭೂಮಿಗಿಂತ 11ಪಟ್ಟು ದೊಡ್ಡದಾಗಿದೆ. ಕ್ಷುದ್ರಗ್ರಹಗಳನ್ನು ತನ್ನತ್ತ ಸೆಳೆದುಕೊಂಡು ಉಪಗ್ರಹ ಮಾಡಿಕೊಂಡ ದೈತ್ಯ ಗ್ರಹ ಇದು. ಇಂಥ ಗುರು ಗ್ರಹ ಮೂರು ಪ್ರಧಾನ ಉಪಗ್ರಹಗಳನ್ನು ಹೊಂದಿದೆ. ಅವುಗಳೆಂದರೆ ಗ್ಯಾನಿಮೀಡ್, ಯುರೋಪಾ ಮತ್ತು ಕ್ಯಾಲಿಸ್ಟೊ. ಈ ಉಪಗ್ರಹಗಳಲ್ಲಿ ಜೀವಿಗಳಿರುವ ಸಾಧ್ಯತೆ ಬಗ್ಗೆ ಪ್ರಬಲ ಶಂಕೆ ಇದೆ. ಈ ಕಾರಣದಿಂದಾಗಿ ಈ ಉಪಗ್ರಹಗಳ ಕುರಿತ ಹೆಚ್ಚಿನ ಸಂಶೋಧನೆಗಾಗಿ ಯೂರೋಪಿಯನ್ ಬಾಹ್ಯಾಕಾಶ ಏಜೆನ್ಸಿ(European Space Agency) ಜ್ಯೂಸ್ ಮಿಷನ್ (JUICE Mission) ಅನ್ನು ಗುರುವಿನ ಕಕ್ಷೆಗೆ ಕಳುಹಿಸಿದೆ.

ಏನಿದು ಜ್ಯೂಸ್ ಮಿಷನ್

'ಜ್ಯೂಸ್' ಎಂದರೆ ಜ್ಯುಪಿಟರ್ ಐಸಿ ಮೂನ್ಸ್ ಎಕ್ಸ್‌ಪ್ಲೋರರ್ (Jupiter Icy Moons Explorer– Juice). ಗುರುವಿನ ಚಂದ್ರರ (ಉಪಗ್ರಹಗಳು) ಮೇಲ್ಮೈನಲ್ಲಿರುವ ಜೀವಿಗಳ ಕುರುಹು ಪತ್ತೆಗಾಗಿ ಯುರೋಪಿಯನ್ ಸ್ಪೇಸ್ ಏಜೆನ್ಸಿ ಇದನ್ನು ಸಿದ್ದಪಡಿಸಿದೆ. ಏರಿಯನ್-5 ರಾಕೆಟ್ ಮೂಲಕ ಜ್ಯೂಸ್ ನೌಕೆ ನಭಕ್ಕೆ ಹಾರಿದೆ.

ಒಟ್ಟಾರೆ ₹14,270 ಕೋಟಿ ವೆಚ್ಚದ ಕಾರ್ಯಾಚರಣೆ ಇದು. 5,963 ಕೆಜಿ ತೂಕದ ನೌಕೆಯು 8 ವರ್ಷ ಬಾಹ್ಯಾಕಾಶದಲ್ಲಿ ಪ್ರಯಾಣಿಸಿ 2031ರ ಜುಲೈನಲ್ಲಿ ಗುರು ಗ್ರಹದ ಕಕ್ಷೆಯನ್ನು ಸೇರಲಿದೆ. ಅಚ್ಚರಿ ಎಂದರೆ ಅಮೆರಿಕದ ಬಾಹ್ಯಾಕಾಶ ಸಂಸ್ಥೆ 'ನಾಸಾ'(NASA) ಕೂಡ ಗುರು ಗ್ರಹದ ಕಕ್ಷೆಗೆ 'ಯುರೋಪ ಕ್ಲಿಪ್ಪರ್' ಎಂಬ ಬಾಹ್ಯಾಕಾಶ ನೌಕೆಯನ್ನು 2024ರ ಅಕ್ಟೋಬರ್ 10ರಂದು ಕಳುಹಿಸಲಿದೆ. ಆದರೆ ಇದು ಕೇವಲ ಆರು ವರ್ಷಗಳಲ್ಲಿ (2030ಕ್ಕೆ) ಗುರು ಗ್ರಹದ ಕಕ್ಷೆ ತಲುಪಲಿದೆ.

ಜ್ಯೂಸ್ ಮಿಷನ್ ಪ್ರಯಾಣ ತುಸು ಭಿನ್ನವಾಗಿದೆ. ಮೊದಲು ಈ ಮಿಷನ್ ಭೂಮಿಯಿಂದ ಸೂರ್ಯನ ದಿಕ್ಕಿನಲ್ಲಿರುವ ಶುಕ್ರ ಗ್ರಹವನ್ನು ತಲುಪಿ, ಅಲ್ಲಿಂದ ಪುನಃ ಭೂಕಕ್ಷೆಗೆ ಬಂದು ನೇರವಾಗಿ ಗುರುಗ್ರಹವನ್ನು ಪ್ರವೇಶಿಸಲಿದೆ.

ಜ್ಯೂಸ್ ಕಾರ್ಯಾಚರಣೆ ಹೇಗಿರಲಿದೆ?

- ಗುರುವಿನ ಉಪಗ್ರಹಗಳಾದ ಗ್ಯಾನಿಮೀಡ್, ಯುರೋಪಾ ಮತ್ತು ಕ್ಯಾಲಿಸ್ಟೊಗಳನ್ನು ಜ್ಯೂಸ್ ಮಿಷನ್ ಸುತ್ತು ಹಾಕಲಿದೆ. ಗುರು ಗ್ರಹದ ಉಪಗ್ರಹಗಳಿಗಾಗಿಯೇ ವಿಶೇಷವಾಗಿ ಸಿದ್ಧಪಡಿಸಲಾಗಿರುವ ಮೊಟ್ಟಮೊದಲ ಬಾಹ್ಯಾಕಾಶ ನೌಕೆ ಇದಾಗಿದೆ.
- ಕ್ಯಾಲಿಸ್ಟೊ ಸುತ್ತಲೂ 21 ಬಾರಿ, ಗ್ಯಾನಿಮೀಡ್ ಸುತ್ತ 12 ಮತ್ತು ಯುರೋಪಾವನ್ನು ಎರಡು ಬಾರಿ ಇದು ಸುತ್ತಲಿದೆ. ಸಮೀಪದಿಂದ ಅವುಗಳ ಚಿತ್ರವನ್ನು ಸೆರೆಹಿಡಿದು ಭೂಮಿಗೆ ಕಳುಹಿಸಲಿದೆ. ಹಿಮಾವೃತ ಸಮುದ್ರಗಳ ಬಗೆಗಿನ ಸಂಶೋಧನೆಗೆ ಈ ಫೋಟೊಗಳು ನೆರವಾಗಲಿವೆ.
- ಗುರು ಗ್ರಹದ ಉಪಗ್ರಹಗಳ ಭೌಗೋಳಿಕ ಹುಡುಕಾಟಕ್ಕೆ ರಿಮೋಟ್ ಸೆನ್ಸಿಂಗ್ ನೆರವಾಗಲಿದೆ.

ಉಪಗ್ರಹಗಳೇ 'ಚಂದ್ರರು'

ಹಲವು ಖಗೋಳ ಲೆಕ್ಕಾಚಾರಗಳಂತೆ ಸೌರಮಂಡಲದ ಅತ್ಯಂತ ದೊಡ್ಡ ಗ್ರಹ ಗುರುವಿಗೆ 80 ರಿಂದ 90 ನೈಸರ್ಗಿಕ ಉಪಗ್ರಹಗಳಿವೆ. ಭೂಮಿಗೆ ಇರುವ ಏಕೈಕ ನೈಸರ್ಗಿಕ ಉಪಗ್ರಹ ಚಂದ್ರ. ಗುರು ಗ್ರಹಕ್ಕೆ ಇರುವ ದೊಡ್ಡ ಸಂಖ್ಯೆಯ ಉಪಗ್ರಹಗಳನ್ನು 'ಚಂದ್ರರು' ಎನ್ನುವುದು ವಾಡಿಕೆ.

ಗುರು ಉಪಗ್ರಹಗಳ ಪ್ರಾಮುಖ್ಯ

- ಗುರು ಗ್ರಹದ ಮೂರು ಉಪಗ್ರಹಗಳಲ್ಲಿ ಹಿಮಾವೃತ ಸಮುದ್ರಗಳಿದ್ದು ಇವು ಭೂಮಿ ಮೇಲಿನ ಸಮುದ್ರದ ರಚನೆಯನ್ನೇ ಹೋಲುತ್ತಿವೆ ಎಂಬುದು ವಿಜ್ಞಾನಿಗಳ ಊಹೆಯಾಗಿದೆ.
- ಒಂದು ವೇಳೆ ಅಲ್ಲಿ ಜೀವಿಗಳ ಕುರುಹು ಪತ್ತೆಯಾದರೆ ಅನ್ಯಗ್ರಹ ಜೀವಿಗಳ ಅಸ್ತಿತ್ವದ ಪರಿಕಲ್ಪನೆ ನೈಜತೆ ಪಡೆದುಕೊಳ್ಳುತ್ತದೆ.
- ಈ ಹಿಂದೆ ಶುಕ್ರ ಮತ್ತು ಮಂಗಳ ಗ್ರಹಗಳು ಮನುಷ್ಯರ ವಾಸ ಯೋಗ್ಯ ಸ್ಥಳವೆಂದು ವಿಜ್ಞಾನಿಗಳು ಊಹಿಸಿದ್ದರು. ಆದರೆ ಅದು ಅಸಾಧ್ಯ ಎನ್ನುವುದು ಖಚಿತವಾಗುತ್ತಿದೆ. ಶುಕ್ರ ಗ್ರಹದ ತಾಪಮಾನ 475 ಡಿಗ್ರಿ ಸೆ. ಆಗಿರುವುದರಿಂದ ಅಲ್ಲಿ ಮನುಷ್ಯ ವಾಸಿಸುವುದು ಕಷ್ಟ. ಲಕ್ಷಾಂತರ ವರ್ಷಗಳ ಹಿಂದೆ ಮಂಗಳ ಗ್ರಹದಲ್ಲಿ ನೀರು ಕಣ್ಮರೆಯಾಗಿರುವ ಸಂಗತಿ ಸಂಶೋಧನೆಗಳಿಂದ ತಿಳಿಯುತ್ತಿದೆ. ಈ ಕಾರಣದಿಂದ ಗುರುವಿನ ಉಪಗ್ರಹಗಳು ಭರವಸೆ ಹುಟ್ಟಿಸಿವೆ.

ಗುರು ಗ್ರಹದ ರಚನೆ

- ಗುರು ಗ್ರಹವು ಸೌರಮಂಡಲದಲ್ಲಿ ಅತ್ಯಂತ ದೊಡ್ಡ ಗ್ರಹವಾಗಿದೆ. ಇದರ ವಾಯುಗೋಳವು ಜಲಜನಕ, ಮೀಥೇನ್ ಮತ್ತು ಹೀಲಿಯಂಗಳಿಂದ ಆವೃತವಾಗಿದೆ. ಈ ಗ್ರಹವನ್ನು ಕಂಡುಹಿಡಿದವರು ಗೆಲಿಲಿಯೊ ಗೆಲಲಿ. ಗೆಲಿಲಿಯೊ, ಕ್ಯಾಲಿಸ್ಟೊ, ಗ್ಯಾನಿಮೀಡ್, ಯುರೋಪಾ ಮತ್ತು ಐಯೊ ಹೊ ಎಂಬ ನಾಲ್ಕು ಉಪಗ್ರಹಗಳನ್ನು ಕಂಡು ಹಿಡಿದರು. ಇವುಗಳಲ್ಲಿ ಎಂಟು ಜೀವಂತ ಜ್ವಾಲಾಮುಖಿಗಳಿವೆ.
- ಸೌರಮಂಡಲದಲ್ಲಿಯೇ ಅತ್ಯಂತ ದೊಡ್ಡದಾದಂತಹ ಉಪಗ್ರಹ ಗ್ಯಾನಿಮೀಡ್. ಗುರು ಗ್ರಹವು ಅತಿ ಹೆಚ್ಚು ಗುರುತ್ವ ಹೊಂದಿರುವ ಗ್ರಹವಾಗಿದೆ. ಕಾರಣ ಇದರಲ್ಲಿ ಅತಿ ಹೆಚ್ಚು ದ್ರವ್ಯರಾಶಿ(ತೂಕ)ಇದೆ. ಈ ಗ್ರಹವು ಅತಿ ಕಡಿಮೆ ಅಕ್ಷ ಭ್ರಮಣೆ ಹೊಂದಿದೆ (9 ಗಂಟೆ ಮತ್ತು 56 ನಿಮಿಷ). ಇದರ ಅಧ್ಯಯನಕ್ಕೆ ನಾಸಾ ಕಳುಹಿಸಿರುವ ಉಪಗ್ರಹ ಜುನೊ.

ಉಪಸಂಹಾರ: ಚಂದ್ರನ ನೆಲದಲ್ಲಿ ಮನುಷ್ಯ ಹಲವು ಗಂಟೆಗಳು ಕಳೆದ ಕಾರಣ, ಆ ಉಪಗ್ರಹದ ಬಗ್ಗೆ ತಕ್ಕಮಟ್ಟಿಗಿನ ತಿಳಿವಳಿಕೆ ಬಂದಿದೆ. ಮಂಗಳ ಮತ್ತು ಶುಕ್ರ ಗ್ರಹಗಳ ಮೇಲೆ ಆಗಾಗ್ಗೆ ರೋವರ್‌ಗಳನ್ನು ಇಳಿಸಿದ ಮೇಲೆ ಹಲವಾರು ಸಂಶೋಧನೆಗಳಾಗಿವೆ. ಆದರೆ ಸೌರವ್ಯೂಹದ ಅತಿ ದೊಡ್ಡ ಗ್ರಹ ಗುರುವಿನ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಕಾರಣ, ಅದು ಭೂಮಿಯಿಂದ ಸಾಕಷ್ಟು ದೂರದಲ್ಲಿದೆ. ಪ್ರಸ್ತುತ ಇಎಸ್‌ಎ, ನಾಸಾ ಕೈಗೊಳ್ಳುತ್ತಿರುವ ಸಂಶೋಧನೆಯಿಂದಲಾದರೂ ಗುರು ಗ್ರಹದ ಬಗೆಗಿನ ರಹಸ್ಯಗಳು ಹೊರಬರುತ್ತವೆಯೇ ಎಂಬುದನ್ನು ಕಾದು ನೋಡಬೇಕಾಗಿದೆ.

ಯುಪಿಎಸ್‌ಸಿ ಪ್ರಿಲಿಮ್ಸ್ ಪೂರ್ವಸಿದ್ಧತೆ ಹೀಗಿರಲಿ

ಪ್ರಸಕ್ತ ಸಾಲಿನ ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ಮೇ 28ರಂದು ನಡೆಯುತ್ತಿದೆ. ಪರೀಕ್ಷಾ ಸಿದ್ಧತೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಅನುಸರಿಸಬೇಕಾದ ಕೆಲವು ಕ್ರಮಗಳ ಕುರಿತು ಇಲ್ಲಿ ಮಾಹಿತಿ ನೀಡಲಾಗಿದೆ.



ಬಸವರಾಜ್ ಎಸ್.

ಪ್ರತಿ ವರ್ಷದಂತೆ ಈ ವರ್ಷವೂ ಮೇ 28ರಂದು ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ಪರೀಕ್ಷೆ(ಪ್ರಿಲಿಮ್ಸ್) ನಡೆಸುತ್ತಿದೆ. ಪ್ರಸಕ್ತ ವರ್ಷ 180 ಐಎಎಸ್, 200 ಐಪಿಎಸ್ ಸೇರಿದಂತೆ 1105 ಹುದ್ದೆಗಳಿಗೆ ಪರೀಕ್ಷೆ ನಡೆಸುತ್ತಿದೆ.

ಪ್ರತಿ ವರ್ಷ ಸರಿ ಸುಮಾರು 10 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ಅರ್ಜಿ ಸಲ್ಲಿಸುತ್ತಾರೆ. ಆದರೆ 10 ಸಾವಿರ ಸ್ಪರ್ಧಾರ್ಥಿಗಳು ಮಾತ್ರ ಪ್ರಾಥಮಿಕ ಹಂತವನ್ನು ದಾಟುತ್ತಾರೆ. ಹಾಗಾದರೆ ನಿಜವಾಗಿಯೂ ಈ ಹಂತವನ್ನು ಭೇದಿಸುವುದು ಕಷ್ಟಕರವೇ?

ಖಂಡಿತವಾಗಿಯೂ ಇಲ್ಲ. ಇದಷ್ಟೇ ಅಲ್ಲ, ಯಾವುದೇ ಪರೀಕ್ಷೆಯೂ ಕಷ್ಟಕರವಲ್ಲ ಆದರೆ ಸಮಸ್ಯೆಯಿರುವುದು ಪರೀಕ್ಷೆಗಾಗಿ ನಡೆಸುವ ಸಿದ್ಧತೆ/ತಯಾರಿಯ ವಿಧಾನದಲ್ಲಿ.

ಸ್ಪರ್ಧಾತ್ಮಕ ಪರೀಕ್ಷೆಗಾಗಿ ನಡೆಸುವ ತಯಾರಿಯಲ್ಲಿ, ಅಭ್ಯರ್ಥಿಗಳು ತಮ್ಮ ಸ್ಮರಣಶಕ್ತಿಗಿಂತ, ತಾರ್ಕಿಕ ಚಿಂತನೆಯನ್ನು ಹೆಚ್ಚು ನಂಬಬೇಕು. ಉದಾಹರಣೆಗೆ, ಕಳೆದ ವರ್ಷದ ಪರೀಕ್ಷೆಯಲ್ಲಿ 'ಗ್ರೀನ್ ವಾಷಿಂಗ್' ಎಂಬ ಪದದ ಬಗ್ಗೆ ಒಂದು ಪ್ರಶ್ನೆಯಿತ್ತು - ಇಂತಹ ಪ್ರಶ್ನೆಗೆ ನಮ್ಮ ಸ್ಮರಣೆಯ ಬದಲಾಗಿ ಸಾಮಾನ್ಯ ಜ್ಞಾನದಿಂದ ಉತ್ತರಿಸಬೇಕು. ಆದರೆ ಹೆಚ್ಚಿನ ಅಭ್ಯರ್ಥಿಗಳಿಗೆ ಈ ಪ್ರಶ್ನೆಗೆ ಉತ್ತರಿಸುವುದು ಕಷ್ಟಕರವಾಗಿತ್ತು . ಏಕೆಂದರೆ ತಮ್ಮ ಸ್ವಂತ ಅವಲೋಕನಾ ಕೌಶಲವನ್ನು ಬಳಸದೇ, ಪುಸ್ತಕದಲ್ಲಿ ಓದಿದ್ದನ್ನು ಮಾತ್ರ ನಂಬಿದ್ದರು. ಇದು ಅಭ್ಯರ್ಥಿಗಳ ಇಂದಿನ ದೊಡ್ಡ ಸಮಸ್ಯೆ. ಹಾಗಾಗಿ, ನಾವು ಈ ಪರೀಕ್ಷಾ ಪ್ರಕ್ರಿಯೆಯನ್ನು ಆನಂದಿಸುವ ಹಾಗೂ ಪರೀಕ್ಷೆಯ ಬಗೆಗಿರುವ ಆತಂಕವನ್ನು ಹೋಗಲಾಡಿಸುವ ಮನಸ್ಥಿತಿಯನ್ನು ಅಭ್ಯರ್ಥಿಗಳಲ್ಲಿ ನಿರ್ಮಾಣ ಮಾಡಬೇಕಿದೆ.

ಈ ಹಿನ್ನೆಲೆಯಲ್ಲಿ ಮುಂಬರುವ ಪೂರ್ವಭಾವಿ ಪರೀಕ್ಷೆಗೆ ನಾವು ಹೇಗೆ ಉತ್ತಮವಾಗಿ ತಯಾರಿ ಮಾಡಿಕೊಳ್ಳಬಹುದು ? ಈ ಕುರಿತು ಕೆಲವು ಸಲಹೆಗಳಿವೆ:

- ಪರೀಕ್ಷಾ ಪಠ್ಯಕ್ರಮ ಮತ್ತು ಹಿಂದಿನ ವರ್ಷದ ಪ್ರಶ್ನಾಪತ್ರಿಕೆಗಳ ಮೇಲೆ ಹೆಚ್ಚಿನ ಗಮನ ನೀಡಿ. ಕೇವಲ ತರಬೇತಿ ಸಂಸ್ಥೆಗಳ ಅಧ್ಯಯನ ಸಾಮಗ್ರಿಗಳನ್ನು ಅವಲಂಬಿಸಬೇಡಿ.
- ಪತ್ರಿಕೆ-I ರಲ್ಲಿನ ಶೇ 75 ಪ್ರಶ್ನೆಗಳು ಪಠ್ಯಕ್ರಮದ ಸ್ಥಿರ ಭಾಗದಿಂದ ಬರುತ್ತವೆ ಆದ್ದರಿಂದ ರಾಜಕೀಯ, ಆರ್ಥಿಕತೆ, ಆಧುನಿಕ ಭಾರತದ ಇತಿಹಾಸ, ಪರಿಸರ, ಭೂಗೋಳ ಹಾಗೂ ಕಲೆ ಮತ್ತು ಸಂಸ್ಕೃತಿಯಂತಹ ಪ್ರಮುಖ ವಿಷಯಗಳನ್ನು ನಿರ್ಲಕ್ಷ್ಯಸಬೇಡಿ.
- ಪ್ರಚಲಿತ ವಿದ್ಯಮಾನಗಳು ಪತ್ರಿಕೆ-I ರಲ್ಲಿನ ಮತ್ತೊಂದು ಪ್ರಮುಖ ವಿಷಯವಾಗಿದೆ. ಇದಕ್ಕಾಗಿ ಕಳೆದ 6 ತಿಂಗಳ ವಸ್ತುನಿಷ್ಠ ಪ್ರಸ್ತುತ ಘಟನೆಗಳನ್ನು ಅಧ್ಯಯನ ಮಾಡಿ.
- ಪತ್ರಿಕೆ-II (CSAT) ಅರ್ಹತೆ ಪಡೆಯಲು ಶೇ 33.33 ಅಂಕಗಳ ಅಗತ್ಯವಿದ್ದರೂ, ವರ್ಷದಿಂದ ವರ್ಷಕ್ಕೆ ಈ ಪತ್ರಿಕೆಯನ್ನು ಭೇದಿಸುವುದು ಕಷ್ಟವಾಗುತ್ತಿದೆ. ಇಲ್ಲಿ ಗಮನಿಸಬೇಕಾದ ಮುಖ್ಯವಾದ ವಿಷಯವೆಂದರೆ ಮೊದಲು ಸುಲಭವಾದ ಪ್ರಶ್ನೆಗಳನ್ನು ಉತ್ತರಿಸಿ, ನಂತರ ಕಷ್ಟಕರವಾದ ಪ್ರಶ್ನೆಗಳನ್ನು ಉತ್ತರಿಸಬೇಕು. ಜನರಲ್ ಮೆಂಟಲ್ ಎಬಿಲಿಟಿ, ಲಾಜಿಕಲ್ ರೀಸನಿಂಗ್ ಮತ್ತು ರೀಡಿಂಗ್ ಕಾಂಪ್ರಹೆನ್ಷನ್‌ನಂತಹ ಮುಖ್ಯ ವಿಷಯಗಳ ಮೇಲೆ ಗಮನಹರಿಸಬೇಕು.
- ಸ್ಮೃತಿ (ನೆನಪಿನ) ಆಧಾರಿತ ಓದುವಿಕೆಗಿಂತ ಪರಿಕಲ್ಪನಾ ಸ್ಪಷ್ಟತೆಯ (ಕಾನ್ಸೆಪ್ಟ್) ಮೇಲೆ ಕೇಂದ್ರೀಕರಿಸಿ, ಏಕೆಂದರೆ ಯುಪಿಎಸ್‌ಸಿಯು ತಾರ್ಕಿಕ ಚಿಂತನೆಯುಳ್ಳ ನಾಗರಿಕ ಸೇವಕರನ್ನು ಅಪೇಕ್ಷಿಸುತ್ತದಯೇ ಹೊರತು ಕೇವಲ ಗಿಳಿ ಪಾಠ ಒಪ್ಪಿಸುವವರನ್ನಲ್ಲ.
- ಈ ಪರೀಕ್ಷೆಯ ಪಠ್ಯಕ್ರಮವು ಎಷ್ಟು ವಿಸ್ತಾರವಾಗಿದೆ ಎಂದರೆ ಯುಪಿಎಸ್‌ಸಿಯು ಸೂರ್ಯನ ಕೆಳಗೆ ಬರುವ ಯಾವುದೇ ವಿಷಯವನ್ನು ಕೇಳಬಹುದು. ಆದ್ದರಿಂದ ಸ್ಪರ್ಧಾರ್ಥಿಗಳು 'ತಮಗೆ ಏನು ಗೊತ್ತು ಮತ್ತು ಏನು ಗೊತ್ತಿಲ್ಲ' ಎಂಬ ಸ್ಪಷ್ಟತೆಯನ್ನು ಹೊಂದಿರಬೇಕು. ಈ ಸ್ಪಷ್ಟತೆಯು ತಾರ್ಕಿಕ ದೃಷ್ಟಿಕೋನದಿಂದ ಪ್ರಶ್ನೆಗಳನ್ನು ಎದುರಿಸಲು ಸಹಾಯ ಮಾಡುತ್ತದೆ.
- ಪ್ರತಿ ವರ್ಷ ಕನಿಷ್ಠ ಶೇ 20 ಪ್ರಶ್ನೆಗಳು ಪತ್ರಿಕೆ-I ರಲ್ಲಿ ಪ್ರಚಲಿತ ವಿದ್ಯಮಾನಗಳನ್ನು ಆಧರಿಸಿರುತ್ತವೆ. ಆದ್ದರಿಂದ ಅಭ್ಯರ್ಥಿಗಳು ಸಮೀಕ್ಷೆಯ ಮಾಹಿತಿ, ಇತ್ತೀಚಿಗೆ ಸುದ್ದಿಯಲ್ಲಿರುವ ಸ್ಥಳಗಳು ಮುಂತಾದ ಪ್ರಮುಖ ಸಂಗತಿಗಳನ್ನು ನೆನಪಿಟ್ಟುಕೊಳ್ಳಬೇಕು. ಆದರೆ ಮಾನವನ ಸ್ಮರಣಾ ಶಕ್ತಿ ಸೀಮಿತವಾಗಿದೆ. ಆದ್ದರಿಂದ ನಾವು ಪ್ರಮುಖ ವಾಸ್ತವಿಕ ಮಾಹಿತಿಗೆ ಆದ್ಯತೆ ನೀಡಬೇಕು ಮತ್ತು ಜ್ಞಾಪಕ ಶಕ್ತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು.
- ಪರೀಕ್ಷಾ ಕೇಂದ್ರಕ್ಕೆ ಹೋಗುವ ಮೊದಲು ಉತ್ಸಾಹದ ಮನಸ್ಥಿತಿಯನ್ನು ಹೊಂದಲು ಕನಿಷ್ಠ ಕಳೆದ ಐದು ವರ್ಷಗಳ ಪೂರ್ವಭಾವಿ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಸಿಸಬೇಕು. ಬಹು ಆಯ್ಕೆಯ ಪ್ರಶ್ನೆಗಳಲ್ಲಿ (MCQ) ತಾರ್ಕಿಕವಾಗಿ ಸರಿಯಾದ ಉತ್ತರವನ್ನು ಪಡೆಯುವ ಕೌಶಲವನ್ನು ಕಲಿಯಿರಿ.
- ನಿಮ್ಮನ್ನು ನೀವು ನಂಬಿ, ಅದುವೇ ನಿಮ್ಮ ಯಶಸ್ಸಿನ ಕೀಲಿಕೈ!

ಶುಭವಾಗಲಿ !



ಉದ್ಧವ್ ಠಾಕ್ರೆ ಬೆಂಬಲ ಗಿಟ್ಟಿಸಿದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್

‘ಸುಪ್ರೀಂ’ ಮೇಲೆ ಕೇಂದ್ರಕ್ಕೆ ನಂಬಿಕೆ ಇಲ್ಲ’

ಪ್ರಜಾವಾಣಿ ವಾರ್ತೆ

ಮುಂಬೈ/ನವದೆಹಲಿ: ದೆಹಲಿ ಆಡಳಿತಾತ್ಮಕ ಸೇವೆಗಳ ಮೇಲೆ ನಿಯಂತ್ರಣ ಸಾಧಿಸಲು ಸುಗ್ರೀವಾಜ್ಞೆ ತಂದಿರುವುದು ನೋಡಿದರೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಮೇಲೆ ನಂಬಿಕೆ ಇಲ್ಲದಿರುವುದು ಗೊತ್ತಾಗುತ್ತದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಕಿಡಿಕಾರಿದ್ದಾರೆ.

ಮುಂಬೈನಲ್ಲಿ ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರನ್ನು ಅವರ ನಿವಾಸ ‘ಮಾತೋಶ್ರೀ’ಯಲ್ಲಿ ಭೇಟಿಯಾಗಿ ಸುಗ್ರೀವಾಜ್ಞೆಯ ವಿರುದ್ಧ ಎಎಪಿಯ ಹೋರಾಟಕ್ಕೆ ಬೆಂಬಲ ಕೋರಿದ ಕೇಜ್ರಿವಾಲ್ ನಂತರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

‘ರಾಜ್ಯಸಭೆಯಲ್ಲಿ ಈ ಮಸೂದೆಯ (ದೆಹಲಿಯ ಆಡಳಿತ ಸೇವೆಗಳ ನಿಯಂತ್ರಣ) ವಿರುದ್ಧ ತಮ್ಮ ಪಕ್ಷದ ಸದಸ್ಯರು ಮತ ಚಲಾಯಿಸಲಿದ್ದಾರೆಂದು ಉದ್ಧವ್ ಠಾಕ್ರೆ ತಿಳಿಸಿದ್ದಾರೆ. ಈ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಣಿಸಲು ನಾವು ಸಫಲರಾದರೆ, ಮುಂದಿನ ಲೋಕಸಭೆ ಚುನಾವಣೆಯಲ್ಲಿ ಮೋದಿ ಸರ್ಕಾರ ಪುನಃ ಅಧಿಕಾರಕ್ಕೆ ಬರುವುದಿಲ್ಲವೆನ್ನುವುದು ಖಾತ್ರಿಯಾಗಲಿದೆ’ ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಕಳೆದ ವರ್ಷ ಮಹಾರಾಷ್ಟ್ರದಲ್ಲಿ ಠಾಕ್ರೆ ನೇತೃತ್ವದ ರಾಜ್ಯ ಸರ್ಕಾರ ಪತನಗೊಳಿಸಿದ್ದನ್ನು ಉಲ್ಲೇಖಿಸಿದ ಅವರು, ‘ಬಿಜೆಪಿಯೇತರ ರಾಜ್ಯ ಸರ್ಕಾರಗಳನ್ನು ಉರುಳಿಸಲು ಕೇಂದ್ರ ಸರ್ಕಾರವು ತನಿಖಾ ಏಜೆನ್ಸಿಗಳಾದ ಸಿಬಿಐ, ಇ.ಡಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ’ ಎಂದು ಆರೋಪಿಸಿದರು.

ಇ.ಡಿ ಶೋಧ– ಕೇಂದ್ರದಿಂದ ಅಧಿಕಾರ ದುರ್ಬಳಕೆ: ಸಂಜಯ್ ಸಿಂಗ್

ಮುಂಬೈ (ಪಿಟಿಐ): ಕೇಂದ್ರ ಸರ್ಕಾರವು ತನ್ನ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಎಎಪಿ ನಾಯಕ, ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರು ಬುಧವಾರ ಆರೋಪಿಸಿದ್ದಾರೆ. ದೆಹಲಿಯ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ತಮ್ಮ ಇಬ್ಬರು ಆಪ್ತರಾದ ಅಜಿತ್ ತ್ಯಾಗಿ ಮತ್ತು ಸರ್ವೇಶ್ ಮಿಶ್ರಾ ಅವರಿಗೆ ಸೇರಿದ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಶೋಧ ನಡೆಸಿದ ಹಿನ್ನೆಲೆಯಲ್ಲಿ ಅವರು ಹೀಗೆ ಪ್ರತಿಕ್ರಿಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನನ್ನ ಆಪ್ತರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಮತ್ತು ಇ.ಡಿ ಶೋಧ ನಡೆಸಲಾಗುತ್ತಿದೆ. ಅವರಿಗೆ ಏನು ಬೇಕೋ ಅದೇ ಮಾಡಲಿ’ ಎಂದರು.

ಬಿಜೆಪಿ ವಿರುದ್ಧ ಟೀಕಾಪ್ರಹಾರ ನಡೆಸಿದ ಉದ್ಧವ್ ಠಾಕ್ರೆ, ‘ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳನ್ನು ಸೋಲಿಸಲು ಮತ್ತು ದೇಶವನ್ನು ರಕ್ಷಿಸಲು ನಾವು ಒಗ್ಗೂಡಿದ್ದೇವೆ’ ಎಂದರು.

ಕೇಜ್ರಿವಾಲ್ ಜತೆಗೆ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್, ಎಎಪಿ ರಾಜ್ಯಸಭೆ ಸದಸ್ಯರಾದ ಸಂಜಯ್ ಸಿಂಗ್, ರಾಘವ್ ಛಡ್ಡಾ ಹಾಗೂ ದೆಹಲಿ ಸರ್ಕಾರ ಸಚಿವೆ ಅತಿಶಿ ಸಿಂಗ್ ಅವರು ಇದ್ದರು.

ಪವಾರ್– ಕೇಜ್ರಿವಾಲ್ ಭೇಟಿ: ಎನ್‌ಸಿಪಿ ನಾಯಕ ಶರದ್ ಪವಾರ್ ಅವರನ್ನು ಕೇಜ್ರಿವಾಲ್ ಗುರುವಾರ ಮಧ್ಯಾಹ್ನ ಭೇಟಿ ಮಾಡಿ, ತಮ್ಮ ಹೋರಾಟಕ್ಕೆ ಎನ್‌ಸಿಪಿ ನಾಯಕರ ಬೆಂಬಲ ಕೋರಲಿದ್ದಾರೆ.

ಕರ್ನಾಟಕಕ್ಕೂ ಇಂತಹ ಸುಗ್ರೀವಾಜ್ಞೆ ತರಲಿದೆ: ದೆಹಲಿಯ ಆಡಳಿತ ಸೇವೆ ನಿಯಂತ್ರಣದ ಸುಗ್ರೀವಾಜ್ಞೆ ವಿರುದ್ಧದ ಹೋರಾಡಲು ಅರವಿಂದ ಕೇಜ್ರಿವಾಲ್ ಅವರಿಗೆ ಬೆಂಬಲ ನೀಡಲು ಕಾಂಗ್ರೆಸ್ ನಾಯಕ ಅಜಯ್ ಮಾಕನ್ ವಿರೋಧ ವ್ಯಕ್ತಪಡಿಸಿದ ಮರು ದಿನವೇ ಎಎಪಿ ನಾಯಕ ಸೌರಭ್ ಭಾರದ್ವಾಜ್ ಅವರು ಕೇಂದ್ರ ಸರ್ಕಾರ ಮುಂದಿನ ದಿನಗಳಲ್ಲಿ ಕರ್ನಾಟಕ ಮತ್ತು ಇತರ ರಾಜ್ಯಗಳಲ್ಲಿ ಆಡಳಿತ ಸೇವೆಗಳನ್ನು ನಿಯಂತ್ರಿಸಲು ಇಂತಹದೇ ಸುಗ್ರೀವಾಜ್ಞೆ ತರಲಿದೆ ಎಂದು ಬುಧವಾರ ಎಚ್ಚರಿಸಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಭಾರದ್ವಾಜ್, ‘ಕರ್ನಾಟಕದ ಗೆಲುವಿಗಾಗಿ ಅಜಯ್ ಮಾಕನ್ ಅವರು ಸಂಭ್ರಮಿಸುತ್ತಿದ್ದಾರೆ. ಆದರೆ, ಕೇಂದ್ರವು ನಾಳೆ ಕರ್ನಾಟಕದಲ್ಲಿಯೂ ಇದೇ ರೀತಿಯ ಸುಗ್ರೀವಾಜ್ಞೆ ತರಬಹುದು. ಅಲ್ಲಿ ಪೊಲೀಸ್ ಅಧಿಕಾರ ರಾಜ್ಯ ಸರ್ಕಾರದ ಕೈತಪ್ಪಬಹುದು, ಆಗ ಅವರು ಏನು ಮಾಡಬೇಕು? ಇದನ್ನು ಮಾಕನ್ ನೆನಪಿನಲ್ಲಿಟ್ಟುಕೊಳ್ಳಬೇಕು. ಸುಗ್ರೀವಾಜ್ಞೆ ವಿವಾದದ ಬಗ್ಗೆ ನಾವು ದನಿ ಎತ್ತಿರುವುದಕ್ಕೆ ಇಲ್ಲಿ ಕಾಂಗ್ರೆಸ್ ಜೀವಂತವಾಗಿದೆ. ಇಲ್ಲಿ ಅಜಯ್ ಮಾಕನ್ ಯಾರಿಗೆ ಗೊತ್ತು?’ ಎಂದು ಹರಿಹಾಯ್ದಿದ್ದಾರೆ.

‘ಎಎಪಿ ನಾಯಕರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ನಾಯಕ ಸಂದೀಪ್ ದೀಕ್ಷಿತ್ ಅವರು , ಕೇಂದ್ರ ಸರ್ಕಾರ ಇತರ ರಾಜ್ಯಗಳಲ್ಲಿ ಇದೇ ರೀತಿಯ ಸುಗ್ರೀವಾಜ್ಞೆ ತರಲು ಸಾಧ್ಯವಿಲ್ಲ. ರಾಜ್ಯ ಸರ್ಕಾರದ ಕಾನೂನು ಮತ್ತು ಅಧಿಕಾರಗಳನ್ನು ಸಂವಿಧಾನವು ಸ್ಪಷ್ಟವಾಗಿ ವ್ಯಾಖ್ಯಾನಿಸಿದೆ’ ಎಂದು ಹೇಳಿದ್ದಾರೆ.

‘ಹೆಚ್ಚುವರಿ ಪಟ್ಟಿಯಲ್ಲಿರುವವರ ನೇಮಕ: ರಾಜ್ಯದ ವಿವೇಚನೆಗೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಹೆಚ್ಚುವರಿ ಪಟ್ಟಿಯಲ್ಲಿಅಭ್ಯರ್ಥಿಯೊಬ್ಬರ ಹೆಸರು ಇದ್ದ ಮಾತ್ರಕ್ಕೆ ಅದು ನೇಮಕಾತಿಗೆ ಸಂಬಂಧಿಸಿದ ಬಾಧ್ಯತೆ ಅಥವಾ ಹಕ್ಕನ್ನು ಸೃಷ್ಟಿಸುವುದಿಲ್ಲ. ಇಂತಹ ಪಟ್ಟಿಯಲ್ಲಿರುವವರನ್ನು ಖಾಲಿ ಹುದ್ದೆಗಳಿಗೆ ನೇಮಿಸುವುದು ರಾಜ್ಯ ಸರ್ಕಾರದ ವಿವೇಚನೆಗೆ ಒಳಪಟ್ಟಿರುತ್ತದೆ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ರಾಜ್ಯ ಸರ್ಕಾರವು ಈ ವಿಚಾರದಲ್ಲಿ ನಿರಂಕುಶವಾಗಿ ವರ್ತಿಸುವ ಹಾಗಿಲ್ಲ. ಅದು ಕೈಗೊಳ್ಳುವ ತೀರ್ಮಾನವ ನ್ನು ನ್ಯಾಯಾಂಗದ ಪರಿಶೀಲನೆಗೆ ಒಳಪಡಿಸಲಾಗುತ್ತದೆ’ ಎಂದೂ ತಿಳಿಸಿದೆ.

ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹಾಗೂ ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ದ್ವಿಸದಸ್ಯ ನ್ಯಾಯಪೀಠ, ಎಸ್.ಭಾರತಿ ಎಂಬುವರನ್ನು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸಹ ಶಿಕ್ಷಕಿಯನ್ನಾಗಿ ನೇಮಿಸುವ ಕುರಿತಾಗಿ ಕರ್ನಾಟಕ ಹೈಕೋರ್ಟ್ ನೀಡಿದ್ದ ನಿರ್ದೇಶನಗಳನ್ನು ತಳ್ಳಿಹಾಕಿದೆ.

‘ನೇಮಕಾತಿ ಮಾಡಲೇಬೇಕೆಂಬ ಬಗ್ಗೆ ರಾಜ್ಯ ಸರ್ಕಾರದ ಮೇಲೆ ಯಾವುದೇ ಬಾಧ್ಯತೆ ಇಲ್ಲ ಎಂಬುದು ಸ್ಪಷ್ಟ. ಹೆಚ್ಚುವರಿ ಪಟ್ಟಿ ಪ್ರಕಟಿಸಿದ ಮಾತ್ರಕ್ಕೆ ಅದು ನೇಮಕಾತಿ ಸಂಬಂಧ ಯಾವುದೇ ಹಕ್ಕನ್ನು ಸೃಷ್ಟಿಸುವುದಿಲ್ಲ. 2001ರಲ್ಲಿ ತಿದ್ದುಪಡಿ ಮಾಡಲಾಗಿರುವ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳ (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮದಡಿ ಇಂತಹ ಯಾವುದೇ ಅಧಿಕಾರ ನೀಡಲಾಗಿಲ್ಲ’ ಎಂದು ನ್ಯಾಯಪೀಠ ಹೇಳಿದೆ.

ಹಿಂದಿನ ತೀರ್ಪುಗಳನ್ನು ಉಲ್ಲೇಖಿಸಿರುವ ನ್ಯಾಯಪೀಠ, ‘ಕಡ್ಡಾಯ ನಿಯಮಗಳು ಇದ್ದಾಗ ಮಾತ್ರವೇ ಹೆಚ್ಚುವರಿ ಪಟ್ಟಿಯಲ್ಲಿರುವವರನ್ನು ಖಾಲಿ ಹುದ್ದೆಗಳಿಗೆ ನೇಮಕ ಮಾಡಬೇಕೆಂಬ ಪ್ರಶ್ನೆ ಉದ್ಭವಿಸುತ್ತದೆ. ಈ ರೀತಿಯ ನಿಯಮವೇ ಇಲ್ಲದಿರುವಾಗ ಇಂತಹ ಪಟ್ಟಿಯಲ್ಲಿರುವವರನ್ನು ಖಾಲಿ ಹುದ್ದೆಗಳಿಗೆ ನೇಮಿಸುವುದು ರಾಜ್ಯ ಸರ್ಕಾರದ ವಿವೇಚನೆಗೆ ಒಳಪಟ್ಟಿರುತ್ತದೆ’ ಎಂದು ತಿಳಿಸಿದೆ.

‘ನೇಮಕಾತಿ ಅಧಿಕಾರದ ಕುರಿತು ಹೈಕೋರ್ಟ್ ನೀಡಿರುವ ನಿರ್ಣಯವು ದೋಷದಿಂದ ಕೂಡಿದೆ’ ಎಂದೂ ಪೀಠ ಹೇಳಿದೆ.

ಲಿಖಿತ ಪ್ರತಿಕ್ರಿಯೆ ಸಲ್ಲಿಸಲು ಅವಕಾಶ ನೀಡಿದ ಕೋರ್ಟ್

ಹೊಸ ಪಾಸ್‌ಪೋರ್ಟ್‌ಗೆ ಎನ್‌ಒಸಿಗಾಗಿ ರಾಹುಲ್ ಅರ್ಜಿ: ಸ್ವಾಮಿ ವಿರೋಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಹೊಸ ಸಾಮಾನ್ಯ ಪಾಸ್‌ಪೋರ್ಟ್ ಪಡೆಯಲು ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಕೋರಿ ರಾಹುಲ್ ಗಾಂಧಿ ದೆಹಲಿ ನ್ಯಾಯಾಲಯಕ್ಕೆ ಸಲ್ಲಿಸಿರುವ ಮನವಿಗೆ ಬಿಜೆಪಿ ಮಾಜಿ ಸಂಸದ ಸುಬ್ರಮಣಿಯನ್ ಸ್ವಾಮಿ ವಿರೋಧ ವ್ಯಕ್ತಪಡಿಸಿದ್ದಾರೆ.

ಒಂದು ವೇಳೆ ರಾಹುಲ್ ಗಾಂಧಿಗೆ ವಿದೇಶಕ್ಕೆ ತೆರಳಲು ಅವಕಾಶ ನೀಡಿದರೆ, ನ್ಯಾಷನಲ್ ಹೆರಾಲ್ಡ್ ಪ್ರಕರಣದ ತನಿಖೆಗೆ ಅಡ್ಡಿಯಾಗಲಿದೆ ಎಂದೂ ಅವರು ವಾದಿಸಿದ್ದಾರೆ.

ರಾಹುಲ್ ಅವರ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸಲು ಸುಬ್ರಮಣಿಯನ್ ಸ್ವಾಮಿ ಸಮಯಾವಕಾಶ ಕೋರಿದ್ದರಿಂದ ಗುರುವಾರದೊಳಗೆ ಲಿಖಿತ ಪ್ರತಿಕ್ರಿಯೆ ಸಲ್ಲಿಸಲು ಅವರಿಗೆ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ (ಎಸಿಎಂ) ವೈಭವ್ ಮೆಹ್ತಾ ಅವಕಾಶ ನೀಡಿದ್ದಾರೆ. ಅಲ್ಲದೇ, ಶುಕ್ರವಾರಕ್ಕೆ (ಮೇ 26ಕ್ಕೆ) ಈ ಅರ್ಜಿಯ ಮುಂದಿನ ವಿಚಾರಣೆಯನ್ನು ನಿಗದಿಪಡಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಪದನಾಮ ‘ಮೋದಿ’ ಕುರಿತು ನೀಡಿದ್ದ ಮಾನಹಾನಿ ಹೇಳಿಕೆ ಸಂಬಂಧ ದಾಖಲಾಗಿದ್ದ ಮಾನನಷ್ಟ ಮೊಕದ್ದಮೆಯಲ್ಲಿ ರಾಹುಲ್ ಗಾಂಧಿ ಶಿಕ್ಷೆಗೆ ಗುರಿಯಾಗಿದ್ದು, ಲೋಕಸಭೆ ಸದಸ್ಯತ್ವದಿಂದಲೂ ಅನರ್ಹಗೊಂಡಿದ್ದಾರೆ. ಇದರಿಂದಾಗಿ ತಮ್ಮ ರಾಜತಾಂತ್ರಿಕ ಪಾಸ್‌ಪೋರ್ಟ್ ಮತ್ತು ದಾಖಲೆಗಳನ್ನು ಕೋರ್ಟ್‌ಗೆ ಒಪ್ಪಿಸಿರುವ ರಾಹುಲ್, ಸಾಮಾನ್ಯ ಪಾಸ್‌ಪೋರ್ಟ್ ಪಡೆಯಲು ಎನ್‌ಒಸಿ ಕೋರಿ ನ್ಯಾಯಾಲಯಕ್ಕೆ ಮಂಗಳವಾರ ಅರ್ಜಿ ಸಲ್ಲಿಸಿದ್ದರು. ರಾಹುಲ್ ಗಾಂಧಿ ಮುಂದಿನ ತಿಂಗಳು ಅಮೆರಿಕ ಪ್ರವಾಸ ಕೈಗೊಳ್ಳಲಿದ್ದಾರೆ.

ರಾಹುಲ್ ಪರ ವಕೀಲರಾದ ನಿಖಿಲ್ ಭಳ್ಳ ಮತ್ತು ಸುಮಿತ್ ಕುಮಾರ್ ಅವರೊಂದಿಗೆ ಹಾಜರಿದ್ದ ವಕೀಲ ತರನುಮ್ ಚೀಮಾ, ರಾಹುಲ್‌ಗೆ ಎನ್‌ಒಸಿ ನೀಡಬೇಕು ಎಂದು ಮನವಿ ಮಾಡಿದರು.

ರಾಹುಲ್ ಅವರಿಗೆ ಜಾಮೀನು ನೀಡುವಾಗ ನ್ಯಾಯಾಲಯ ಅವರ ವಿದೇಶ ಪ್ರಯಾಣದ ಮೇಲೆ ನಿರ್ಬಂಧ ಹೇರಿಲ್ಲ. ವಿದೇಶ ಪ್ರಯಾಣ ನಿರ್ಬಂಧಿಸಬೇಕೆಂದು ಅರ್ಜಿದಾರ ಸ್ವಾಮಿ ಅವರು ಮಾಡಿದ ಮನವಿಯನ್ನು ನ್ಯಾಯಾಲಯ ತಿರಸ್ಕರಿಸಿದೆ. ಪ್ರಯಾಣ ಕೈಗೊಳ್ಳುವುದು ವ್ಯಕ್ತಿಯ ಮೂಲಭೂತ ಹಕ್ಕು. ರಾಹುಲ್ ಯಾವುದೇ ನ್ಯಾಯಾಲಯದಿಂದ ಅನುಮತಿ ಪಡೆಯದೆ ಹಲವು ಬಾರಿ ಪ್ರಯಾಣ ಕೈಗೊಂಡಿದ್ದಾರೆ ಎಂದು ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ (ಎಸಿಎಂಎಂ) ವೈಭವ್ ಮೆಹ್ತಾ ಹೇಳಿದರು. ಆದಾಗ್ಯೂ, ಈ ಅರ್ಜಿಯ ಬಗ್ಗೆ ಪ್ರತಿಕ್ರಿಯೆ ನೀಡುವ ಹಕ್ಕು ಸುಬ್ರಮಣಿಯನ್ ಸ್ವಾಮಿ ಅವರಿಗೆ ಇದೆ ಎಂದೂ ವೈಭವ್ ಹೇಳಿದರು.

ಆಜಂ ಖಾನ್ ಖುಲಾಸೆ



ಆಜಂ ಖಾನ್

ರಾಂಪುರ (ಉತ್ತರಪ್ರದೇಶ): ಸಮಾಜವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿ ಆಜಂ ಖಾನ್ ಅವರನ್ನು ದ್ವೇಷ ಭಾಷಣ ಪ್ರಕರಣದಲ್ಲಿ ಇಲ್ಲಿನ ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ಬುಧವಾರ ಖುಲಾಸೆಗೊಳಿಸಿದೆ.

ಈ ಪ್ರಕರಣದಲ್ಲಿ ಜನಪ್ರತಿನಿಧಿಗಳ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು 2022ರ ಅ. 27ರಂದು ಆಜಂ ಖಾನ್ ಅವರಿಗೆ ಮೂರು ವರ್ಷಗಳ ಶಿಕ್ಷೆ ಹಾಗೂ ₹ 6,000 ದಂಡ ವಿಧಿಸಿತ್ತು. ರಾಂಪುರ ಸದರ್ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ಶಾಸಕರಾಗಿದ್ದ ಖಾನ್ ಅವರು, ಈ ತೀರ್ಪು ಪ್ರಕಟವಾದ ಬೆನ್ನಲ್ಲೇ ಶಾಸಕ ಸ್ಥಾನ ಕಳೆದುಕೊಂಡಿದ್ದರು.

ಈ ಪ್ರಕರಣದಿಂದ ಖಾನ್ ಅವರನ್ನು ಖುಲಾಸೆಗೊಳಿಸಿರುವ ನ್ಯಾಯಾಲಯವು ಈ ಸಂಬಂಧ 70 ಪುಟಗಳ ಆದೇಶ ಹೊರಡಿಸಿದೆ. ಅದರಲ್ಲಿ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ತೀರ್ಪುಗಳನ್ನು ಉಲ್ಲೇಖಿಸಿದೆ. ಕೆಳ ಹಂತದ ನ್ಯಾಯಾಲಯದ ಆದೇಶ ಪ್ರಶ್ನಿಸಿ ಖಾನ್ ಮೇಲ್ಮನವಿ ಸಲ್ಲಿಸಿದ್ದರು. ಈ ಸಂಬಂಧ ವಾದ, ಪ್ರತಿವಾದ ಆಲಿಸಿದ ನ್ಯಾಯಾಲಯ ಬುಧವಾರ ಆದೇಶ ಪ್ರಕಟಿಸಿದೆ.

2019ರ ಲೋಕಸಭಾ ಚುನಾವಣೆ ವೇಳೆ ಖಾನ್ ಅವರು ದ್ವೇಷ ಭಾಷಣ ಮಾಡಿದ್ದಾರೆ ಎಂದು ಆರೋಪಿಸಿ ದೂರು ದಾಖಲಾಗಿತ್ತು. ಆಗ ಖಾನ್ ಅವರು ರಾಂಪುರ ಲೋಕಸಭಾ ಕ್ಷೇತ್ರದಲ್ಲಿ ಎಸ್‌ಪಿ–ಬಿಎಸ್‌ಪಿಯ ಜಂಟಿ ಅಭ್ಯರ್ಥಿಯಾಗಿ ಕಣದಲ್ಲಿದ್ದರು. ಲೋಕಸಭಾ ಚುನಾವಣೆಯಲ್ಲಿ ವಿಜೇತರಾಗಿದ್ದ ಅವರು, ನಂತರ ನಡೆದ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾದ ಕಾರಣ ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದರು.



ಜೆಡಿಎಸ್ ಸಭೆ

ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಅವರು ತಮ್ಮ ನಿವಾಸದಲ್ಲಿ ಕರೆದಿದ್ದ ಸಭೆಯಲ್ಲಿ ಪಕ್ಷದ ನೂತನ ಶಾಸಕರನ್ನು ಉದ್ದೇಶಿಸಿ ಮಾತನಾಡಿದರು. ಎಚ್‌.ಡಿ.ಕುಮಾರಸ್ವಾಮಿ, ಜಿ.ಟಿ. ದೇವೇಗೌಡ ಇತರರು ಇದ್ದಾರೆ

ಯಾರಿಗುಂಟು ‘ಗ್ಯಾರಂಟಿ’?

ಒಂದನೇ ಪುಟದಿಂದ...

ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ಮಧ್ಯೆ, ಸಂಪುಟದಲ್ಲಿ ಯಾರಿರಬೇಕು–ಯಾರಿರಬಾರದು ಎಂಬ ವಿಷಯ ವಿವಾದಕ್ಕೆ ತಿರುಗಿದ್ದರಿಂದ ಅದು ಕೈಗೂಡಲಿಲ್ಲ. ಕೊನೆಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಜತೆ ಎಂಟು ಸಚಿವರಷ್ಟೇ ಪ್ರಮಾಣ ವಚನ ಸ್ವೀಕರಿಸಿದರು. ಇನ್ನೂ 24 ಸ್ಥಾನಗಳು ಖಾಲಿ ಇವೆ.

ಸಂಪುಟ ವಿಸ್ತರಣೆ ಇನ್ನೂ ಎರಡು ಕಂತುಗಳಲ್ಲಿ ನಡೆಯುವ ಅಂದಾಜಿದೆ. ಮೊದಲ ಕಂತಿನ ವಿಸ್ತರಣೆಯನ್ನು ಅಂತಿಮಗೊಳಿಸಲು ಇಬ್ಬರು ನಾಯಕರು ತಮ್ಮ ಪಕ್ಷದ ವರಿಷ್ಠರ ಭೇಟಿಗಾಗಿ ಬುಧವಾರವೇ ದೆಹಲಿಗೆ ತಲುಪಿದ್ದಾರೆ. ಆಕಾಂಕ್ಷಿಗಳ ದೊಡ್ಡ ದಂಡೇ ದೆಹಲಿಗೆ ತೆರಳಿ, ಮೊಕ್ಕಾಂ ಮಾಡಿದೆ. ‘ಯಾವೆಲ್ಲ ಶಾಸಕರಿಗೆ ಸಚಿವ ಸ್ಥಾನ ಕೊಡಿಸುತ್ತೇವೆ’ ಎಂಬ ‘ಗ್ಯಾರಂಟಿ’ ನೀಡುವ ಸ್ಥಿತಿಯಲ್ಲಿ ಇಬ್ಬರು ನಾಯಕರು ಇದ್ದಾರೆ. ಒಬ್ಬರ ಪಟ್ಟಿಗೆ ಮತ್ತೊಬ್ಬರು ಬಗ್ಗುತ್ತಿಲ್ಲ. ಹಿಡಿದ ಪಟ್ಟು ಬಿಗಿಯಾಗುತ್ತಾ ಹೋದರೆ ಯಾರಿಗೆಲ್ಲ ‘ಗ್ಯಾರಂಟಿ’ ಸಿಗಲಿದೆ ಎಂಬ ನಿರೀಕ್ಷೆ ಶಾಸಕರಲ್ಲಿದೆ.

ಸಂಪುಟ: ಇಂದು ಮತ್ತೆ ಕಸರತ್ತು

ಒಂದನೇ ಪುಟದಿಂದ...

ಮೊದಲ ಹಂತದಲ್ಲಿ 25 ಸಚಿವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಯೋಜಿಸಲಾಗಿತ್ತು. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವಿನ ಭಿನ್ನಾಭಿಪ್ರಾಯದ ಕಾರಣಕ್ಕೆ ಎಂಟು ಮಂದಿ ಮಾತ್ರ ಸಂಪುಟ ಸೇರಿದ್ದರು. ಈ ಸಚಿವರಿಗೆ ಇನ್ನೂ ಖಾತೆಗಳ ಹಂಚಿಕೆ ಆಗಿಲ್ಲ.

ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರು ಪ್ರತ್ಯೇಕವಾಗಿ ನವದೆಹಲಿಗೆ ಬುಧವಾರ ಬಂದಿದ್ದಾರೆ. ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರು ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರೊಂದಿಗೆ ಗುರುವಾರ ಚರ್ಚೆ ನಡೆಸಲಿದ್ದಾರೆ. ನಂತರ, ಉಭಯ ನಾಯಕರು ಖರ್ಗೆ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಚಿವ ಸ್ಥಾನ ನಿರೀಕ್ಷೆಯಲ್ಲಿದ್ದ ಹಲವು ಹಿರಿಯ ಶಾಸಕರು ಈಗಾಗಲೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಸಂಪುಟ ಸೇರಲು ಒತ್ತಡ ಹಾಕುತ್ತಿದ್ದಾರೆ. ಹಲವು ಶಾಸಕರು ದೆಹಲಿಗೆ ದೌಡಾಯಿಸಿ ಹೈಕಮಾಂಡ್ ಮೇಲೆ ಒತ್ತಡ ಹೇರುವ ಪ್ರಯತ್ನ ಆರಂಭಿಸಿದ್ದಾರೆ.

‘ಮುಖ್ಯಮಂತ್ರಿ ಸೇರಿ ಒಟ್ಟು 34 ಸದಸ್ಯರಿಗೆ ಸಂಪುಟದಲ್ಲಿ ಅವಕಾಶವಿದೆ. ಸಂಪುಟಕ್ಕೆ ಮತ್ತೆ 20 ಮಂದಿಯನ್ನು ಸೇರಿಸಿಕೊಳ್ಳಲು ಉದ್ದೇಶಿಸಲಾಗಿದೆ. ಅತೃಪ್ತರನ್ನು ಸಮಾಧಾನಪಡಿಸಲು ನಾಲ್ಕು ಸ್ಥಾನಗಳನ್ನು ಖಾಲಿ ಬಿಡಲಾಗುವುದು’ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಇಂದಿರಾ ಕ್ಯಾಂಟೀನ್‌ನಲ್ಲಿ ಮುದ್ದೆ, ಚಪಾತಿ

ಒಂದನೇ ಪುಟದಿಂದ...

ಅಲ್ಲದೇ ಈ ಕ್ಯಾಂಟೀನ್‌ಗಳ ನಿರ್ವಹಣೆಗೆ ‘ಇಂದಿರಾ ಕ್ಯಾಂಟೀನ್ ಟ್ರಸ್ಟ್’ ಸ್ಥಾಪನೆ ಮಾಡುವುದು ಸೂಕ್ತ ಎಂದೂ ಹೇಳಿದೆ..

ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಆಹಾರ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ನಗರಾಭಿವೃದ್ಧಿ ಇಲಾಖೆಗಳ ಕಾರ್ಯದರ್ಶಿಗಳು, ಬಿಬಿಎಂಪಿ ಮುಖ್ಯ ಆಯುಕ್ತರು, ಹೆಸರಾಂತ ಹೋಟೆಲ್ ಉದ್ಯಮಿಗಳು, ಕೈಗಾರಿಕೋದ್ಯಮಿಗಳು, ಆರೋಗ್ಯ ಮತ್ತು ಪೌಷ್ಟಿಕಾಂಶ ತಜ್ಞರು, ಸಮಾಜ ಸೇವಕರನ್ನು ಟ್ರಸ್ಟಿ ಮಂಡಳಿಗೆ ನೇಮಿಸಬೇಕು ಎಂದು ತಿಳಿಸಿದೆ.

ಅಧ್ಯಕ್ಷ ಸ್ಥಾನಕ್ಕೆ ಸಿ.ಎಂ. ಇಬ್ರಾಹಿಂ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಸೋಲಿನ ನೈತಿಕ ಹೊಣೆ ಹೊತ್ತು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡರ ಮನೆಯಲ್ಲಿ ಬುಧವಾರ ನಡೆದ ಪಕ್ಷದ ಶಾಸಕರ ಸಭೆಗೂ ಮುನ್ನ ರಾಜೀನಾಮೆ ಸಲ್ಲಿಸಿದರು. ಆದರೆ, ಪಕ್ಷದ ವರಿಷ್ಠರು ರಾಜೀನಾಮೆಯನ್ನು ಇನ್ನೂ ಅಂಗೀಕರಿಸಿಲ್ಲ. ‘ಈ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನ ನಿರೀಕ್ಷಿಸಿದ್ದೆವು. ಆದರೆ, ಬಿಜೆಪಿ ವಿರುದ್ಧದ ಅಲೆಯ ಲಾಭವನ್ನು ಕಾಂಗ್ರೆಸ್ ಪಡೆದಿದೆ. ನಾವು 60 ಲಕ್ಷ ಮತ ಗಳಿಸಿದ್ದೇವೆ. ಆದರೂ, ಹಿನ್ನಡೆಯಾಗಿದೆ. ರಾಜೀನಾಮೆ ಅಂಗೀಕರಿಸುವುದು ಪಕ್ಷದ ವರಿಷ್ಠರಿಗೆ ಬಿಟ್ಟದ್ದು’ ಎಂದು ಇಬ್ರಾಹಿಂ ಹೇಳಿದರು.

ಇಂದು ಕಾರ್ಯಕಾರಿಣಿ: ವಿಧಾನಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ಆಗಿರುವ ಹಿನ್ನಡೆ ಕುರಿತು ಚರ್ಚಿಸಲು ಜೆಡಿಎಸ್ ರಾಷ್ಟ್ರೀಯ ಕಾರ್ಯಕಾರಿಣಿಯು ಗುರುವಾರ ಬೆಂಗಳೂರಿನಲ್ಲಿ ನಡೆಯಲಿದೆ. ಸೋಲಿಗೆ ಕಾರಣವಾದ ಅಂಶಗಳ ಕುರಿತು ಆತ್ಮಾವಲೋಕನ, ಪಕ್ಷ ಸಂಘಟನೆ ಬಲಪಡಿಸುವ ಕುರಿತು ಚರ್ಚೆ ನಡೆಸಲಾಗುವುದು ಎಂದು ಕುಮಾರಸ್ವಾಮಿ ತಿಳಿಸಿದರು.

ಅಸಮಾಧಾನ ವಿಸ್ತಾರ: ಕಾರ್ಯಕ್ರಮ ಬಹಿಷ್ಕಾರ

ಒಂದನೇ ಪುಟದಿಂದ...

ಬಿಎಸ್‌ಪಿ ತನ್ನ ನಿಲುವನ್ನು ಇನ್ನೂ ತಿಳಿಸಿಲ್ಲ. ಎಐಎಂಐಎಂ ಕೂಡ ಕಾರ್ಯಕ್ರಮವನ್ನು ಬಹಿಷ್ಕರಿಸುವುದಾಗಿ ಹೇಳಿದೆ. ಆದರೆ, ತನ್ನ ಈ ನಿರ್ಧಾರಕ್ಕೆ ಪಕ್ಷವು ಇತರ ವಿರೋಧ ಪಕ್ಷಗಳಿಗಿಂತ ಭಿನ್ನ ಕಾರಣ ನೀಡಿದೆ.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಉದ್ಘಾಟನೆ ನೆರವೇರಿಸುತ್ತಿದ್ದಲ್ಲಿ ಪಕ್ಷವು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿತ್ತು ಎಂದು ಎಐಎಂಐಎಂ ಹೇಳಿದೆ.

ಎನ್‌ಡಿಎಯೇತರ ಪಕ್ಷಗಳಾದ ವೈಎಸ್‌ಆರ್ ಕಾಂಗ್ರೆಸ್, ಅಕಾಲಿ ದಳ, ಟಿಡಿಪಿ ಪಕ್ಷಗಳ ನಾಯಕರು ಕಾರ್ಯಕ್ರಮಕ್ಕೆ ಹಾಜರಾಗಲಿದ್ದಾರೆ. ಮೇ 28ರಂದು ಪ್ರಧಾನಿ ನರೇಂದ್ರ ಮೋದಿ ಅವರು ಭವನದ ಉದ್ಘಾಟನೆ ನೆರವೇರಿಸಲಿದ್ದಾರೆ. ಈ ಸಂಬಂಧ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಆಹ್ವಾನ ನೀಡಿದ್ದಾರೆ.

ಹೇಳಿಕೆಯಲ್ಲಿ ಏನಿದೆ: ‘ಈ ಸರ್ಕಾರ ಪ್ರಜಾತಂತ್ರ ವ್ಯವಸ್ಥೆಗೆ ಬೆದರಿಕೆ ಒಡ್ಡುತ್ತಿದೆ. ಸರ್ವಾಧಿಕಾರಿ ರೀತಿಯಲ್ಲಿ ಹೊಸ ಕಟ್ಟಡವನ್ನು ನಿರ್ಮಿಸಲಾಗಿದೆ ಎಂದು ನಾವು ಹೇಳುತ್ತಲೇ ಇದ್ದೇವೆ. ಇದರ ಹೊರತಾಗಿಯೂ ನಮ್ಮೆಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ನಾವು ಮುಕ್ತ ಮನಸ್ಸು ಹೊಂದಿದ್ದೆವು. ಈಗ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಸಂಪೂರ್ಣ ಕಡೆಗಣಿಸಲಾಗಿದೆ. ಪ್ರಧಾನಿ ಮೋದಿ ಅವರೇ ಉದ್ಘಾಟನೆ ನೆರವೇರಿಸುತ್ತಿರುವುದು ಪ್ರಜಾಪ್ರಭುತ್ವದ ಮೇಲಿನ ನೇರ ಪ್ರಹಾರವಾಗಿದೆ’ ಎಂದು ವಿರೋಧ ಪಕ್ಷಗಳ ನಾಯಕರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ರಾಷ್ಟ್ರಪತಿಯವರು ಸೂಚನೆ ನೀಡುವುದು, ಸಂಸತ್‌ನ ಉಭಯ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡುವುದು, ಮಸೂದೆಗಳಿಗೆ ಅಂಕಿತ ಹಾಕುವ ಕಾರ್ಯ ಮಾಡುತ್ತಾರೆ. ಹೀಗಾಗಿ ಅವರಿಲ್ಲದೇ ಸಂಸತ್ ಕಾರ್ಯನಿರ್ವಹಣೆ ಸಾಧ್ಯವಿಲ್ಲ. ಆದರೂ, ರಾಷ್ಟ್ರಪತಿ ಮುರ್ಮು ಅವರನ್ನು ಆಹ್ವಾನಿಸದೇ, ನೂತನ ಕಟ್ಟಡವನ್ನು ಉದ್ಘಾಟಿಸಲು ಮೋದಿ ಮುಂದಾಗಿದ್ದಾರೆ’.

‘ಘನತೆ ಇಲ್ಲದ ಇಂಥ ನಡೆಯು ರಾಷ್ಟ್ರಪತಿಯಂತಹ ಉನ್ನತ ಸ್ಥಾನಕ್ಕೆ ಅವಮಾನ ಮಾಡಿದಂತೆ. ಸಂವಿಧಾನ ಆಶಯದ ಉಲ್ಲಂಘನೆಯಾಗುತ್ತದೆ. ಜೊತೆಗೆ, ಮೊದಲ ಬಾರಿಗೆ ಆದಿವಾಸಿ ಮಹಿಳೆಯೊಬ್ಬರು ರಾಷ್ಟ್ರಪತಿ ಸ್ಥಾನ ಅಲಂಕರಿಸಿದ್ದಾರೆ. ಆದರೆ, ಕೇಂದ್ರ ಸರ್ಕಾರದ ಈ ನಡೆ, ಒಳಗೊಳ್ಳುವಿಕೆ ಮನೋಧರ್ಮವನ್ನು ಅವಹೇಳನ ಮಾಡಿದಂತಾಗುತ್ತದೆ’ ಎಂದು ವಿರೋಧ ಪಕ್ಷಗಳು ಹೇಳಿವೆ.

‘ಜನರ ಪರ ಧ್ವನಿ ಎತ್ತಿದ್ದ ವಿರೋಧ ಪಕ್ಷಗಳ ಹಲವಾರು ಸಂಸದರನ್ನು ಅನರ್ಹಗೊಳಿಸಲಾಗಿದೆ. ಆಡಳಿತ ಪಕ್ಷದ ಸಂಸದರು ಸದನದ ಕಲಾಪಕ್ಕೆ ಅಡ್ಡಿಪಡಿಸಿದ್ದಾರೆ. ಮೂರು ಕೃಷಿ ಕಾಯ್ದೆಗಳನ್ನು ಯಾವುದೇ ಚರ್ಚೆ ಇಲ್ಲದೇ ಅಂಗೀಕರಿಸಲಾಗಿತ್ತು. ಸಂಸದೀಯ ಸಮಿತಿಗಳನ್ನು ಅಕ್ಷರಶಃ ನಿಷ್ಕ್ರಿಯಗೊಳಿಸಲಾಗಿದೆ’ ಎಂದು ವಿಪಕ್ಷಗಳು ಹೇಳಿಕೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿವೆ.

ಕಾಂಗ್ರೆಸ್, ಟಿಎಂಸಿ, ಡಿಎಂಕೆ, ಜೆಡಿಯು, ಎಎಪಿ, ಸಿಪಿಎಂ, ಸಿಪಿಐ, ಎಸ್‌ಪಿ, ಎನ್‌ಸಿಪಿ, ಶಿವಸೇನಾ(ಯುಬಿಟಿ), ಆರ್‌ಜೆಡಿ, ಐಯುಎಂಎಲ್, ಜೆಎಂಎಂ, ಎನ್‌ಸಿ, ಕೆಸಿ(ಎಂ), ಆರ್‌ಎಸ್‌ಪಿ, ವಿಸಿಕೆ, ಎಂಡಿಎಂಕೆ, ಆರ್‌ಎಲ್‌ಡಿ ಪಕ್ಷಗಳ ಮುಖಂಡರು ಈ ಜಂಟಿ ಹೇಳಿಕೆಗೆ ಸಹಿ ಹಾಕಿದ್ದಾರೆ.

ದೆಹಲಿ ತಲುಪಿದ ‘ಸೆಂಗೋಲ್’: ಅಲಹಾಬಾದ್‌ನ ವಸ್ತುಸಂಗ್ರಹಾಲಯದಲ್ಲಿದ್ದ ಸೆಂಗೋಲ್ ಅನ್ನು ಬುಧವಾರ ರಾತ್ರಿ ದೆಹಲಿಗೆ ತರಲಾಯಿತು.


ನೂತನ ಸಂಸತ್ ಭವನದಲ್ಲಿ ‘ಸೆಂಗೋಲ್’ ಸ್ಥಾಪನೆ: ಶಾ

‘ತಮಿಳುನಾಡಿಗೆ ಸೇರಿದ, ಐತಿಹಾಸಿಕ ‘ಸೆಂಗೋಲ್’ (ನ್ಯಾಯದಂಡ) ಅನ್ನು ನೂತನ ಸಂಸತ್ ಭವನದಲ್ಲಿ ಸ್ಥಾಪನೆ ಮಾಡಲಾಗುತ್ತದೆ. ‘ಈ ಸೆಂಗೋಲ್ ಅಲಹಾಬಾದ್‌ನ ವಸ್ತುಸಂಗ್ರಹಾಲಯದಲ್ಲಿ ಇದೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗುವ ಸಮಯದಲ್ಲಿ ಈ ಸೆಂಗೋಲ್ ಅನ್ನು ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಗೆ ನೀಡಿದ್ದರು. ಇದು ಅಧಿಕಾರವನ್ನು ಹಸ್ತಾಂತರ ಮಾಡಿದ್ದರ ಪ್ರತೀಕವಾಗಿದೆ ಎಂದು ಹೇಳಿದರು.

‘ಈ ಸೆಂಗೋಲ್ ಪ್ರತಿಷ್ಠಾಪನೆಯ ಉದ್ದೇಶ ಆಗ ಸ್ಪಷ್ಟವಾಗಿತ್ತು; ಈಗಲೂ ಸ್ಪಷ್ಟವಾಗಿಯೇ ಇದೆ. ಅಧಿಕಾರ ಹಸ್ತಾಂತರ ಎಂಬುದು ಕೇವಲ ಕೈಕುಲುಕುವುದು ಅಥವಾ ದಾಖಲೆಪತ್ರಗಳಿಗೆ ಸಹಿ ಹಾಕುವುದು ಅಲ್ಲ. ಈ ಪ್ರಕ್ರಿಯೆಯು ಸ್ಥಳೀಯ ಪರಂಪರೆಯೊಂದಿಗೆ ನಂಟು ಹೊಂದಿರುವ ಜೊತೆಗೆ ಆಧುನಿಕ ಅಗತ್ಯಗಳನ್ನು ಪೂರೈಸುವಂತಿರಬೇಕು’ ಎಂದು ಹೇಳಿದರು.

1947ರ ಆಗಸ್ಟ್ 14ರಂದು ನೆಹರೂ ಅವರು ಈ ‘ಸೆಂಗೋಲ್’ ಅನ್ನು ಸ್ವೀಕರಿಸಿದ್ದರು. ‘ಬ್ರಿಟಿಷರು ಭಾರತೀಯರ ಕೈಗೆ ಅಧಿಕಾರ ನೀಡುವುದನ್ನು ಸಾಂಕೇತಿಕವಾಗಿ ತಿಳಿಸುವ ಸಮಾರಂಭವನ್ನು ಹೇಗೆ ಮಾಡಬಹುದು ಎಂದು ಪಂಡಿತ್ ಜವಾಹರಲಾಲ್ ನೆಹರೂ ಅವರನ್ನು ವೈಸರಾಯ್ ಲಾರ್ಡ್ ಮೌಂಟ್‌ಬ್ಯಾಟನ್ ಪ್ರಶ್ನಿಸಿದ್ದರು. ಆಗ, ನೆಹರೂ ಅವರು ಸ್ವಾತಂತ್ರ್ಯ ಹೋರಾಟಗಾರ ಸಿ.ರಾಜಗೋಪಾಲಾಚಾರಿ (ರಾಜಾಜಿ) ಅವರ ಸಲಹೆ ಕೇಳಿದ್ದರು’ ‘ಚೋಳ ರಾಜರು ತಮ್ಮ ಉತ್ತರಾಧಿಕಾರಿಗೆ ಸೆಂಗೋಲ್ ನೀಡುವ ಮೂಲಕ ಅಧಿಕಾರ ಹಸ್ತಾಂತರ ಮಾಡುತ್ತಿದ್ದ ಬಗ್ಗೆ ತಂಜಾವೂರಿನ ಶೈವ ಸಂಪ್ರದಾಯದ ಮಠವಾದ ‘ತಿರುವಾವದುತ್ತುರೈ ಅಧೀನಮ್’ನಿಂದ ರಾಜಾಜಿ ಮಾಹಿತಿ ಪಡೆದು, ನೆಹರೂ ಅವರಿಗೆ ತಿಳಿಸಿದ್ದರು’ ಎಂದು ಶಾ ವಿವರಿಸಿದರು.



ಅಮಿತ್ ಶಾ

‘ಈ ಐತಿಹಾಸಿಕ ವಿಷಯದ ಬಗ್ಗೆ ಸಮಗ್ರ ಮಾಹಿತಿ ಸಂಗ್ರಹಿಸುವಂತೆ ಪ್ರಧಾನಿ ಮೋದಿ ಸೂಚಿಸಿದರು. ಸಂಶೋಧನೆ, ವ್ಯಾಪಕ ಸಮಾಲೋಚನೆ ನಂತರ ಸಂಸತ್‌ನ ನೂತನ ಭವನದಲ್ಲಿ ಸೆಂಗೋಲ್ ಪ್ರತಿಷ್ಠಾಪಿಸಬೇಕು ಎಂದು ನಿರ್ಧರಿಸಲಾಯಿತು’ ಎಂದರು.

ಪ್ರಮುಖ ಅಂಶಗಳು

- ನೂತನ ಸಂಸತ್ ಭವನ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ 60 ಸಾವಿರ ಕಾರ್ಮಿಕರನ್ನು ಪ್ರಧಾನಿ ಸನ್ಮಾನಿಸುವರು
- ‘ತಿರುವಾವದುತ್ತುರೈ ಅಧೀನಮ್’ಗೆ 500ಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದ್ದು, ತಮಿಳುನಾಡಿನಾದ್ಯಂತ 50 ಹೆಚ್ಚು ಶಾಖೆಗಳನ್ನು ಹೊಂದಿದೆ
- ‘ಸೆಂಗೋಲ್’ ವಿನ್ಯಾಸ ಹಾಗೂ ತಯಾರಿಕೆಗೆ ಶ್ರಮಿಸಿರುವ 96 ವರ್ಷದ ವುಮ್ಮಿಡಿ ಎತಿರಾಜು, 88 ವರ್ಷದ ವುಮ್ಮಿಡಿ ಸುಧಾಕರ್ ಅವರು ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿರುವರು
- ಸೆಂಗೋಲ್ ಕುರಿತ ಸಮಗ್ರ ಮಾಹಿತಿ ಒಳಗೊಂಡ sengol1947ignca.in ವೆಬ್‌ಸೈಟ್‌ಗೆ ಸಚಿವ ಅಮಿತ್ ಶಾ ಚಾಲನೆ

ಪ್ರಧಾನಿ ಸಂವಿಧಾನದ 79ನೇ ವಿಧಿ ಪ್ರಕಾರ ನಡೆದುಕೊಳ್ಳಬೇಕು. ಸಂಸತ್‌ನ ನೂತನ ಕಟ್ಟಡವನ್ನು ಉದ್ಘಾಟಿಸುವಂತೆ ರಾಷ್ಟ್ರಪತಿ ಅವರಿಗೆ ಮನವಿ ಮಾಡಬೇಕು

ಕ್ಲೈಡ್ ಕ್ರಾಸ್ಟೊ, ಎನ್‌ಸಿಪಿ ರಾಷ್ಟ್ರೀಯ ವಕ್ತಾರ

ಇದು ಪ್ರಧಾನಿಯ ಗೃಹಪ್ರವೇಶ ಕಾರ್ಯಕ್ರಮವಲ್ಲ. ಅಧಿಕಾರದಲ್ಲಿ ರಾಷ್ಟ್ರಪತಿಗೆ ಮೊದಲ ಆದ್ಯತೆ ಇರಲಿದ್ದು, ನಂತರದ ಸ್ಥಾನದಲ್ಲಿ ಉಪ ರಾಷ್ಟ್ರಪತಿ, ಪ್ರಧಾನಿ ಬರುತ್ತಾರೆ

ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

‘ಅಹಂಕಾರದ ಇಟ್ಟಿಗೆಗಳಿಂದ ಸಂಸತ್ ಭವನ ನಿರ್ಮಿಸಿಲ್ಲ’



ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ‘ಸಂಸತ್ ಭವನವನ್ನು ಸಾಂವಿಧಾನಿಕ ಮೌಲ್ಯಗಳಿಂದ ನಿರ್ಮಿಸಲಾಗಿದೆಯೇ ಹೊರತು ‘ಅಹಂಕಾರವೆಂಬ ಇಟ್ಟಿಗೆ’ಗಳಿಂದ ಅಲ್ಲ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ವಾಗ್ದಾಳಿ ನಡೆಸಿದ್ದಾರೆ.

ನೂತನ ಸಂಸತ್ ಭವನ ಕಟ್ಟಡ ಉದ್ಘಾಟನಾ ಕಾರ್ಯಕ್ರಮವನ್ನು ಕನಿಷ್ಠ 20 ವಿರೋಧ ಪಕ್ಷಗಳು ಬಹಿಷ್ಕರಿಸುವುದಾಗಿ ಘೋಷಿಸಿದ ಬೆನ್ನಲ್ಲೇ ರಾಹುಲ್ ಗಾಂಧಿ ಈ ಕುರಿತು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

‘ಸಂಸತ್ ಭವನದ ನೂತನ ಕಟ್ಟಡವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಉದ್ಘಾಟಿಸದಿರುವುದು ಇಲ್ಲವೇ ಈ ಸಮಾರಂಭಕ್ಕೆ ಅವರನ್ನು ಆಹ್ವಾನಿಸದಿರುವುದು ಅತ್ಯುನ್ನತ ಸಾಂವಿಧಾನಿಕ ಹುದ್ದೆಗೆ ಮಾಡುವ ಅವಮಾನ’ ಎಂದು ರಾಹುಲ್ ಹೇಳಿದ್ದಾರೆ.

ನಾಯಕರ ವಾಗ್ದಾಳಿ: ರಾಷ್ಟ್ರಪತಿ ಬದಲು ಪ್ರಧಾನಿ ನರೇಂದ್ರ ಮೋದಿ ಅವರು ನೂತನ ಸಂಸತ್ ಭವನ ಉದ್ಘಾಟನೆ ನೆರವೇರಿಸುತ್ತಿರುವುದನ್ನು ಕಾಂಗ್ರೆಸ್‌ನ ಹಲವು ಮುಖಂಡರು ಖಂಡಿಸಿದ್ದಾರೆ.

‘ಪ್ರಜಾಪ್ರಭುತ್ವದ ಶಹನಾಯ್ ವಾದನ ಸಂಸತ್ ಭವನದಲ್ಲಿ ನಡೆಯಬೇಕು. ಸ್ವಯಂ ಘೋಷಿತ ‘ವಿಶ್ವಗುರು’ ಅಧಿಕಾರಕ್ಕೆ ಬಂದಾಗಿನಿಂದ ‘ಸರ್ವಾಧಿಕಾರ’ ಎಂಬ ಫಿರಂಗಿಯು ಬೆಂಕಿ ಉಗುಳುತ್ತಿದೆ’ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

‘ಪ್ರಧಾನಿ ಮೋದಿ ನೂತನ ಸಂಸತ್ ಭವನ ಉದ್ಘಾಟಿಸುತ್ತಿರುವ ಕುರಿತು ಅಚ್ಚರಿಪಡುವಂಥದ್ದು ಏನೂ ಇಲ್ಲ. ಪ್ರಧಾನಿಯ ಸ್ವಪ್ರತಿಷ್ಠೆ ವೈಭವೀಕರಿಸುವ ಪ್ರಹಸನದಲ್ಲಿ ವಿರೋಧ ಪಕ್ಷಗಳು ಪಾಲ್ಗೊಳ್ಳುವುದಿಲ್ಲ’ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹೇಳಿದ್ದಾರೆ.

1975ರಲ್ಲಿ ಸಂಸತ್ ಆವರಣದಲ್ಲಿ ನಿರ್ಮಿಸಿದ್ದ ಒಂದು ಕಟ್ಟಡವನ್ನು ಇಂದಿರಾಗಾಂಧಿ, 1987ರಲ್ಲಿ ಗ್ರಂಥಾಲಯವನ್ನು ರಾಜೀವ್ ಗಾಂಧಿ ಉದ್ಘಾಟಿಸಿದ್ದರು ಎಂದು ಹೇಳಿರುವ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ವಿರುದ್ಧ ಕಾಂಗ್ರೆಸ್ ಹಿರಿಯ ಮುಖಂಡ ಶಶಿ ತರೂರ್ ವಾಗ್ದಾಳಿ ನಡೆಸಿದ್ದಾರೆ.

‘ಹರ್ದೀಪ್ ಸಿಂಗ್ ಪುರಿ ಅವರೇ, ಒಂದು ಕಟ್ಟಡ ಹಾಗೂ ಗ್ರಂಥಾಲಯ ಸಂಸತ್ ಆವರಣದಲ್ಲಿನ ನಿರ್ಮಾಣಗಳಾಗಿವೆ. ಈಗ ಇಡಿಯಾಗಿ ಸಂಸತ್ ಭವನದ ಹೊಸ ಕಟ್ಟಡವನ್ನೇ ನಿರ್ಮಿಸಲಾಗಿದೆ. ರಾಷ್ಟ್ರಪತಿಗಳೇ ಸಂಸತ್‌ನ ಮುಖ್ಯಸ್ಥರು ಎಂದು ಸಂವಿಧಾನದಲ್ಲಿ ಹೇಳಿಲ್ಲವೇ? ಹೀಗಾಗಿ, ಪ್ರಧಾನಿ ಬದಲು ರಾಷ್ಟ್ರಪತಿಗಳೇ ನೂತನ ಕಟ್ಟಡ ಉದ್ಘಾಟಿಸಬೇಕಲ್ಲವೇ’ ಎಂದು ತರೂರ್ ಪ್ರಶ್ನಿಸಿದ್ದಾರೆ.

ರಾಷ್ಟ್ರಪತಿ ಹುದ್ದೆ ಹಾಗೂ ಸಂಸತ್‌ಗೆ ಪಾವಿತ್ರ್ಯವಿದ್ದು, ಇವುಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ನಂತರ ಸದನದಲ್ಲಿ ಚರ್ಚೆ ಮಾಡಬಹುದು.

ರಾಷ್ಟ್ರಪತಿಗಳು ಭಾರತದ ಮುಖ್ಯಸ್ಥರಾಗಿದ್ದರೆ, ಸಂಸತ್ 140 ಕೋಟಿ ಭಾರತೀಯರನ್ನು ಪ್ರತಿನಿಧಿಸುತ್ತದೆ.

ಈ ಎರಡು ಸಂಸ್ಥೆಗಳಿಗೆ ಸಂವಿಧಾನವೇ ಅಧಿಕಾರ ನೀಡುತ್ತದೆ. ಹೀಗಾಗಿ, ಈ ಸಾಂವಿಧಾನಿಕ ಸಂಸ್ಥೆಗಳು ಅವುಗಳ ಪಾವಿತ್ರ್ಯ ಹಾಗೂ ಗೌರವಕ್ಕೆ ಧಕ್ಕೆ ತರುವಂತಹ ವಿಷಯಗಳಿಗಿಂತ ಮೇಲಿವೆ ಎಂಬುದು ಪಕ್ಷದ ನಂಬಿಕೆ

ಬಿಜೆಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನಿಮ್ಮ ತೊಂದರೆಗಳ ಬಗ್ಗೆ ಮಾತನಾಡುವುದೇ ಅತಿ ದೊಡ್ಡ ತಪ್ಪು. ಅಂತಹ ಅಭ್ಯಾಸವನ್ನು ಬಿಟ್ಟುಬಿಡಿ. ನಿಮ್ಮ ಸಂತೋಷ ಮತ್ತು ಖುಷಿಯ ಬಗ್ಗೆ ಮಾತನಾಡಿ.

–ಭಗವಾನ್ ಬುದ್ಧ

₹ 2,000 ಮುಖಬೆಲೆ ನೋಟು ಹಿಂದಕ್ಕೆ ಏಕರೂಪಿ ನಿಯಮ ರೂಪಿಸಿ

ಪ್ರಧಾನಿ ನರೇಂದ್ರ ಮೋದಿ ಅವರು 2016ನೆಯ ಇಸವಿಯಲ್ಲಿ, ಗರಿಷ್ಠ ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುತ್ತಿರುವುದಾಗಿ ಹಠಾತ್ತನೆ ಮಾಡಿದ ಘೋಷಣೆಯು ದೇಶವಾಸಿಗಳಲ್ಲಿ ಆಶ್ಚರ್ಯ ಮತ್ತು ಆತಂಕ ಮೂಡಿಸಿತ್ತು. ಅಷ್ಟೇ ತೀವ್ರವಾದ ಪ್ರಶ್ನೆಗಳನ್ನು ಹುಟ್ಟುಹಾಕಿದ್ದು, ಚಲಾವಣೆಯಿಂದ ಇದ್ದಕ್ಕಿದ್ದಂತೆ ಹಿಂದಕ್ಕೆ ಪಡೆಯಲಾದ ನೋಟುಗಳ ಬದಲಿಗೆ ₹ 2,000 ಮುಖಬೆಲೆಯ ನೋಟುಗಳನ್ನು ಹೊಸದಾಗಿ ಚಲಾವಣೆಗೆ ತಂದಿದ್ದು. ದಿನನಿತ್ಯದ ಅಗತ್ಯಗಳನ್ನು ಪೂರೈಸಿಕೊಳ್ಳಲು ಈ ಮುಖಬೆಲೆಯ ನೋಟು ಗ್ರಾಹಕರಿಗೆ ನೆರವಾಗುವ ಬದಲು ವಿಪರೀತ ಕಿರಿಕಿರಿ ಉಂಟುಮಾಡಿತ್ತು. ನಿತ್ಯದ ಅಗತ್ಯಗಳಿಗೆ ತರಕಾರಿ, ಮೊಟ್ಟೆ, ಮಾಂಸ, ದಿನಸಿ ಖರೀದಿಸಲು ಈ ನೋಟು ಹೆಚ್ಚು ನೆರವಿಗೆ ಬರಲಿಲ್ಲ. ಈ ನೋಟು ಹೆಚ್ಚು ಕಾಲ ಚಲಾವಣೆಯಲ್ಲಿ ಇರಲಿಕ್ಕಿಲ್ಲ ಎಂಬ ಭಾವನೆಯು ಇದನ್ನು ಮೊದಲ ಬಾರಿಗೆ ಕಂಡಾಗಲೇ ಜನರಲ್ಲಿ ಮೂಡಿತ್ತು. ಭಾರಿ ಮೊತ್ತದ ವಹಿವಾಟುಗಳಿಗೆ ಮಾತ್ರ ಈ ನೋಟು ಹೆಚ್ಚು ಉಪಯುಕ್ತವಾಗಿ ಕಂಡಿರಬಹುದು. ಈಗ ಈ ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದೆ ಪಡೆಯುವ ಪ್ರಕ್ರಿಯೆಗೆ ಆರ್‌ಬಿಐ ಚಾಲನೆ ನೀಡಿದೆ. ₹ 2,000 ಮುಖಬೆಲೆಯ ನೋಟುಗಳನ್ನು ಸೆಪ್ಟೆಂಬರ್ 30ಕ್ಕೆ ಮೊದಲು ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಬೇಕು ಅಥವಾ ಬ್ಯಾಂಕ್ ಶಾಖೆಗಳ ಮೂಲಕ ಬೇರೆ ಮುಖಬೆಲೆಯ ನೋಟುಗಳಿಗೆ ವಿನಿಮಯ ಮಾಡಿಕೊಳ್ಳಬೇಕು ಎಂದು ಸಾರ್ವಜನಿಕರಿಗೆ ಆರ್‌ಬಿಐ ತಿಳಿಸಿದೆ.



ನೋಟುಗಳ ವಿನಿಮಯಕ್ಕೆ ಸಂಬಂಧಿಸಿದ ಗೊಂದಲವನ್ನು ಆರ್‌ಬಿಐ ಬಗೆಹರಿಸಿದರೆ, ನಿತ್ಯದ ವಹಿವಾಟುಗಳಲ್ಲಿ ಹೆಚ್ಚಿನ ಅನುಕೂಲ ಮಾಡಿಕೊಡದ ₹ 2000 ಮುಖಬೆಲೆಯ ನೋಟುಗಳು ಬಹುಬೇಗ ಬ್ಯಾಂಕುಗಳತ್ತ ಹರಿದುಬರಬಹುದು

ಈ ನೋಟುಗಳ ಮಾನ್ಯತೆಯು ರದ್ದಾಗಿಲ್ಲ. ಆದರೆ, ಅವುಗಳನ್ನು ಚಲಾವಣೆಯಿಂದ ಹಿಂಪಡೆಯುವ ಪ್ರಕ್ರಿಯೆ ಶುರುವಾಗಿದೆ, ಅಷ್ಟೆ. ವಾಸ್ತವದಲ್ಲಿ ಈ ಕೆಲಸವನ್ನು ಆರ್‌ಬಿಐ 2018–19ರಲ್ಲಿಯೇ ಭಾಗಶಃ ಶುರುಮಾಡಿದೆ. ಆಗಿನಿಂದ ಅದು ಈ ನೋಟುಗಳ ಮುದ್ರಣವನ್ನು ನಿಲ್ಲಿಸಿದೆ. ಸೆಪ್ಟೆಂಬರ್ 30ಕ್ಕೆ ಮೊದಲು ₹ 2,000 ಮುಖಬೆಲೆಯ ನೋಟುಗಳನ್ನು ಜಮಾ ಮಾಡಬೇಕು ಅಥವಾ ವಿನಿಮಯ ಮಾಡಿಕೊಳ್ಳಬೇಕು ಎಂದು ಹೇಳಿರುವ ಆರ್‌ಬಿಐ, ಆ ದಿನಾಂಕದ ನಂತರ ಈ ನೋಟುಗಳಿಗೆ ಮಾನ್ಯತೆ ಇರುತ್ತದೆಯೇ ಎಂಬುದನ್ನು ಖಚಿತವಾಗಿ ವಿವರಿಸಿಲ್ಲ. ಸೆಪ್ಟೆಂಬರ್ 30ರ ನಂತರವೂ ಈ ನೋಟುಗಳಿಗೆ ಮಾನ್ಯತೆ ಇರುತ್ತದೆ ಎಂದಾದರೆ, ವಿನಿಮಯ ಅಥವಾ ಜಮಾ ಕೆಲಸವನ್ನು ಈ ದಿನಾಂಕಕ್ಕೆ ಮೊದಲು ಮಾಡಿಕೊಳ್ಳಬೇಕು ಎಂಬ ಸೂಚನೆಗೆ ಹೆಚ್ಚಿನ ಬೆಲೆ ಬರುವುದಿಲ್ಲ. ಹೀಗಾಗಿ, ಈ ದಿನಾಂಕದ ನಂತರ ನೋಟುಗಳಿಗೆ ಮಾನ್ಯತೆ ಇರುತ್ತದೆಯೇ ಎಂಬುದನ್ನು ಆರ್‌ಬಿಐ ಖಚಿತಪಡಿಸಬೇಕು. ಆರ್‌ಬಿಐ ಕೈಗೊಂಡಿರುವ ತೀರ್ಮಾನವು ನೋಟು ರದ್ದತಿ ಅಲ್ಲ. ಆರ್‌ಬಿಐ ಈ ಹಿಂದೆಯೂ ನಿರ್ದಿಷ್ಟ ಮುಖಬೆಲೆಯ, ನಿರ್ದಿಷ್ಟ ಅವಧಿಯಲ್ಲಿ ಚಲಾವಣೆಗೆ ಬಂದ ನೋಟುಗಳನ್ನು ಹಿಂಪಡೆದಿದೆ. ಈ ಬಾರಿಯ ಪ್ರಕ್ರಿಯೆಯು ಸಾರ್ವಜನಿಕರಿಗೆ ದೊಡ್ಡ ಸಮಸ್ಯೆ ತಂದೊಡ್ಡುವ ಸಾಧ್ಯತೆ ಇಲ್ಲ ಎಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಏಕೆಂದರೆ, ಈಗ ಹಣ ಪಾವತಿಗೆ ಜನ ನೋಟುಗಳನ್ನಷ್ಟೇ ಆಶ್ರಯಿಸಿಲ್ಲ. ನೋಟುಗಳ ಸ್ಥಾನವನ್ನು ಡಿಜಿಟಲ್ ಪಾವತಿ ವ್ಯವಸ್ಥೆಗಳು ಆಕ್ರಮಿಸುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಡಿಜಿಟಲ್ ಪಾವತಿ ವ್ಯವಸ್ಥೆಯ ಬಳಕೆಯು ವ್ಯಾಪಕವಾಗಿದೆ ಎಂದು ಅಂಕಿಅಂಶಗಳು ಹೇಳುತ್ತಿವೆ. ಹೀಗಿದ್ದರೂ, ಗೊಂದಲಗಳನ್ನು ಆದಷ್ಟು ಬೇಗ ನಿವಾರಿಸುವುದು ಒಳ್ಳೆಯದು.

ನೋಟುಗಳ ವಿನಿಮಯ ಪ್ರಕ್ರಿಯೆಯು ಮಂಗಳವಾರದಿಂದ ಆರಂಭವಾಗಿದೆ. ವಿನಿಮಯಕ್ಕೆ ಬರುವ ಗ್ರಾಹಕರಲ್ಲಿ ಯಾವುದೇ ದಾಖಲೆ ಕೇಳುವುದಿಲ್ಲ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಸ್ಪಷ್ಟಪಡಿಸಿದೆ. ಆದರೆ, ಸರ್ಕಾರಿ ಹಾಗೂ ಖಾಸಗಿ ಸ್ವಾಮ್ಯದ ಕೆಲವು ಬ್ಯಾಂಕ್‌ಗಳು ನೋಟು ವಿನಿಮಯಕ್ಕೆ ಬರುವ ಗ್ರಾಹಕರಿಂದ ಗುರುತಿನ ಸಂಖ್ಯೆ ಅಥವಾ ಚೀಟಿ ಕೇಳುತ್ತಿವೆ ಎಂಬ ವರದಿಗಳು ಇವೆ. ಈ ರೀತಿ ಗುರುತಿನ ಚೀಟಿ ಅಥವಾ ಸಂಖ್ಯೆ ಕೇಳುವ ಅಧಿಕಾರ ಬ್ಯಾಂಕ್‌ಗಳಿಗೆ ಇದೆಯಾದರೂ, ಈ ವಿಚಾರದಲ್ಲಿ ಆರ್‌ಬಿಐ ಏಕರೂಪಿ ನಿಯಮವೊಂದನ್ನು ರೂಪಿಸಿದ್ದರೆ ಗ್ರಾಹಕರಿಗೆ ಗೊಂದಲ ಉಂಟಾಗುತ್ತಿರಲಿಲ್ಲ. ನೋಟು ವಿನಿಮಯಕ್ಕೆ ನಾಲ್ಕು ತಿಂಗಳಿಗೂ ಹೆಚ್ಚಿನ ಕಾಲಾವಕಾಶ ನೀಡಿರುವ ಕಾರಣ, ಆರ್‌ಬಿಐ ಈ ಬಗ್ಗೆ ಗಮನಹರಿಸಲು ಈಗಲೂ ಸಮಯ ಇದೆ. ಗೊಂದಲ ಬಗೆಹರಿಸಿ, ಏಕರೂಪಿ ನಿಯಮ ಜಾರಿಗೆ ತಂದರೆ, ನಿತ್ಯದ ವಹಿವಾಟುಗಳಲ್ಲಿ ಹೆಚ್ಚಿನ ಅನುಕೂಲ ಮಾಡಿಕೊಡದ ಈ ನೋಟುಗಳು ಬಹುಬೇಗ ಬ್ಯಾಂಕುಗಳತ್ತ ಹರಿದುಬರಬಹುದು.

ದಿನದ ಟ್ವೀಟ್

ಶೈಕ್ಷಣಿಕ ಸ್ಥಿತಿಗತಿಯ ಸೂಚಕವಲ್ಲ



ಯುಪಿಎಸ್‌ಸಿ ಪರೀಕ್ಷೆ ಪಾಸಾಗುವುದು ರಾಜ್ಯವೊಂದರ ಉತ್ತಮ ಶೈಕ್ಷಣಿಕ ಸ್ಥಿತಿಗತಿಯನ್ನಾಗಲೀ ಅಥವಾ ಸುಧಾರಿತ ಬೌದ್ಧಿಕ ಸಾಮರ್ಥ್ಯವನ್ನಾಗಲೀ ಸೂಚಿಸುವುದಿಲ್ಲ. ಯುವಜನರಿಗೆ ಆರ್ಥಿಕ ಅವಕಾಶಗಳು ಕಡಿಮೆ ಇರುವುದಕ್ಕೂ ಹೆಚ್ಚು ಅಭ್ಯರ್ಥಿಗಳು ಯುಪಿಎಸ್‌ಸಿ ಪರೀಕ್ಷೆ ಬರೆಯುವುದಕ್ಕೂ ನೇರ ಸಂಬಂಧವಿದೆ. ಹಾಗಾಗಿಯೇ, ಕಳಪೆ ಕೈಗಾರಿಕಾ ಬೆಳವಣಿಗೆಯಿರುವ ರಾಜ್ಯಗಳಲ್ಲಿ (ಉತ್ತರಪ್ರದೇಶ, ಬಿಹಾರ) ಈ ಪರೀಕ್ಷೆಗೆ ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವುದನ್ನು ಗಮನಿಸಬಹುದು. ಯುಪಿಎಸ್‌ಸಿ ಸುಧಾರಣೆಗೊಳ್ಳಬೇಕು.

ಸಲೀಂ ಧರಣೀಧರನ್, ಡಿಎಂಕೆ ವಕ್ತಾರ

ಕಿಡಿನುಡಿ



ಕೇಸರಿ ಶಾಲಿಗೆ ಈ ರಾಜ್ಯದಲ್ಲಿ ನಿಷೇಧವಿಲ್ಲ. ಕರ್ತವ್ಯದಲ್ಲಿರುವಾಗ ಕೇಸರಿ ಶಾಲು ಧರಿಸುವಂತಹ ಪ್ರಯೋಗವನ್ನು ಯಾರೂ ಮಾಡಿಲ್ಲ. ಖಾಸಗಿ ಜೀವನದಲ್ಲಿ ಅವರ ಉಡುಪು, ನಂಬಿಕೆಯನ್ನು ಪ್ರಶ್ನಿಸುವಂತೆ ಮಾತನಾಡಿರುವುದು ಸರಿಯಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಗೆ ಇದು ಶೋಭೆ ತರುವುದಿಲ್ಲ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈ ನಿಲುವನ್ನು ಪುನರ್‌ಪರಿಶೀಲಿಸಬೇಕು.

ಕೋಟ ಶ್ರೀನಿವಾಸ ಪೂಜಾರಿ, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಸೋಮವಾರ, 25-5-1998

• ಆರ್ಥಿಕ ದಿಗ್ಬಂಧನ: ಕಹಿ ಅನುಭವಿಸಲು ಬಜೆಟ್

ನವದೆಹಲಿ, ಮೇ 24 (ಪಿಟಿಐ)– ಭಾರತದ ವಿರುದ್ಧ ಕೆಲವು ದೇಶಗಳು ದಿಗ್ಬಂಧನ ವಿಧಿಸಿರುವುದರಿಂದ ಜೂನ್ 1ರಂದು ಮಂಡನೆಯಾಗುವ ಕೇಂದ್ರದ ಬಿಜೆಪಿ ಮೈತ್ರಿಕೂಟದ ಮೊದಲ ಬಜೆಟ್ ಭಾರಿ ಹೊರೆಯಾಗಿರುವ ಸಾಧ್ಯತೆ ಇದೆ.

ದಿಗ್ಬಂಧನದ ಪ್ರಮಾಣ ಸುಮಾರು 5 ಸಾವಿರ ಕೋಟಿ ರೂಪಾಯಿಗಳೆಂದು ಅಂದಾಜಿಸಲಾಗಿದ್ದು, ಈ ಹಣವನ್ನು ಬಜೆಟ್‌ನಲ್ಲಿ ಒದಗಿಸಬೇಕಾಗಿರುವುದರಿಂದ ಕೆಲವು ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವುದು ಅನಿವಾರ್ಯವಾಗಬಹುದು ಎಂದು ಇಂಗಿತವನ್ನು ಕೇಂದ್ರ ಹಣಕಾಸು ಸಚಿವ ಯಶವಂತ ಸಿನ್ಹಾ ಅವರು ವ್ಯಕ್ತಪಡಿಸಿದ್ದಾರೆ.

ಸಂಪನ್ಮೂಲ ಸಂಗ್ರಹಣೆ ಕುರಿತ, ತೀವ್ರ ಆರ್ಥಿಕ ಬಿಕ್ಕಟ್ಟಿನಿಂದಾಗಿ ಸರ್ಕಾರ ಇನ್ನಷ್ಟು ಕಹಿಯಾಗುವ ಸಾಧ್ಯತೆ ಇದೆ. ಭಾರತ ತನ್ನ ಅಣ್ವಸ್ತ್ರ ಸಾಧನ ಪರೀಕ್ಷೆಗಳನ್ನು ನಡೆಸಿದ್ದರಿಂದ ಅಮೆರಿಕ ಮತ್ತು ಜಪಾನ್ ಸೇರಿದಂತೆ ಹಲವಾರು ದೇಶಗಳು ಭಾರತದ ವಿರುದ್ಧ ದಿಗ್ಬಂಧನ ವಿಧಿಸಿವೆ. ಇದರಿಂದಾಗಿ ಬಜೆಟ್‌ಗೆ ಅಂತಿಮ ರೂಪ ನೀಡುವುದು ಕೇಂದ್ರ ಸರ್ಕಾರಕ್ಕೆ ಕಷ್ಟವಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 25-5-1973

• ರಾಜಕೀಯ, ಗುಂಪುಗಾರಿಕೆ- ಸ್ವಾರ್ಥ ಸಾಧನೆಯಿಂದ ಸಹಕಾರ ಸಂಘಗಳ ವಿಮೋಚನೆಗೆ ಆಗ್ರಹ

ಬೆಂಗಳೂರು, ಮೇ 24– ಸಹಕಾರ ಸಂಘಗಳನ್ನು ರಾಜಕೀಯ ಗುಂಪುಗಾರಿಕೆ ಮತ್ತು ಸ್ವಾರ್ಥಸಾಧನೆಗೆ ಮಾಡುವವರ ಹಿಡಿತದಿಂದ ತಪ್ಪಿಸಬೇಕೆಂದು ವಿಧಾನ ಪರಿಷತ್ತಿನಲ್ಲಿ ಇಂದು ಸದಸ್ಯರು ಒತ್ತಾಯಪಡಿಸಿದರು.

ಬದಲಾದ ಪರಿಸ್ಥಿತಿಯಲ್ಲಿ ಸಹಕಾರ ಸಂಘಗಳಿಗೆ ಬೇಕಾಗಿರುವ ಎಂದು ಸ್ವತಂತ್ರ ಪಕ್ಷದ ಸದಸ್ಯ ಶ್ರೀ ಟಿ. ಚನ್ನಬೈರೇಗೌಡ ಅವರು ವಾದಿಸಿದರು.

ಮೈಸೂರು ರಾಜ್ಯ ಸಹಕಾರ ಸಂಘಗಳ ತಿದ್ದುಪಡಿ ವಿಧೇಯಕದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ಕಾಂಗ್ರೆಸ್‌ನ ಶ್ರೀ ಎಸ್. ರಾಚಯ್ಯ ಅವರು, ಸಹಕಾರ ಸಂಘಗಳಲ್ಲಿ ಶೇ 60ರಷ್ಟು ಡೈರೆಕ್ಟರುಗಳ ಸ್ಥಾನಗಳಿಗೆ ಕೃಷಿ ಕಾರ್ಮಿಕರು, ಹರಿಜನರು ಮುಂತಾದ ನಿಮ್ನ ವರ್ಗಗಳವರನ್ನು ನೇಮಿಸಬೇಕೆಂದು ಒತ್ತಾಯಪಡಿಸಿದರು.

ಸಹಕಾರ ಸಂಘಗಳಲ್ಲಿ ಜಾತೀಯತೆ ತಾಂಡವವಾಡುತ್ತಿದೆ ಎಂದು ಟೀಕಿಸಿದ ಅವರು, ಸಂಘಗಳಲ್ಲಿ ಡೈರೆಕ್ಟರ್ ಸ್ಥಾನ ಮಾತ್ರವಲ್ಲ ನಾಲ್ಕನೇ ದರ್ಜೆಯ ಹುದ್ದೆಗಳಿಗೂ ಹರಿಜನ ನೇಮಕವಾಗುತ್ತಿಲ್ಲ ಎಂದರು.

ಸಹಕಾರ ಇಲಾಖೆಯಲ್ಲಿ ಉನ್ನತ ಹುದ್ದೆಗೆ ನೇಮಕ ಹಾಗು ... ಸಂಸ್ಥಾ ಕಾಂಗ್ರೆಸ್‌ನ ಶ್ರೀ ವಿ.ಎಸ್. ಕೃಷ್ಣ ಅಯ್ಯರ್ ಅವರು ಟೀಕಿಸಿ, ಸಹಕಾರ ಸಂಘಗಳ ಸುಧಾರಣೆಗಾಗಿ ಸಮಗ್ರ ತಿದ್ದುಪಡಿ ವಿಧೇಯಕವೊಂದನ್ನು ತರಬೇಕೆಂದರು.

ಪಶ್ಚಿಮಘಟ್ಟದಲ್ಲಿ ಹುಲಿಗಳ ಸಂತತಿ ಶೀಘ್ರವಾಗಿ ಕ್ಷೀಣಿಸುತ್ತಿರುವುದಕ್ಕೆ ಕಾರಣಗಳೇನು?

ಹುಲಿ ಯೋಜನೆ ಮತ್ತು ದೂರಗಾಮಿ ಪರಿಣಾಮ



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಜನಸಂಖ್ಯೆಯಲ್ಲಿ ಭಾರತವು ಚೀನಾವನ್ನು ಹಿಂದಿಕ್ಕಿದ ಸುದ್ದಿ ಬಹಿರಂಗಗೊಳ್ಳುವ ಎರಡು ವಾರಕ್ಕೆ ಮೊದಲು, ಪ್ರಪಂಚದ ಶೇ 70ರಷ್ಟು ಹುಲಿಗಳಿಗೆ ಭಾರತ ನೆಲೆಯಾಗಿದೆ ಎಂಬ ಸುದ್ದಿಯನ್ನು ಪ್ರಧಾನಿ ದೇಶಕ್ಕೆ ಬಿತ್ತರಿಸಿದರು. ಹುಲಿಗಳ ಸಂಖ್ಯೆ ನೈಸರ್ಗಿಕವಾಗಿ ಹೆಚ್ಚಾಗುವುದು ಆ ಪ್ರದೇಶದ ಕಾಡಿನ ಆರೋಗ್ಯವನ್ನು ಬಿಂಬಿಸುವ ಮಾನದಂಡವಾಗಿದೆ. ಮೇರು ಬೇಟೆಪ್ರಾಣಿಗಳಾದ ಹುಲಿ, ಚಿರತೆ, ಸಿಂಹದಂತಹವು ಹೆಚ್ಚುತ್ತಿರುವ ಬಲಿಪ್ರಾಣಿಗಳನ್ನು ನಿಯಂತ್ರಿಸುವುದಲ್ಲದೆ, ಜಲಭದ್ರತೆಯಂತಹ ಅನೇಕ ನೈಸರ್ಗಿಕ ಸೇವೆಗಳನ್ನು ನೀಡುತ್ತವೆ. ಹುಲಿಗಳ ಇಂತಹ ನೈಸರ್ಗಿಕ ಸೇವೆಯ ಮಹತ್ವವನ್ನು ಅರಿತ ಕೇಂದ್ರ ಸರ್ಕಾರವು ಅವುಗಳ ಸಂರಕ್ಷಣೆಗಾಗಿ ಹಲವು ಬಿಗಿಯಾದ ಕಾನೂನು ಕಟ್ಟಳೆಗಳನ್ನು ಜಾರಿ ಮಾಡಿದೆ.

ಹುಲಿಗಳನ್ನು ಸಾಕುವುದು, ಹುಲಿಗಳು ಹಾಗೂ ಅವುಗಳ ಬಲಿಪ್ರಾಣಿಗಳ ಬೇಟೆ, ಆವಾಸಸ್ಥಾನ ನಾಶ ಮತ್ತು ಅವುಗಳ ಅಂಗಾಂಗ ಕಳ್ಳಸಾಗಣೆ ಮಾಡುವುದು 1972ರ ವನ್ಯಜೀವಿ ಸಂರಕ್ಷಣಾ ಅಧಿನಿಯಮದ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದೆ.

ಕೇಂದ್ರ ಸರ್ಕಾರವು 1973ರಲ್ಲಿ ಹುಲಿ ಯೋಜನೆಯನ್ನು ಪ್ರಾರಂಭಿಸಿ, ಹುಲಿಗಳ ರಕ್ಷಣೆಗೆ ಮುಂದಡಿ ಇಟ್ಟಿತು. ಯೋಜನೆಯ ಪ್ರಾರಂಭಿಕ ಹಂತದಲ್ಲಿ ದೇಶದಲ್ಲಿ 9 ಹುಲಿ ಸಂರಕ್ಷಣಾ ಅಭಯಾರಣ್ಯಗಳು ಇದ್ದವು. ಪ್ರಸ್ತುತ ಒಟ್ಟು 53 ಹುಲಿ ಸಂರಕ್ಷಣಾ ಪ್ರದೇಶಗಳಿವೆ. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಹುಲಿ ಗಣತಿಯನ್ನು ನಡೆಸುತ್ತದೆ. ಈ ಪ್ರಾಧಿಕಾರವು ಭಾರತದ ಹುಲಿ ಸಂಪತ್ತನ್ನು ರಕ್ಷಣೆ ಮಾಡಲು ಇರುವ ಪರಮೋಚ್ಚ ಸ್ವತಂತ್ರ ಸಂಸ್ಥೆಯಾಗಿದೆ. ಹಿಂದಿನ ಹತ್ತು ವರ್ಷಗಳಲ್ಲಿ ದೇಶದಲ್ಲಿ ಹುಲಿಗಳ ಸಂಖ್ಯೆ ದ್ವಿಗುಣಗೊಂಡಿದೆ ಎಂದು ಪ್ರಾಧಿಕಾರ ಹೇಳಿದೆಯಾದರೂ ಈ ಅವಧಿಯಲ್ಲಿ ಹುಲಿಗಳ ಆವಾಸಸ್ಥಾನಗಳು ಎಷ್ಟರಮಟ್ಟಿಗೆ ಹೆಚ್ಚಾಗಿವೆ ಎನ್ನುವುದು ಉತ್ತರ ಇಲ್ಲದ ದೊಡ್ಡ ಪ್ರಶ್ನೆಯಾಗಿದೆ. 2018ರ ಹುಲಿ ಗಣತಿಯ ಅಂಕಿಅಂಶದ ಪ್ರಕಾರ, ಪಶ್ಚಿಮಘಟ್ಟದಲ್ಲಿ ಒಟ್ಟು 981 ಹುಲಿಗಳಿದ್ದವು. ಬರೀ ನಾಲ್ಕು ವರ್ಷಗಳ ಅವಧಿಯಲ್ಲಿ, ಅಂದರೆ 2022ರ ಗಣತಿಯಲ್ಲಿ ಈ ಸಂಖ್ಯೆ 824ಕ್ಕೆ ಇಳಿದಿದೆ. ಕರ್ನಾಟಕದ ಪಶ್ಚಿಮಘಟ್ಟ ಪ್ರದೇಶದಲ್ಲಿ, ಅದರಲ್ಲೂ ಉತ್ತರ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗಳ ಭಾಗದಲ್ಲಿ ಹುಲಿಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆ. ಇದು ಪಶ್ಚಿಮಘಟ್ಟದ ಅಸ್ತಿತ್ವಕ್ಕೆ ಧಕ್ಕೆ ತರುವ ಗಂಭೀರ ವಿದ್ಯಮಾನವಾಗಿದೆ. ಹುಲಿಗಳು ವಾಸಿಸಲು ಅತ್ಯಂತ ಪ್ರಶಸ್ತ ತಾಣವಾದ ಪಶ್ಚಿಮಘಟ್ಟದಲ್ಲಿ ಅವುಗಳ ಸಂತತಿ ಶೀಘ್ರವಾಗಿ ಇಳಿಮುಖವಾಗುತ್ತಿರುವುದಕ್ಕೆ ಕಾರಣಗಳೇನು?

ಬಹುಮುಖ್ಯವಾಗಿ, ಕಾಡಿನ ಗುಣಮಟ್ಟ ಕುಸಿತ, ಹುಲಿಗಳ ಆವಾಸಸ್ಥಾನದ ಛಿದ್ರೀಕರಣ, ಬಲಿಪ್ರಾಣಿಗಳ ಕಳ್ಳಬೇಟೆ, ನೆಲೆಗಳ ನಾಶ, ಸರ್ಕಾರ ಹಾಗೂ ಅರಣ್ಯ ಇಲಾಖೆಯ ನಿರ್ವಹಣಾ ಧೋರಣೆ, ಹುಲಿಗಳ ಅಂಗಾಂಗ ಕಳ್ಳಸಾಗಣೆ, ವ್ಯಾಪಕವಾದ ಏಕಜಾತಿಯ ನೆಡುತೋಪುಗಳು... ಹೀಗೆ ಪಟ್ಟಿ ಮಾಡುತ್ತಾ ಹೋಗಬಹುದು. ಇದಕ್ಕೆ ಒಂದು ಉದಾಹರಣೆಯೆಂದರೆ, ಬಳ್ಳಾರಿ ಹಾಗೂ ಹೊಸಪೇಟೆಯಲ್ಲಿ ಸಿಗುವ 'ಬಿ' ದರ್ಜೆಯ ಕಬ್ಬಿಣ ಹಾಗೂ ಮ್ಯಾಂಗನೀಸ್ ಅದಿರನ್ನು ಅಂಕೋಲಾದ ತದಡಿ ಬಂದರಿನ ಮೂಲಕ ಚೀನಾ ದೇಶಕ್ಕೆ ಸಾಗಿಸುವ ಸಲುವಾಗಿ, ಹುಬ್ಬಳ್ಳಿ- ಅಂಕೋಲಾ ರೈಲು ಮಾರ್ಗದ ಪ್ರಸ್ತಾವವನ್ನು 1998ರಲ್ಲೇ ಮಾಡಲಾಗಿರುವುದು.

ವಿವಿಧ ವೈಜ್ಞಾನಿಕ ಸಂಸ್ಥೆಗಳು, ಅರಣ್ಯ ಇಲಾಖೆ, ಸುಪ್ರೀಂ ಕೋರ್ಟ್‌ನಿಂದ ರಚಿತವಾದ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ) ಮತ್ತು ಹತ್ತು ಹಲವು ಪರಿಸರ ಅಧ್ಯಯನ ವರದಿಗಳ ಆಧಾರದ ಮೇಲೆ ಈ ಯೋಜನೆಯನ್ನು ಒಟ್ಟು ಹನ್ನೆರಡು ಬಾರಿ ತಿರಸ್ಕರಿಸಲಾಗಿದೆ. ಆದರೂ ರಾಜ್ಯ ಸರ್ಕಾರವು ಯೋಜನೆಯನ್ನು ಶತಾಯಗತಾಯ ಕಾರ್ಯರೂಪಕ್ಕೆ ತಂದೇ ತೀರುತ್ತೇವೆ ಎಂಬ ಹಟಕ್ಕೆ ಬಿದ್ದಿದೆ. ಒಂದೊಮ್ಮೆ ಈ ಯೋಜನೆ ಜಾರಿಯಾದಲ್ಲಿ, ಉತ್ತರ ಕನ್ನಡ ಜಿಲ್ಲೆಯ ಕಾಳಿ ಹುಲಿ ಯೋಜನೆಯ ಪ್ರದೇಶ ಹಾನಿಗೊಳಗಾಗಲಿದೆ. ಶಿವಮೊಗ್ಗ ಜಿಲ್ಲೆಯ ಶರಾವತಿ ಕಣಿವೆಯ ಅಭಯಾರಣ್ಯದ ಹುಲಿಪಥ ಹಾಗೂ ಆನೆಪಥಗಳು ಶಾಶ್ವತವಾಗಿ ಛಿದ್ರವಾಗಲಿವೆ.

ವನ್ಯಜೀವಿಗಳ ನೈಸರ್ಗಿಕವಾದ ನಿರ್ದಿಷ್ಟ ಪಥಗಳ ಮಧ್ಯೆ ಹೊಸ ಹೊಸ ಹೆದ್ದಾರಿಗಳು ಅಥವಾ ರೈಲು ಮಾರ್ಗಗಳು, ವಿದ್ಯುತ್ ಪ್ರಸರಣ ಮಾರ್ಗಗಳು, ಜಲ ವಿದ್ಯುತ್ ಯೋಜನೆಗಳು ಜಾರಿಯಾದಲ್ಲಿ, ಮೇರು ಪ್ರಾಣಿಗಳ ಪಥವು ಛಿದ್ರಗೊಂಡು ಅವುಗಳ ಸಂತತಿ ಸ್ಥಳೀಯವಾಗಿ ಅಳಿದುಹೋಗಲಿದೆ. ಈ ಪ್ರದೇಶಗಳ ಧಾರಣಾ ಸಾಮರ್ಥ್ಯವು ಕುಸಿದು, ಇಲ್ಲಿ ಹುಟ್ಟುವ ಅನೇಕ ಬಹುಮುಖ್ಯ ನದಿಗಳು ತಮ್ಮ ಹರಿವನ್ನು ನಿಲ್ಲಿಸಲಿವೆ. ನದಿಗಳಿಗೆ ಸೇರುವ ಉಪನದಿಗಳ ಪಥ ಬದಲಾವಣೆಯಿಂದಾಗಿ, ನದಿಗಳನ್ನು ಅವಲಂಬಿಸಿ ಬದುಕು ಕಟ್ಟಿಕೊಂಡಿರುವ ಪಟ್ಟಣಗಳು ಸಂತ್ರಸ್ತ ಪಟ್ಟಿಯಲ್ಲಿ ಸೇರಲಿವೆ. ದಕ್ಷಿಣ ಕನ್ನಡ ಜಿಲ್ಲೆಯ ನೇತ್ರಾವತಿ ನದಿ ಇದಕ್ಕೆ ಜ್ವಲಂತ ಉದಾಹರಣೆ. ಕುದುರೆಮುಖ ಪರ್ವತ ಶ್ರೇಣಿಯಲ್ಲಿ ಹುಟ್ಟಿ, ಬರೀ ನೂರು ಕಿಲೊಮೀಟರ್ ದೂರವಿರುವ ಅರಬ್ಬಿ ಸಮುದ್ರ ಸೇರುವ ನದಿಯು ತನ್ನ ಹರಿವನ್ನು ನಿಲ್ಲಿಸಿ ಉಪ್ಪಿನಂಗಡಿಯಲ್ಲಿಯೇ ಬತ್ತಿಹೋಗಿದೆ.

ಈ ಪರಿಸ್ಥಿತಿಯಲ್ಲಿ, ಸರ್ಕಾರದ ಪ್ರಮುಖ ಆದ್ಯತೆ ಏನಾಗಬೇಕು ಎಂದರೆ, ಹಾಲಿ ಇರುವ ವನ್ಯಜೀವಿ ಸಂರಕ್ಷಿತ ಪ್ರದೇಶಗಳನ್ನು ಸುಧಾರಣೆ ಮಾಡುವುದು, ನಿರ್ಣಾಯಕ ವನ್ಯಜೀವಿ ಆವಾಸಸ್ಥಾನಗಳನ್ನು ಗುರುತಿಸಿ, ಅವುಗಳ ಬಲವರ್ಧನೆ ಮಾಡುವುದು ಹಾಗೂ ಸಂರಕ್ಷಿತ ಅರಣ್ಯ ಪ್ರದೇಶಗಳನ್ನು ಸಂಪರ್ಕಿಸುವ ವನ್ಯಜೀವಿ



ಪಥಗಳನ್ನು ಗುರುತಿಸಿ ಸಂರಕ್ಷಿಸುವುದು. ಯಾವುದೇ ಕಾರಣಕ್ಕೂ ಹೊಸ ಹೊಸ ಅಭಿವೃದ್ಧಿ ಯೋಜನೆಗಳನ್ನು ವನ್ಯಜೀವಿ ಸಂರಕ್ಷಿತ ಪ್ರದೇಶ ಹಾಗೂ ಪಥಗಳಲ್ಲಿ ಜಾರಿ ಮಾಡದೇ ಇರುವುದು. ವನ್ಯಜೀವಿ ನೆಲೆಗಳನ್ನು ಹೆಚ್ಚು ಮಾಡುವುದರಿಂದ, ಶುದ್ಧಗಾಳಿ, ಜಲ ಹಾಗೂ ಆಹಾರ ಭದ್ರತೆಯನ್ನು ಪಡೆಯಬಹುದಾಗಿದೆ. ಕಾಳಿ ಹುಲಿ ಸಂರಕ್ಷಿತ ಪ್ರದೇಶಕ್ಕೂ ಶರಾವತಿ ಅಭಯಾರಣ್ಯಕ್ಕೂ ನಡುವೆ, ಹಾಗೆಯೇ ಕುದುರೆಮುಖ ರಾಷ್ಟ್ರೀಯ ಅಭಯಾರಣ್ಯಕ್ಕೂ ಪುಷ್ಪಗಿರಿ ವನ್ಯಜೀವಿ ಅಭಯಾರಣ್ಯಕ್ಕೂ ನಡುವೆ ಹೊಸ ವನ್ಯಜೀವಿ ಅಭಯಾರಣ್ಯ ರಚಿಸಲು ಇಲ್ಲವೇ ಕಾಡಿನ ನಡುವೆ ಸಂಪರ್ಕ ಕಲ್ಪಿಸಲು ವಿಪುಲ ಅವಕಾಶಗಳಿವೆ. ಇಂತಹ ಸಾಧ್ಯತೆಗಳನ್ನು ಸರ್ಕಾರ ಹಾಗೂ ಅರಣ್ಯ ಇಲಾಖೆ ಗುರುತಿಸಿ, ಹೊಸ ವನ್ಯಜೀವಿ ಧಾಮಗಳನ್ನು ನಿರ್ಮಿಸುವುದು ಆದ್ಯತೆಯಾಗಬೇಕು.

ರಾಜ್ಯದ ಎಲ್ಲ ಅಭಯಾರಣ್ಯಗಳಲ್ಲೂ ಅದೆಷ್ಟೋ ಕುಟುಂಬಗಳು ಕನಿಷ್ಠ ಮೂಲ ಸೌಕರ್ಯವೂ ಇಲ್ಲದೆ ಬದುಕುತ್ತಿದ್ದು, ಅವರು ನಾಗರಿಕ ಸಮಾಜದೊಂದಿಗೆ ಬದುಕುವ ಪ್ರಬಲ ಇಚ್ಛೆ ಹೊಂದಿದ್ದಾರೆ. ಕೇಂದ್ರ ಸರ್ಕಾರದ ವತಿಯಿಂದ ನೀಡಲಾಗುವ ಕಾಂಪಾ (ಕಾಂಪನ್ಸೇಟರಿ ಅಫಾರೆಸ್ಟೇಷನ್ ಫಂಡ್ ಮ್ಯಾನೇಜ್‌ಮೆಂಟ್ ಆ್ಯಂಡ್ ಪ್ಲಾನಿಂಗ್ ಅಥಾರಿಟಿ) ನಿಧಿಯನ್ನು ಬಳಸಿಕೊಂಡು, ಈ ಕುಟುಂಬಗಳು ನಾಗರಿಕ ಸಮಾಜದಲ್ಲಿ ಬಂದು ನೆಲೆಸಲು ಸೂಕ್ತವಾದ ಪುನರ್ವಸತಿ ಒದಗಿಸಲು ಸರ್ಕಾರ ಮುಂದಾಗಬೇಕು. ಹುಲಿ ಯೋಜನೆಯಡಿ ಸಂರಕ್ಷಿಸಲ್ಪಟ್ಟ ಪ್ರದೇಶಗಳಿಗೆ ಅತಿ ಹೆಚ್ಚು ಅನುದಾನವನ್ನು ಕೇಂದ್ರ ಬಿಡುಗಡೆ ಮಾಡು ತ್ತಿದೆ. ನಾಗರಹೊಳೆ, ಭದ್ರಾ, ಬಂಡೀಪುರದಂತಹ ಅಭ ಯಾರಣ್ಯಗಳಲ್ಲಿ ಹುಲಿಗಳ ಸಂಖ್ಯೆ ಸ್ಥಿರವಾಗಿದೆ ಅಥವಾ ತುಸು ಏರಿಕೆಯಾಗಿದೆ. ಉದಾಹರಣೆಗೆ, 500 ಚದರ ಕಿ.ಮೀ ವ್ಯಾಪ್ತಿಯಿರುವ ಭದ್ರಾ ಅಭಯಾರಣ್ಯಕ್ಕೆ ವಾರ್ಷಿಕ ₹ 20 ಕೋಟಿ ಅನುದಾನವಿದ್ದು, ಇಷ್ಟೇ ವ್ಯಾಪ್ತಿಯಿರುವ ಶೆಟ್ಟಿಹಳ್ಳಿ ಅಭಯಾರಣ್ಯ, ಉಂಬ್ಳೇಬೈಲು ಪ್ರದೇಶಗಳಿಗೆ ಬರೀ ₹ 3 ಕೋಟಿ ಅನುದಾನವಿದೆ.

ಅರಣ್ಯ ಇಲಾಖೆಯು ಕೇಂದ್ರದಿಂದ ಬರುವ ಅನುದಾನವನ್ನು ನಿಗದಿತ ಸಮಯದ ಮಿತಿಯಲ್ಲಿ ಖರ್ಚು ಮಾಡಬೇಕಾದ ಭರದಲ್ಲಿ, ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅನವಶ್ಯಕ ಅಭಿವೃದ್ಧಿ ಕೆಲಸಗಳನ್ನು ನಡೆಸುತ್ತಿದೆ. ವಾಸ್ತವವಾಗಿ, ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಪ್ರಕಾರ ಸಂರಕ್ಷಣೆಯನ್ನು ಹೊರತುಪಡಿಸಿ, ಬೇರೆ ಯಾವ ತರಹದ ಚಟುವಟಿಕೆಗಳೂ ನಡೆಯಬಾರದು. ಆವಾಸಸ್ಥಾನ ನಿರ್ವಹಣೆ ಹೆಸರಿನಲ್ಲಿ ಈ ಹಾನಿಕಾರಕ ಕೆಲಸಗಳನ್ನು ಇಲಾಖೆಯು ಮೊದಲು ನಿಲ್ಲಿಸಬೇಕು. ಹುಲಿ ಅಭಯಾರಣ್ಯಗಳಲ್ಲಿ ಕೇಂದ್ರ ಸರ್ಕಾರ ವಾಚರ್‌ಗಳ ಸಂಬಳವನ್ನೇ ಹಿಂದಿನ ವರ್ಷ ಮತ್ತು ಈ ವರ್ಷ ಬಿಡುಗಡೆ ಮಾಡಿಲ್ಲ. ಇದು ಸಂರಕ್ಷಣೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ.

ಮತ್ತೊಂದು ಕಡೆ, ಹುಲಿ ಯೋಜನೆಯಿಂದ ಹೊರತಾಗಿರುವ ಶೆಟ್ಟಿಹಳ್ಳಿ, ಶರಾವತಿ, ಮಲೆ ಮಹದೇಶ್ವರದಂತಹ ಅನೇಕ ಅಭಯಾರಣ್ಯಗಳಿಗೆ ಅನುದಾನದ ತೀವ್ರ ಕೊರತೆಯಿದೆ. ಹುಲಿ ಯೋಜನೆಯಡಿ ಬರುವ ಪ್ರದೇಶಗಳು ಹಾಗೂ ಹುಲಿ ಯೋಜನೆಯೇತರ ಅಭಯಾರಣ್ಯಗಳ ನಡುವೆ ಇರುವ ಅನುದಾನದ ತಾರತಮ್ಯವನ್ನು ನಿವಾರಿಸಿ, ಇತರ ಅಭಯಾರಣ್ಯಗಳನ್ನು ವನ್ಯಜೀವಿಗಳ ಉತ್ಕೃಷ್ಟ ನೆಲೆಗಳನ್ನಾಗಿ ರೂಪಿಸುವಲ್ಲಿ ಇಲಾಖೆ ಹಾಗೂ ಸರ್ಕಾರ ಕೆಲಸ ಮಾಡುವುದು ಇಂದಿನ ತುರ್ತು.

ಚುರುಮುರಿ



ಉಡುಗೊರೆ ಸಮಸ್ಯೆ

• ಆನಂದ

'ನಮ್ಮ ಹೊಸ ಮುಖ್ಯಮಂತ್ರಿಗೆ ಜೀರೊ ಟ್ರಾಫಿಕ್ ಬೇಡವಂತೆ ಕಣ್ರೀ' ಅಂದಳು ಮಡದಿ.

'ಅಂದರೆ, ಸದ್ಯಕ್ಕೆ ಇರುವ ಒಬ್ಬರೇ ಉಪಮುಖ್ಯಮಂತ್ರಿಗೂ ಜೀರೊ ಟ್ರಾಫಿಕ್ ಸೌಲಭ್ಯ ಇರದು' ಅಂದೆ.

'ನಾಳೆ ನೇಮಕಗೊಳ್ಳಬಹುದಾದ ಉಪ ಮುಖ್ಯಮಂತ್ರಿಗಳಿಗೂ ಅದು ಇರದು. ಅಂದರೆ, ತುಮಕೂರಿಗೆ ಹೋಗುವಾಗ ಟ್ರಾಫಿಕ್ ಜಾಮ್ ಇರೋಲ್ಲ ಅನ್ನಿ'.

'ಅದೇನು ತುಮಕೂರಿಗೆ ಮಾತ್ರ?'

'ಹೋದ ಸಲ ಅಲ್ಲಿನವರು ಉಪಮುಖ್ಯಮಂತ್ರಿ ಆಗಿದ್ದಾಗ ಜೀರೊ ಟ್ರಾಫಿಕ್ ಇರಲೇಬೇಕು ಅಂತ ತಾಕೀತು ಮಾಡಿದ್ದರಂತೆ. ಹೋಗಲಿ ಬಿಡು, ಬೆಂಗಳೂರಿನವರು ಈಗ ಉಸಿರಾಡಬಹುದು'.

'ಟ್ರಾಫಿಕ್ ಪೊಲೀಸರು ಸಹ. ನಾಳೆ ನಾಲ್ವರು ಉಪಮುಖ್ಯಮಂತ್ರಿಗಳೇನಾದರೂ ನೇಮಕಗೊಂಡು, ಅವರೆಲ್ಲರೂ ನಾಲ್ಕೂ ದಿಕ್ಕಿಗೆ ವಿಸಿಟ್ ಎಂದು ಒಟ್ಟಿಗೆ ಹೊರಟರೆ, ನಾಲ್ಕೂ ಕಡೆ ಜೀರೊ ಟ್ರಾಫಿಕ್ ಆಗಿ ಇಡೀ ಬೆಂಗಳೂರು ಸ್ತಬ್ಧವಾದರೆ? ಈಗ ಆ ಪರಿಸ್ಥಿತಿ ಇರೊಲ್ಲ. ಥ್ಯಾಂಕ್ಯೂ ಸಿದ್ದೂಜಿ'.

'ಅವರ ಇನ್ನೊಂದು ನಿರ್ಧಾರಕ್ಕೂ ಥ್ಯಾಂಕ್ಸ್ ಹೇಳಿ. ಅವರಿಗೆ ಹಾರ, ಶಾಲು ಬೇಡವಂತೆ'.

'ಪಾಪ! ಹೂ, ಶಾಲು ಮಾರೋರಿಗೆ ಲಾಸ್...'

'ಆಗಬಹುದು. ಅದರೆ ನಿಮ್ಮಂತಹ ಶಾಶ್ವತ ಸಾಹಿತ್ಯ ರಚನಾಕಾರರಿಗೆ ಅನುಕೂಲ ಇದೆ ನೋಡಿ'.

'ಏನೇ ಹಾಗಂದ್ರೆ?'

'ಅದೇರಿ, ಹಾರ, ಶಾಲು ಬದಲು ಪುಸ್ತಕ ಕಾಣಿಕೆ ಕೊಡಬಹುದು ಎಂದು ಹೇಳಿದ್ದಾರೆ'.

'ಅದಕ್ಕೂ ನನಗೂ ಏನು ಸಂಬಂಧ?'

'ನೀವು ಅವರನ್ನು ನೋಡಲು ಹೋದಾಗ, ಮನೇಲಿ ಖರ್ಚಾಗದೆ ಉಳಿದಿರೋ ನಿಮ್ಮ ಪುಸ್ತಕಗಳನ್ನು– ಅದೇ ಶಾಶ್ವತ ಸಾಹಿತ್ಯ– ಅವರಿಗೆ ಕೊಡಬಹುದು. ಹಾಗೇ ನಿಮ್ಮ ಸ್ನೇಹಿತರೂ ತಮ್ಮ ಪುಸ್ತಕಗಳ ಸ್ಟಾಕನ್ನು ಕ್ಲಿಯರ್ ಮಾಡಬಹುದು. ಪಾಪ! ಸಿ.ಎಂ ಸಿಬ್ಬಂದಿಗೆ ಅವುಗಳನ್ನು ಜೋಡಿಸಿಡೊ ಕೆಲಸ ಶುರುವಾಗುತ್ತೆ. ಈ ಪಾಟಿ ರದ್ದಿ ಏನು ಮಾಡೋದು ಅಂತ ಅವರೂ ತಲೆ ಕೆಡಿಸ್ಕೊತಾರೆ'.

'ಸರ್ಕಾರಿ ಲೈಬ್ರರಿಗಳಿಗೆ ಕಳಿಸ್ತಾರೆ ಬಿಡು. ಅಲ್ಲೂ ಇದೇ ಕಳೆ ತುಂಬಿಲ್ಲವೇ?'

ಸಂಗತ

ಸಂದೇಶ ರವಾನಿಸುವ ಮುನ್ನ...

ಸುಳ್ಳು ಹಾಗೂ ಖಚಿತವಲ್ಲದ ಸುದ್ದಿ, ಮಾಹಿತಿಗಳನ್ನು ವಾಟ್ಸ್‌ಆ್ಯಪ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವ ಪ್ರವೃತ್ತಿಯು ಹಲವು ತೊಂದರೆಗಳಿಗೆ ಕಾರಣವಾಗುತ್ತದೆ

• ಡಾ. ಎಚ್.ಬಿ.ಚಂದ್ರಶೇಖರ್

ಮೊನ್ನೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಚುನಾವಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಮತಗಟ್ಟೆಯಲ್ಲಿ ಪಕ್ಷವೊಂದರ ಅಭ್ಯರ್ಥಿಯ ಪೋಲಿಂಗ್ ಏಜೆಂಟ್, 'ಸರ್, ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದವರು ಅವರ ಆಧಾರ್ ಕಾರ್ಡ್ ಅಥವಾ ವೋಟರ್ ಐ.ಡಿ ಕಾರ್ಡ್ ತೋರಿಸಿ ವೋಟ್ ಮಾಡಬಹುದೇ?' ಎಂದು ಕೇಳಿದರು. ಇದಕ್ಕೆ, 'ಮತಗಟ್ಟೆಗೆ ಸಂಬಂಧಿಸಿದ ಮತದಾರರ ಪಟ್ಟಿಯಲ್ಲಿ ಹೆಸರಿದ್ದವರಷ್ಟೇ ಮತ ಹಾಕಲು ಸಾಧ್ಯ, ಉಳಿದವರಿಗೆ ಅವಕಾಶವಿಲ್ಲ' ಎಂದು ಹೇಳಿದೆ. ಇದೇ ಪ್ರಶ್ನೆಯನ್ನು, ಚುನಾವಣಾ ಅಧಿಕಾರಿಗಳಿಗೆ ನೀಡಿದ ತರಬೇತಿಯ ಸಂದರ್ಭದಲ್ಲಿಯೂ ಅನೇಕರು ಕೇಳಿದ್ದನ್ನು ನೆನಪಿಸಿಕೊಂಡೆ.

ಇದಕ್ಕೆ ಕಾರಣ, ಕೆಲ ದಿನಗಳ ಹಿಂದೆ 'ನಿಮ್ಮ ಹೆಸರು ವೋಟರ್ ಲಿಸ್ಟ್‌ನಲ್ಲಿ ಇಲ್ಲವಾದರೆ ಆಧಾರ್ ಕಾರ್ಡ್ ಅಥವಾ ವೋಟರ್ ಐ.ಡಿ ಕಾರ್ಡ್ ತೋರಿಸಿ, ಚಾಲೆಂಜ್ ವೋಟ್ ಮಾಡಬಹುದು' ಎಂಬ ಸಂದೇಶ ವಾಟ್ಸ್‌ಆ್ಯಪ್‌ನಲ್ಲಿ ಎಲ್ಲೆಡೆ ಹರಿದಾಡಿತ್ತು. ಇದು, ಜನರು ತಪ್ಪು ತಿಳಿವಳಿಕೆ ಹೊಂದಲು ಕಾರಣವಾಗಿತ್ತು.

ಈಗ್ಗೆ ಕೆಲ ವರ್ಷಗಳಿಂದ, ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾಗುವ ಕೆಲ ದಿನಗಳ ಆಸುಪಾಸಿನಲ್ಲಿ, ನಮ್ಮ ಬಹುತೇಕರ ವಾಟ್ಸ್‌ಆ್ಯಪ್‌ನಲ್ಲಿ ಸಂದೇಶವೊಂದು ಹರಿದಾಡುತ್ತದೆ. ಇನ್ಫೊಸಿಸ್ ಪ್ರತಿಷ್ಠಾನ ಬೆಂಬಲಿತ ಪ್ರೇರಣಾ ಎಂಬ ಎನ್.ಜಿ.ಒ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 80ರಷ್ಟು ಅಂಕ ಪಡೆದ ಬಡ ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆ ನಡೆಸಿ, ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಧನಸಹಾಯ ನೀಡಲಿದೆ ಎಂದೂ ಇದಕ್ಕಾಗಿ ಸರಸ್ವತಿ, ಶಿವಕುಮಾರ್, ಬಿಂದು ಎಂಬ ವ್ಯಕ್ತಿಗಳ ಮೊಬೈಲ್‌ಗೆ ಕರೆ ಮಾಡಬೇಕೆಂದೂ ಮನವಿ ಮಾಡುತ್ತಾ, ಅವರ ಮೊಬೈಲ್ ಸಂಖ್ಯೆಯ ವಿವರ ಹಾಗೂ ಜಾಲತಾಣದ ಲಿಂಕ್ ಹೊಂದಿದ ಸಂದೇಶ ನೀಡಲಾಗಿರುತ್ತದೆ. ಈ ಸಂದೇಶವನ್ನು ಸ್ವೀಕರಿಸಿದವರಲ್ಲಿ ಹೆಚ್ಚಿನವರು ತಡಮಾಡದೆ, ತಮ್ಮಲ್ಲಿರುವ ಎಲ್ಲಾ ವಾಟ್ಸ್‌ಆ್ಯಪ್ ಗುಂಪುಗಳಿಗೆ ಸಂದೇಶವನ್ನು ಫಾರ್ವರ್ಡ್ ಮಾಡಿ, ಧನ್ಯರಾಗುತ್ತಾರೆ. ಇವರು ಸಂದೇಶದಲ್ಲಿರುವ ಮೊಬೈಲ್ ಸಂಖ್ಯೆಗಳಿಗೆ ಕರೆ ಮಾಡುವುದಾಗಲಿ ಅಥವಾ ಜಾಲತಾಣಕ್ಕೆ ಭೇಟಿ ನೀಡಿ ಸುದ್ದಿಯ ಸತ್ಯಾಸತ್ಯತೆ ಪರೀಕ್ಷಿಸಲಾಗಲಿ ಪ್ರಯತ್ನಿಸುವುದಿಲ್ಲ.

ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಸುಳ್ಳು ಹಾಗೂ ಖಚಿತವಲ್ಲದ ಸುದ್ದಿ, ಮಾಹಿತಿಗಳನ್ನು ವಾಟ್ಸ್‌ಆ್ಯಪ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವ ಪ್ರವೃತ್ತಿಯು ಹಲವು ಬಗೆಯ ತೊಂದರೆಗಳಿಗೆ ಕಾರಣವಾಗುತ್ತದೆ. ಜನರು ಈ ಸುದ್ದಿಗಳನ್ನು ನಿಜವೆಂದು ನಂಬಿ, ಅವನ್ನು ಇತರರಿಗೆ ಹಂಚುವುದು ಅಥವಾ ಮೌಖಿಕವಾಗಿ ತಿಳಿಸುವುದನ್ನು ಮಾಡುತ್ತಾ ಹೋಗುವ ಕಾರಣ, ಹೆಚ್ಚಿನವರು ಈ ಸುದ್ದಿಗಳನ್ನು ನಿಜವೆಂದೇ ನಂಬುತ್ತಾರೆ. ಇಂತಹ ಸುದ್ದಿಗಳಿಂದ ಸಮಾಜದಲ್ಲಿ ಕೆಲವೊಮ್ಮೆ ಸಾಮರಸ್ಯ ಕೆಡುವಂತಹ ವಾತಾವರಣವೂ ಸೃಷ್ಟಿಯಾಗುತ್ತದೆ. ಕೆಲವು ಖಾಸಗಿ ಯುಟ್ಯೂಬ್ ಚಾನೆಲ್‌ಗಳು, 'ಈ ಪ್ರಸಿದ್ಧ ತಾರೆ ಈಗ ತಾನೇ ನಿಧನರಾದರು', 'ಶೋಕ ಸಾಗರದಲ್ಲಿ ಚಿತ್ರರಂಗ' ಎಂಬಂತಹ ಸುದ್ದಿಗಳನ್ನು ಪ್ರಸಾರ ಮಾಡುತ್ತವೆ. ಕೆಲ ದಿನಗಳ ಹಿಂದೆ, ಕನ್ನಡದ ಹಿರಿಯ ನಟರೊಬ್ಬರು ನಿಧನರಾಗಿದ್ದಾರೆ ಎಂಬ ಸಂದೇಶ ಎಲ್ಲೆಡೆ ಹರಿದಾಡಿತು. ಆಗ ಸ್ವತಃ ಆ ನಟರೇ ತಾವು ಆರೋಗ್ಯದಿಂದ ಇರುವ ಕುರಿತು ವಿಡಿಯೊ ಸಂದೇಶದ ಮೂಲಕ ಸ್ಪಷ್ಟೀಕರಣ ನೀಡಿದ್ದರು.



ಕೆಲವರಂತೂ ಪ್ರತಿದಿನ ತಮ್ಮ ಪರಿಚಿತರಿಗೆ ಗುಡ್ ಮಾರ್ನಿಂಗ್ ಸಂದೇಶವನ್ನು ಕಳುಹಿಸುತ್ತಾರೆ. ಇದರ ಜೊತೆಗೆ ಪ್ರೇರಣಾದಾಯಕ, ಆರೋಗ್ಯ ಅಥವಾ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ನೂರಾರು ಸಂದೇಶಗಳು ಬರುವ ಕಾರಣ, ಅನೇಕರು ಇಂತಹ ಸಂದೇಶಗಳನ್ನು ತೆರೆದು ಓದಲು ಹೋಗುವುದಿಲ್ಲ. ದಿನವೂ ಬರುವ ಈ ಬಗೆಯ ಸಂದೇಶಗಳು ಉಂಟು ಮಾಡುವ ಕಿರಿಕಿರಿಯಿಂದ ಕೆಲವರು ಅಂತಹ ವ್ಯಕ್ತಿಗಳನ್ನು ವಾಟ್ಸ್‌ಆ್ಯಪ್‌ನಲ್ಲಿ ಆರ್ಕೈವ್ ಮಾಡಿರುತ್ತಾರೆ ಅಥವಾ ಸಂದೇಶ ನೋಡದೆ ತಕ್ಷಣವೇ ಡಿಲೀಟ್ ಮಾಡಿಬಿಡುತ್ತಾರೆ. ಇದರಿಂದ, ಇಂತಹ ಮೆಸೇಜ್‌ಗಳ ಜೊತೆಗೆ ಬರಬಹುದಾದ ಪ್ರಮುಖ ಸಂದೇಶಗಳನ್ನೂ ಓದದೇ ಹೋಗುವ ಸಂಭವ ಇರುತ್ತದೆ.

ಕೆಲ ವರ್ಷಗಳ ಹಿಂದೆ, ನನ್ನ ಹತ್ತಿರದ ಸಂಬಂಧಿಯೊಬ್ಬರು ತಮ್ಮ ಮಗನ ಮದುವೆಯ ಆಹ್ವಾನ ಪತ್ರಿಕೆಯನ್ನು ವಾಟ್ಸ್‌ಆ್ಯಪ್ ಮೂಲಕ ಕಳುಹಿಸಿದ್ದರು. ಆದರೆ ಅವರು ಪ್ರತಿದಿನ ಕಳುಹಿಸುತ್ತಿದ್ದ ಗುಡ್ ಮಾರ್ನಿಂಗ್ ಮಾದರಿಯ ಸಂದೇಶವೇ ಇದೂ ಇರಬೇಕು ಎಂದುಕೊಂಡು ನಾನು ಅದನ್ನು ತೆರೆದು ನೋಡುವ ಗೋಜಿಗೇ ಹೋಗಲಿಲ್ಲ. ಇಂತಹ ಸಮಸ್ಯೆಗಳು ಉಂಟಾಗದಂತೆ ಅಗತ್ಯವಾದ ಸಂದರ್ಭಗಳಲ್ಲಿ ಮಾತ್ರ ಸಂದೇಶಗಳನ್ನು ಕಳುಹಿಸುವ ಮನೋಭಾವ ಹೊಂದಬೇಕು.

ಪ್ರಪಂಚದಲ್ಲಿಯೇ ಅತಿ ಹೆಚ್ಚು ಸಂದೇಶಗಳನ್ನು ಮುಂದಕ್ಕೆ ರವಾನಿಸುವ ದೇಶ ನಮ್ಮದು. ಸುಮಾರು 25 ಕೋಟಿಗೂ ಅಧಿಕ ಜನ ತಮ್ಮ ಮೊಬೈಲ್‌ನಲ್ಲಿ ವಾಟ್ಸ್‌ಆ್ಯಪ್ ಹೊಂದಿದ್ದಾರೆ. ಖಚಿತವಾದ ಮಾಹಿತಿ, ವಿಷಯಗಳನ್ನು ಹೊಂದಿದ ಸಂದೇಶ, ವಿಡಿಯೊಗಳು ನಮಗೆ ಉಪಯುಕ್ತವಾಗಬಹುದು. ಆದರೆ ಖಚಿತವಲ್ಲದ ಮತ್ತು ಹಾನಿಕಾರಕ ಸಂದೇಶಗಳಿಂದ ಸಮಸ್ಯೆ ಕಟ್ಟಿಟ್ಟಬುತ್ತಿ.

ಉಚಿತ, ಕಳುಹಿಸುವುದು ಸುಲಭ, ತಾನೇ ಮೊದಲಿಗನಾಗಬೇಕು ಎಂಬ ಮನೋಭಾವ, ಸ್ವತಃ ಬರೆಯುವುದಕ್ಕಿಂತ ಬಂದ ಸಂದೇಶವನ್ನು ಕಳುಹಿಸುವುದು ಸುಲಭ, ಚಿತ್ರದಲ್ಲಿ ಕಾಣುತ್ತಿರುವುದು ಸತ್ಯ ಎಂಬಂತಹ ಕಾರಣಗಳಿಂದ ಸಂದೇಶ ಹಾಗೂ ಚಿತ್ರಗಳನ್ನು ವ್ಯಾಪಕವಾಗಿ ಹಂಚಿಕೊಳ್ಳಲಾಗುತ್ತದೆ. ನಮ್ಮ ಮೊಬೈಲ್‌ಗೆ ಬರುವ ಎಲ್ಲಾ ಸಂದೇಶಗಳನ್ನು ಎಗ್ಗಿಲ್ಲದೇ ಮುಂದಕ್ಕೆ ರವಾನಿಸುವ ಮುನ್ನ ಮಾಹಿತಿಯನ್ನು ಖಚಿತಪಡಿಸಿಕೊಳ್ಳುವುದು ಒಳ್ಳೆಯದು.

ವಾಚಕರ ವಾಣಿ

ಕೃಷಿ ಕಾಯ್ದೆಗಳ ರದ್ದತಿಗೆ ವಿಳಂಬ ಏಕೆ?

ಒಕ್ಕೂಟ ಸರ್ಕಾರದ ನಿರ್ದೇಶನದಲ್ಲಿ ಕರ್ನಾಟಕವು 2020ರಲ್ಲಿ ಜಾರಿಗೊಳಿಸಿದ ಮೂರು ಕರಾಳ ಕೃಷಿ ಕಾಯ್ದೆಗಳ ವಿರುದ್ಧ ಸಂಯುಕ್ತ ಹೋರಾಟ ಕರ್ನಾಟಕ ಮತ್ತು ಇತರ ಸಂಘಟನೆಗಳು ಚಳವಳಿ ಮಾಡುತ್ತಿದ್ದಾಗ, ಆಗ ವಿರೋಧ ಪಕ್ಷದ ಮುಖಂಡರಾಗಿದ್ದ ಸಿದ್ದರಾಮಯ್ಯ ಅವರೂ ಭಾಗವಹಿಸಿದ್ದರು. ಅಂತೆಯೇ ದೆಹಲಿಯ ಗಡಿಭಾಗದ ಪ್ರದೇಶಗಳಲ್ಲಿ ನಡೆದಿದ್ದ ಈ ರೈತರ ಹೋರಾಟಕ್ಕೂ ಕಾಂಗ್ರೆಸ್ ಪರೋಕ್ಷವಾಗಿ ಬೆಂಬಲ ನೀಡಿತ್ತು. ರೈತರ ಪ್ರಚಂಡ ಹೋರಾಟಕ್ಕೆ ಮಣಿದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಆ ಕಾಯ್ದೆಗಳನ್ನು ರದ್ದುಪಡಿಸಿತು.

ಆದರೆ, ಕರ್ನಾಟಕದಲ್ಲಿ ಆಗಿನ ಬಿಜೆಪಿ ನೇತೃತ್ವದ ಸರ್ಕಾರವು ಕಾಯ್ದೆಗಳನ್ನು ರದ್ದುಪಡಿಸಲಿಲ್ಲ ಮತ್ತು ರದ್ದುಪಡಿಸುವುದೂ ಇಲ್ಲ ಎಂದು ವಿಧಾನಸಭೆಯಲ್ಲೇ ಘೋಷಿಸಿತ್ತು. ಈಗ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಿದೆ. ರೈತಸಂಘದ ಬೆಂಬಲದೊಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಸರ್ವೋದಯ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ಅವರಿಗೆ ಕಾಂಗ್ರೆಸ್ ಬೆಂಬಲ ನೀಡಿ ಗೆಲ್ಲಿಸಿದೆ. ಆದರೆ, ಈ ಕಾಯ್ದೆಗಳನ್ನು ರದ್ದುಪಡಿಸುವುದರ ಬಗ್ಗೆ ಸರ್ಕಾರ ಮಾತನಾಡುತ್ತಿಲ್ಲ. ಇದರಿಂದ ಮಾತಿಗೆ ತಪ್ಪಿದಂತೆ ಆಗುತ್ತದೆ. ಆದ್ದರಿಂದ, ಸಿದ್ದರಾಮಯ್ಯ ನೇತೃತ್ವದ ಸರ್ಕಾರ ವಿಳಂಬ ಮಾಡದೆ, ಸುಗ್ರೀವಾಜ್ಞೆ ಮೂಲಕವಾದರೂ ಸರಿ ಈ ಕರಾಳ ಕಾಯ್ದೆಗಳನ್ನು ತಕ್ಷಣವೇ ರದ್ದುಪಡಿಸಲು ಕ್ರಮ ಕೈಗೊಳ್ಳಬೇಕು.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಗ್ಯಾರಂಟಿಗಳ ಜೊತೆ ಇತ್ತಲೂ ಗಮನಹರಿಸಿ

ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಜಾರಿಗೆ ತರಲು ಮುಂದಾಗಿರುವ ಐದು ಗ್ಯಾರಂಟಿಗಳು ಕಾಯಿಲೆಗೆ ಚಿಕಿತ್ಸೆ ನೀಡುವ ಕ್ರಮ ಮಾತ್ರವಾಗಿವೆ. ಕಾಯಿಲೆ ಬಾರದಂತೆ ತಡೆಗಟ್ಟುವ ಮುಂಜಾಗ್ರತಾ ಕ್ರಮಗಳ ಬಗ್ಗೆಯೂ ಚಿಂತನೆ ಮಾಡಬೇಕಾಗಿದೆ. ಶೈಕ್ಷಣಿಕ ವರ್ಷ ಆರಂಭವಾಗಿರುವ ಈ ಸಮಯದಲ್ಲಿ ಖಾಸಗಿ ಶಾಲೆಗಳ ದುಬಾರಿ ಶುಲ್ಕ ಭರಿಸಲಾಗದೇ ಪೋಷಕರು ಹೈರಾಣಾಗಿದ್ದಾರೆ. ಸರ್ಕಾರಿ ಶಾಲೆಗಳ ಬಗ್ಗೆ ವಿಶ್ವಾಸಾರ್ಹತೆ, ಅವುಗಳ ಗುಣಮಟ್ಟ ಹೆಚ್ಚಿಸುವ ಕೆಲಸ ಆದ್ಯತೆಯ ಮೇಲೆ ಆಗಬೇಕಿದೆ. ಜನರ ಸಂಕಷ್ಟಕ್ಕೆ ಮತ್ತೊಂದು ಕಾರಣ ಅಸಮರ್ಪಕ ಸರ್ಕಾರಿ ಆರೋಗ್ಯ ವ್ಯವಸ್ಥೆ. ಸರ್ಕಾರಿ ಆಸ್ಪತ್ರೆಗಳಲ್ಲಿ ತಜ್ಞವೈದ್ಯರು, ಸಿಬ್ಬಂದಿಯ ಕೊರತೆ ನೀಗಿಸುವುದರ ಜೊತೆಗೆ, ರಿಯಾಯಿತಿ ದರದಲ್ಲಿ ಸೇವೆ ಒದಗಿಸುವ ರೋಗನಿರ್ಣಯ ಪ್ರಯೋಗಾಲಯಗಳನ್ನು ಸ್ಥಾಪಿಸಿದರೆ ಅನುಕೂಲವಾಗುತ್ತದೆ.

ಇನ್ನು ರೈತರಿಗೆ ಗುಣಮಟ್ಟದ ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರದಂತಹ ವಸ್ತುಗಳು ಕೈಗೆಟಕುವ ದರದಲ್ಲಿ ಸಿಗಬೇಕು. ಹೈನುಗಾರರಿಗೆ ಹಾಲಿನ ಪ್ರೋತ್ಸಾಹಧನ ಹೆಚ್ಚಿಸಬೇಕು. ಪಶು ಔಷಧಗಳ ಬೆಲೆ ಅತ್ಯಂತ ದುಬಾರಿ ಆಗಿರುವುದರಿಂದ ಮಿಶ್ರತಳಿ ಹಸುಗಳ ಮಾಲೀಕರು ಆರ್ಥಿಕ ನಷ್ಟಕ್ಕೆ ಗುರಿಯಾಗುತ್ತಿದ್ದಾರೆ. ಪ್ರಧಾನಮಂತ್ರಿ ಜನೌಷಧಿ ಮಳಿಗೆಗಳಲ್ಲಿ ಪಶು ಔಷಧಿಗಳೂ ದೊರೆಯುವಂತೆ ಆಗಬೇಕು ಅಥವಾ ರಾಜ್ಯ ಸರ್ಕಾರದ ಪ್ರೋತ್ಸಾಹದಿಂದಲೇ ಇಂತಹ ಔಷಧಿ ಮಳಿಗೆಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕು. ಹೊಸ ಸರ್ಕಾರ ಈ ದಿಸೆಯಲ್ಲಿ ಆಲೋಚಿಸಿ ಕಾರ್ಯಕ್ರಮ ರೂಪಿಸಿದಲ್ಲಿ, ಆರ್ಥಿಕವಾಗಿ ಹಿಂದುಳಿದವರು ಉಚಿತ ಕೊಡುಗೆಗಳ ಮೇಲೆ ಅವಲಂಬಿತರಾಗುವುದು ಕಡಿಮೆಯಾಗುತ್ತದೆ.

ಡಾ. ಟಿ.ಜಯರಾಂ, ಕೋಲಾರ

ಮೌಢ್ಯಕ್ಕೆ ಬಲಿಯಾಗುವ ಆಮೆಗಳು

'ಇದೋ ಬಂದಿದೆ ಆಮೆಗಳ ಹಬ್ಬ' ಎಂಬ ಗುರುರಾಜ್ ಎಸ್. ದಾವಣಗೆರೆ ಅವರ ಲೇಖನ (ಸಂಗತ ಮೇ 23) ಸಕಾಲಿಕವಾಗಿದೆ. ಪರಿಸರ ಸಮತೋಲನದಲ್ಲಿ ಆಮೆಗಳ ಪಾತ್ರ ಪ್ರಮುಖವಾದುದು. ಆದರೆ ಹೆಚ್ಚುತ್ತಿರುವ ಪರಿಸರ ನಾಶದಿಂದ ಅವುಗಳ ಸಂತತಿ ಕ್ಷೀಣಿಸುತ್ತಿದೆ. ಜೊತೆಗೆ ಆಮೆಗಳ ಸಂತತಿ ನಾಶಕ್ಕೆ ಮತ್ತೊಂದು ಸಾಮಾಜಿಕ ಕಾರಣವೂ ಇದೆ, ಅದೇ ಮೂಢನಂಬಿಕೆ!

ಹೌದು, ಮನೆಯಲ್ಲಿ ಆಮೆಯನ್ನು ಸಾಕಿದರೆ ಒಳ್ಳೆಯದಾಗುತ್ತದೆ ಎಂದು ನಂಬಿ ಆಮೆಗಳನ್ನು ಅವುಗಳ ನೈಸರ್ಗಿಕ ಆವಾಸದಿಂದ ಬಲವಂತವಾಗಿ ಹಿಡಿದು ತಂದು ಸಾಕುವವರಿದ್ದಾರೆ. ತಮ್ಮ ಮನೆಯ ಸಂಪಿನ ನೀರಿನಲ್ಲಿ ಬೆಳೆದಿರುವ ಪಾಚಿಯನ್ನು ತಿಂದುಕೊಂಡಿರಲೆಂದು ಆಮೆಗಳನ್ನು ಅದರೊಳಗೆ ತಿಂಗಳಾನುಗಟ್ಟಲೆ ಬಿಡುವವರೂ ಇದ್ದಾರೆ. ಐದು ಉಗುರಿನ ಆಮೆ ಸಾಕಿದರೆ ಕುಬೇರರಾಗುತ್ತೇವೆ ಎಂದು ನಂಬಿ ಆಮೆ ಮರಿಗಳನ್ನು ತಂದು ಸಾಕುವವರೂ ಇದ್ದಾರೆ. ಇವೆಲ್ಲವೂ ಶುದ್ಧ ಮೌಢ್ಯಗಳೆಂಬುದು ಅಕ್ಷರಶಃ ಸತ್ಯ. ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಪ್ರಕಾರ, ಆಮೆಗಳನ್ನು ಸಾಕುವುದು ಅಪರಾಧವೂ ಹೌದು. ಆದರೆ ಬಹುತೇಕರಿಗೆ ಈ ವಿಷಯವೇ ತಿಳಿದಿಲ್ಲ. ಏಕೆಂದರೆ, ನಮ್ಮಲ್ಲಿ ವಿಜ್ಞಾನಕ್ಕಿಂತ ಮೌಢ್ಯಗಳೇ ಹೆಚ್ಚು ಜನಪ್ರಿಯ. ಇನ್ನಾದರೂ ಜನರ ಮನಃಸ್ಥಿತಿ ಬದಲಾಗಿ, ಆಮೆಗಳನ್ನು ರಕ್ಷಿಸಲು ಮುಂದಾಗಬೇಕಿದೆ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಅದೃಷ್ಟದ ಭವ್ಯಸೌಧ ವಿಧಾನಸೌಧ!

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ವಿಧಾನಸೌಧದಲ್ಲಿ, ಜ್ಯೋತಿಷಿಯವರ ಸಲಹೆಯಂತೆ ಅದೃಷ್ಟದ ಕೊಠಡಿಗಳನ್ನು ಹಂಚಿಕೆ ಮಾಡಿರುವ ಬಗ್ಗೆ ವರದಿಯಾಗಿದೆ (ಪ್ರ.ವಾ., ಮೇ 24). ವಿಧಾನಸೌಧದಲ್ಲಿ ಅದೃಷ್ಟದ ಕೊಠಡಿ, ದುರದೃಷ್ಟದ ಕೊಠಡಿ ಎಂದು ಎರಡು ಬಗೆಯ ಕೊಠಡಿಗಳು ಇಲ್ಲ. ವಿಧಾನಸೌಧದಲ್ಲಿರುವ ಎಲ್ಲ ಕೊಠಡಿಗಳೂ ಅದೃಷ್ಟ ತಂದುಕೊಡುವಂತಹವೇ ಆಗಿವೆ. ಹೇಗೆಂದರೆ, ವಿಧಾನಸೌಧದಂತಹ ಭವ್ಯ ಕಟ್ಟಡದಲ್ಲಿ ಕೆಲಸ ಮಾಡಲು ಅವಕಾಶ ದೊರೆಯುವುದು ಯಾರಿಗಾದರೂ ಪ್ರತಿಷ್ಠೆಯ ವಿಷಯ. ಅದೃಷ್ಟ ಇದ್ದವರಿಗೆ ಮಾತ್ರ ಆ ಭಾಗ್ಯ ಲಭಿಸುತ್ತದೆ.

ಹತ್ತಾರು ಎಕರೆ ನೀರಾವರಿ ಜಮೀನಿರುವ ಜಮೀನ್ದಾರನ ಮಗನಿಗೆ ಹೆಣ್ಣು ಕೊಡಲು ಕನ್ಯಾಪಿತೃಗಳು ಹಿಂದೆ ಮುಂದೆ ನೋಡುತ್ತಾರೆ. ಆದರೆ ವಿಧಾನಸೌಧದಲ್ಲಿ, ನಾಲ್ಕನೇ ದರ್ಜೆ ನೌಕರನಾಗಿ ಕೆಲಸ ಮಾಡುವ ವರನಿಗೆ ಮದುವೆಗೆ ಹೆಣ್ಣು ಸಿಗುವುದು ಕಷ್ಟವಾಗುವುದಿಲ್ಲ. ಇದು ವಿಧಾನಸೌಧದ ಮಹಿಮೆ. ಅವನು ಯಾವ ಕೊಠಡಿಯಲ್ಲಿ ಕೆಲಸ ಮಾಡುತ್ತಿದ್ದರೂ ಅವನಿಗೆ ಅದೃಷ್ಟ ಖುಲಾಯಿಸುತ್ತದೆ. ವಿಧಾನಸೌಧದಲ್ಲಿ ಮಂತ್ರಿಗಳಿಗೆ ಕೊಠಡಿ ಹಂಚಿಕೆ ಮಾಡುವುದಕ್ಕೆ ನಿಯಮಗಳಿವೆ. ಆ ನಿಯಮಗಳಿಗೆ ಅನುಸಾರವಾಗಿಯೇ ಕೊಠಡಿಗಳನ್ನು ಹಂಚಿಕೆ ಮಾಡಲಾಗುತ್ತದೆ. ಮಂತ್ರಿಗಳು ಆ ನಿಯಮಗಳನ್ನು ಪಾಲಿಸಬೇಕೇ ವಿನಾ ಜ್ಯೋತಿಷಿಗಳ ಸಲಹೆಯನ್ನಲ್ಲ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನೂತನ ಸಂಸತ್ ಭವನ ಯಾರು ಉದ್ಘಾಟಿಸಬೇಕು?

• ಜಯಸಿಂಹ ಆರ್., /ಅಮೃತ ಕಿರಣ್ ಬಿ.ಎಂ.



ನೂತನವಾಗಿ ನಿರ್ಮಿಸಲಾಗಿರುವ ಸಂಸತ್ ಭವನವನ್ನು ಇದೇ ಭಾನುವಾರ, ಮೇ 28ರಂದು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಲಿದ್ದಾರೆ ಎಂದು ಸಂಸತ್ತಿನ ಕಾರ್ಯಾಲಯವು ಹೇಳಿದೆ. ಈ ಸಂಬಂಧ ಎಲ್ಲಾ ಸಂಸದರಿಗೆ ವಾಟ್ಸ್‌ಆ್ಯಪ್ ಮೂಲಕ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದೆ. ಈ ಆಹ್ವಾನ ಪತ್ರಿಕೆಯಲ್ಲಿ ರಾಷ್ಟ್ರಪತಿಯ ಹೆಸರಿಲ್ಲ. ರಾಷ್ಟ್ರಪತಿಯ ಹೆಸರು ಇಲ್ಲದೇ ಇರುವುದಕ್ಕೆ ಮತ್ತು ರಾಷ್ಟ್ರಪತಿ ಅವರನ್ನು ಹೊರಗೆ ಇಟ್ಟು, ಪ್ರಧಾನಿಯೇ ನೂತನ ಸಂಸತ್ ಭವನವನ್ನು ಉದ್ಘಾಟಿಸುತ್ತಿರುವುದಕ್ಕೆ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ದಾಖಲಿಸಿವೆ.

ರಾಷ್ಟ್ರಪತಿಯವರು ಸಂಸತ್ತಿನ ಮುಖ್ಯಸ್ಥರು. ಆ ಪ್ರಕಾರವಾಗಿ ರಾಷ್ಟ್ರಪತಿಯೇ ನೂತನ ಸಂಸತ್ ಭವನವನ್ನು ಉದ್ಘಾಟಿಸಬೇಕು. ಆದರೆ, ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸುತ್ತಿದ್ದಾರೆ. ಈ ಮೂಲಕ ಅವರು ರಾಷ್ಟ್ರಪತಿಗೆ ಅಪಮಾನ ಮಾಡುತ್ತಿದ್ದಾರೆ ಎಂದು ವಿರೋಧ ಪಕ್ಷಗಳು ಹೇಳಿವೆ. ಬಿಜೆಪಿ ಮತ್ತು ಮೋದಿ ಅವರು ಪದೇ ಪದೇ ರಾಷ್ಟ್ರಪತಿಯನ್ನು ಕಡೆಗಣಿಸುತ್ತಿದ್ದಾರೆ ಎಂದು ಎಲ್ಲಾ ವಿರೋಧ ಪಕ್ಷಗಳು ಆರೋಪಿಸಿವೆ. ರಾಷ್ಟ್ರಪತಿಯನ್ನು ಮೋದಿ ಸರ್ಕಾರವು ಕಡೆಗಣಿಸಿದ ಮತ್ತು ಅಪಮಾನಿಸಿದ ಹಲವು ಘಟನೆಗಳನ್ನು ವಿರೋಧ ಪಕ್ಷಗಳು ಪಟ್ಟಿ ಮಾಡಿವೆ.

ದೆಹಲಿಯಲ್ಲಿ ನೂತನವಾಗಿ ನಿರ್ಮಿಸಲಾಗಿದ್ದ ಯುದ್ಧ-ಸ್ಮಾರಕವನ್ನು ಪ್ರಧಾನಿ ಮೋದಿಯೇ 2019ರ ಫೆಬ್ರುವರಿ 25ರಂದು ಉದ್ಘಾಟಿಸಿದ್ದರು. ಸಂವಿಧಾನದ ಪ್ರಕಾರ, ದೇಶದ ಮೂರೂ ಸೇನಾಪಡೆಗಳ ಮುಖ್ಯಸ್ಥ ರಾಷ್ಟ್ರಪತಿಯೇ ಆಗಿರುತ್ತಾರೆ. ಸೈನಿಕರಿಗೆ ವಿವಿಧ ಪದಕಗಳನ್ನು ಪ್ರದಾನ ಮಾಡುವುದು ರಾಷ್ಟ್ರಪತಿಯೇ. ಆದರೆ, ಆಗ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಹೊರಗೆ ಇಟ್ಟು, ಪ್ರಧಾನಿ ನರೇಂದ್ರ ಮೋದಿ ಅವರು ಯುದ್ಧ ಸ್ಮಾರಕವನ್ನು ಉದ್ಘಾಟಿಸಿದ್ದರು. ನೂತನ ಸಂಸತ್ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸುವಾಗಲೂ ರಾಷ್ಟ್ರಪತಿಯನ್ನು ಮೋದಿ ಸರ್ಕಾರ ಕಡೆಗಣಿಸಿತ್ತು. ಪ್ರಧಾನಿಯೇ ಶಂಕುಸ್ಥಾಪನೆ ನೆರವೇರಿಸಿದ್ದರು. ಆ ಮೂಲಕ ರಾಷ್ಟ್ರಪತಿಗೆ ಅಪಮಾನ ಮಾಡಿದ್ದರು ಎಂದು ವಿರೋಧ ಪಕ್ಷಗಳು ಟೀಕಿಸಿವೆ.

ಹಿಂದಿನ ರಾಷ್ಟ್ರಪತಿ ಕೋವಿಂದ್ ಮತ್ತು ಈಗಿನ ರಾಷ್ಟ್ರಪತಿ ಮುರ್ಮು ಅವರು ಕ್ರಮವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರು. ದಲಿತ ಮತ್ತು ಬುಡಕಟ್ಟು ಸಮುದಾಯದವರನ್ನು ಮೋದಿ ಸರ್ಕಾರವು ಕೇವಲ ಮತಕ್ಕಾಗಿ ಬಳಸಿಕೊಳ್ಳುತ್ತಿದೆ. ಸಂವಿಧಾನಬದ್ಧವಾಗಿ ಅವರು ಉದ್ಘಾಟಿಸಬೇಕಿದ್ದ ನಿರ್ಮಾಣಗಳನ್ನು ಮೋದಿ ಅವರು ಉದ್ಘಾಟಿಸಿ, ಆ ಸಮುದಾಯಗಳಿಗೆ ಅಪಮಾನ ಮಾಡಿದ್ದಾರೆ ಎಂದು ಕಾಂಗ್ರೆಸ್ ಟೀಕಿಸಿದೆ.

ರಾಷ್ಟ್ರಪತಿಯೇ ಕಾರ್ಯಾಂಗದ ಮುಖ್ಯಸ್ಥ

ರಾಷ್ಟ್ರಪತಿಯೇ ಕಾರ್ಯಾಂಗದ ಮುಖ್ಯಸ್ಥ. ಕಾರ್ಯಾಂಗವಾದ ಸಂಸತ್ತು ರಾಷ್ಟ್ರಪತಿ ಮತ್ತು ರಾಜ್ಯಸಭೆ ಹಾಗೂ ಲೋಕಸಭೆಗಳನ್ನು ಒಳಗೊಂಡಿರಬೇಕು ಎಂದು ಸಂವಿಧಾನವು ವಿವರಿಸಿದೆ. ರಾಷ್ಟ್ರಪತಿಯ ಅಧಿಕಾರ ಮತ್ತು ರಾಷ್ಟ್ರಪತಿಗೆ ಸಂಬಂಧಿಸಿದಂತೆ ಪ್ರಧಾನಿ ಹಾಗೂ ಮಂತ್ರಿಮಂಡಲದ ಕರ್ತವ್ಯಗಳನ್ನೂ ಸಂವಿಧಾನದ ವಿವಿಧ ವಿಧಿಗಳಲ್ಲಿ ವಿವರಿಸಲಾಗಿದೆ. ರಾಷ್ಟ್ರಪತಿಯೇ ಸಂಸತ್ತು/ಕಾರ್ಯಾಂಗದ ಮುಖ್ಯಸ್ಥ ಎಂದು ಈ ವಿಧಿಗಳು ವಿವರಿಸುತ್ತವೆ.

77ನೇ ವಿಧಿ, ಭಾರತ ಸರ್ಕಾರದ ವ್ಯವಹಾರ ನಿರ್ವಹಣೆ: 'ಭಾರತ ಸರ್ಕಾರದ ಎಲ್ಲ ಕಾರ್ಯಾಂಗದ ಸಮಸ್ತ ಕಾರ್ಯವು ರಾಷ್ಟ್ರಪತಿಯ ಹೆಸರಿನಲ್ಲಿ ನಡೆಯಬೇಕು' ಎಂದು 77ನೇ (1) ವಿಧಿಯಲ್ಲಿ ವಿವರಿಸಲಾಗಿದೆ.

78ನೇ ವಿಧಿ, ರಾಷ್ಟ್ರಪತಿಗೆ ಮಾಹಿತಿ ನೀಡುವ ಬಗ್ಗೆ ಪ್ರಧಾನಿ ಕರ್ತವ್ಯಗಳು: ಮಂತ್ರಿಮಂಡಲದ ತೀರ್ಮಾನಗಳು, ಕಾನೂನು ರಚನೆ ಪ್ರಸ್ತಾವಗಳು, ರಾಷ್ಟ್ರಪತಿ ಕೇಳುವ ಮಾಹಿತಿಗಳನ್ನು ಒದಗಿಸುವುದು ಮತ್ತು ರಾಷ್ಟ್ರಪತಿ ಸೂಚಿಸಿದ ವಿಷಯವನ್ನು ಪರಾಮರ್ಶಿಸುವಂತೆ ಮಂತ್ರಿಮಂಡಲಕ್ಕೆ ಸೂಚಿಸುವುದು ಪ್ರಧಾನಿಯ ಕರ್ತವ್ಯ ಎಂದು ಈ ವಿಧಿಯ ಮೂರು ಉಪವಿಧಿಗಳಲ್ಲಿ ವಿವರಿಸಲಾಗಿದೆ.

79ನೇ ವಿಧಿ, ಸಂಸತ್ತಿನ ರಚನೆ: 'ಭಾರತ ಒಕ್ಕೂಟವು ಒಂದು ಸಂಸತ್ತನ್ನು ಹೊಂದಿರಬೇಕು. ಸಂಸತ್ತು, ರಾಷ್ಟ್ರಪತಿ ಮತ್ತು ಅನುಕ್ರಮವಾಗಿ ರಾಜ್ಯಸಭೆ, ಲೋಕಸಭೆಯನ್ನು ಹೊಂದಿರಬೇಕು' ಎಂದು ಈ ವಿಧಿಯ 1ನೇ ಉಪವಿಧಿಯಲ್ಲಿ ವಿವರಿಸಲಾಗಿದೆ.


86ನೇ ವಿಧಿ, ಉಭಯ ಸದನಗಳಲ್ಲಿ ಭಾಷಣ ಮಾಡುವ ಮತ್ತು ಸಂದೇಶ ನೀಡುವುದು ರಾಷ್ಟ್ರಪತಿಯ ಹಕ್ಕು: ಸಂಸತ್ತಿನ ಯಾವುದೇ ಒಂದು ಸದನ ಅಥವಾ ಉಭಯ ಸದನಗಳ ಜಂಟಿ ಅಧಿವೇಶನ ಕರೆದು, ಆ ಸದನವನ್ನು ಉದ್ದೇಶಿಸಿ ಭಾಷಣ ಮಾಡುವ ಹಕ್ಕು ರಾಷ್ಟ್ರಪತಿಯದ್ದು ಎಂದು ಈ ವಿಧಿಯ 1ನೇ ಉಪವಿಧಿ ಹೇಳುತ್ತದೆ.

ಸಂಸತ್ತಿನಲ್ಲಿ ಇತ್ಯರ್ಥವಾಗದೇ ಇರುವ ಮಸೂದೆಗಳಿಗೆ ಸಂಬಂಧಿಸಿದಂತೆ ಪರಾಮರ್ಶೆ ನಡೆಸುವಂತೆ ಯಾವುದೇ ಸದನಕ್ಕೂ ಸಂದೇಶ ಕಳುಹಿಸುವ ಹಕ್ಕು ರಾಷ್ಟ್ರಪತಿಗೆ ಇದೆ ಎಂದು ಈ ವಿಧಿಯ 2ನೇ ಉಪವಿಧಿಯಲ್ಲಿ ವಿವರಿಸಲಾಗಿದೆ.

87ನೇ ವಿಧಿ, ವಿಶೇಷ ಭಾಷಣ: ನೂತನ ಲೋಕಸಭೆ ರಚನೆಯಾದ ನಂತರ ಮೊದಲ ಅಧಿವೇಶನದಲ್ಲಿ ಹಾಗೂ ಪ್ರತಿ ವರ್ಷದ ಮೊದಲ ಅಧಿವೇಶನದ ಸಂದರ್ಭದಲ್ಲಿ ಉಭಯ ಸದನಗಳನ್ನು ಒಳಗೊಂಡ ಜಂಟಿ ಅಧಿವೇಶನ ಕರೆಯುವ ಮತ್ತು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣಮಾಡುವ ಅಧಿಕಾರ ರಾಷ್ಟ್ರಪತಿಗೆ ಇದೆ ಎಂದು ಈ ವಿಧಿಯ 1ನೇ ಉಪವಿಧಿಯಲ್ಲಿ ವಿವರಿಸಲಾಗಿದೆ.

111ನೇ ವಿಧಿ, ಮಸೂದೆಗಳಿಗೆ ಅಂಕಿತ ಹಾಕುವ ಅಧಿಕಾರ: ಸಂಸತ್ತಿನ ಉಭಯ ಸದನಗಳಲ್ಲಿ ಅನುಮೋದನೆ ಪಡೆದ ಮಸೂದೆಗಳಿಗೆ ಅಂಕಿತ ಹಾಕುವ ಅಥವಾ ಅದನ್ನು ತಡೆಹಿಡಿಯುವ ಮತ್ತು ಪರಾಮರ್ಶನೆಗೆ ಕಳುಹಿಸುವ ಅಧಿಕಾರ ರಾಷ್ಟ್ರಪತಿಗೆ ಇದೆ ಎಂದು ಈ ವಿಧಿಯಲ್ಲಿ ವಿವರಿಸಲಾಗಿದೆ.

ಪ್ರಧಾನಿಯಿಂದ ಉದ್ಘಾಟನೆ ವಿರೋಧಿಸಲಾಗದು



ಸಂಸತ್ತಿನ ಹೊಸ ಕಟ್ಟಡವನ್ನು ಉದ್ಘಾಟಿಸುವುದಕ್ಕೆ ಯಾರನ್ನು ಕರೆಯಬೇಕು ಎಂಬುದು ನನ್ನ ಪ್ರಕಾರ ಒಂದು ರಾಜಕೀಯ ತೀರ್ಮಾನ ಮಾತ್ರ. ಯಾವುದೇ ಕಾನೂನು ಅಥವಾ ಸಂವಿಧಾನವು ಯಾವುದೇ ಕಟ್ಟಡವು ಇಂಥ ವ್ಯಕ್ತಿಯಿಂದ ಉದ್ಘಾಟನೆ ಆಗಬೇಕು ಎಂದು ಹೇಳುವುದಿಲ್ಲ. ಸಂಸತ್ತಿನ ಹೊಸ ಕಟ್ಟಡವನ್ನು ಪ್ರಧಾನಿ ಉದ್ಘಾಟಿಸುವ ಪ್ರಕ್ರಿಯೆಯಲ್ಲಿ ಯಾವ ಕಾನೂನಿನ ಉಲ್ಲಂಘನೆಯೂ ಕಾಣುತ್ತಿಲ್ಲ. ಸಂಸತ್ ಭವನದ ಅನೆಕ್ಸ್ ಕಟ್ಟಡವನ್ನು ಇಂದಿರಾ ಗಾಂಧಿ, ಪಂಡಿತ್ ಜವಾಹರಲಾಲ್ ನೆಹರೂ ಉದ್ಘಾಟಿಸಿದ ನಿದರ್ಶನಗಳು ಇವೆ.

ರಾಷ್ಟ್ರಪತಿಯವರು ಕೂಡ ಸಂಸತ್ತಿನ ಭಾಗ ಎಂಬುದು ಒಪ್ಪತಕ್ಕ ಮಾತು. ಆದರೆ, ಸಂಸತ್ತಿನ ಹೊಸ ಕಟ್ಟಡವನ್ನು ರಾಷ್ಟ್ರಪತಿಯವರೇ ಉದ್ಘಾಟಿಸಬೇಕು ಎಂಬುದೇನೂ ಇಲ್ಲ. ಪ್ರಧಾನಿ ಉದ್ಘಾಟಿಸುವುದನ್ನು ವಿರೋಧಿಸಲು ಕಾನೂನಿನ ಪ್ರಕಾರ ಅವಕಾಶ ಇಲ್ಲ.

ಸಂಸತ್ತು ಪ್ರಜೆಗಳ ಪ್ರತಿನಿಧಿಗಳ ಮನೆ. ಅಲ್ಲಿನ ನಾಯಕ ಪ್ರಧಾನಿ. ಆತ ಚುನಾಯಿತ ವ್ಯಕ್ತಿ. 'ರಾಷ್ಟ್ರಪತಿ' ಹುದ್ದೆ ಉನ್ನತ ಆಗಿರಬಹುದು. ಆದರೆ ರಾಷ್ಟ್ರಪತಿಯು ಜನರಿಂದ ನೇರವಾಗಿ ಚುನಾಯಿತ ಆಗುವುದಿಲ್ಲ. ಸಂಸತ್ತು ಇಡೀ ದೇಶದ ಪ್ರತಿನಿಧಿಗಳನ್ನು ಹೊಂದಿದೆ. ಸಂಸತ್ತಿನಲ್ಲಿ ಅತ್ಯುನ್ನತ ಸ್ಥಾನವು ಪ್ರಧಾನಿಗೆ ಸೇರುತ್ತದೆ. ಅವರು ಉದ್ಘಾಟನೆ ಮಾಡುವುದು ರಾಷ್ಟ್ರಪತಿಯನ್ನು ಅವಮಾನಿಸಿದಂತೆ ಅಲ್ಲ.

ಬಿ.ವಿ. ಆಚಾರ್ಯ, ಹಿರಿಯ ವಕೀಲ

'ರಾಷ್ಟ್ರಪತಿಯೇ ಹೆಚ್ಚು ಅರ್ಹರು'



ನೂತನ ಸಂಸತ್ ಭವನ ಉದ್ಘಾಟಿಸಲು ಪ್ರಧಾನಿ ಸಜ್ಜಾಗಿದ್ದಾರೆ. ಆದರೆ ದೇಶದ ಸಂವಿಧಾನದ ಮುಖ್ಯಸ್ಥರಾಗಿರುವ ರಾಷ್ಟ್ರಪತಿಯವರು ಹೊಸ ಕಟ್ಟಡವನ್ನು ಉದ್ಘಾಟನೆ ಮಾಡುವುದು ಸೂಕ್ತ. ರಾಷ್ಟ್ರಪತಿ ಅವರು ಸಂಸತ್ತಿನ ಮುಖ್ಯಸ್ಥರು. ಲೋಕಸಭೆ ಹಾಗೂ ರಾಜ್ಯಸಭೆಗಳನ್ನು ಒಳಗೊಂಡಿರುವ ಸಂಸತ್ತು ರಾಷ್ಟ್ರಪತಿಯವರ ನೇತೃತ್ವದಲ್ಲೇ ಕೆಲಸ ಮಾಡುತ್ತದೆ. ಎರಡೂ ಸದನಗಳ ಕಾರ್ಯಕಲಾಪಗಳು ನಡೆಯುವ ಸಂಸತ್ ಭವನವು ರಾಷ್ಟ್ರಪತಿ ಅವರಿಂದ ಉದ್ಘಾಟನೆಗೊಂಡರೆ ಉತ್ತಮ.

ಸಂಸತ್ ಕಟ್ಟಡವನ್ನು ಯಾರು ಉದ್ಘಾಟನೆ ಮಾಡಬೇಕು ಎಂಬ ವಿಚಾರ ಸಂವಿಧಾನದಲ್ಲಿ ಪ್ರಸ್ತಾಪವಾಗಿಲ್ಲ. ಈಗ ಕಾರ್ಯನಿರ್ವಹಿಸುತ್ತಿರುವ ಸಂಸತ್ ಕಟ್ಟಡವನ್ನು ಮೂವತ್ತರ ದಶಕದಲ್ಲಿ ಉದ್ಘಾಟನೆ ಮಾಡಲಾಗಿತ್ತು. ಆಗ ಭಾರತ ಇನ್ನೂ ಸ್ವತಂತ್ರಗೊಂಡಿರಲಿಲ್ಲ. ರಾಷ್ಟ್ರಪತಿ ಅಥವಾ ಪ್ರಧಾನಿ ಹೆಸರಿನ ಹುದ್ದೆಗಳೂ ಇರಲಿಲ್ಲ. ಬ್ರಿಟಿಷರ ಆಳ್ವಿಕೆ ಇದ್ದುದರಿಂದ, ಯಾರು ಉದ್ಘಾಟನೆ ಮಾಡಬೇಕು ಎಂಬ ಪ್ರಶ್ನೆಯೇ ಆಗ ಉದ್ಭವಿಸಿರಲಿಲ್ಲ. ಈಗ ಈ ಚರ್ಚೆ ಶುರುವಾಗಿದೆ.

ಯಾರು ಉದ್ಘಾಟನೆ ಮಾಡಬೇಕು ಎಂಬ ವಿಚಾರವನ್ನು ಕಾನೂನಾತ್ಮಕವಾಗಿ ನೋಡುವುದಕ್ಕಿಂತ ಹೆಚ್ಚಾಗಿ ಅದನ್ನು ಒಂದು ತಾತ್ವಿಕ ವಿಚಾರ ಎಂಬ ದೃಷ್ಟಿಯಲ್ಲಿ ನೋಡಬೇಕು. ಹೊಸ ಕಟ್ಟಡ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ್ದ ಪ್ರಧಾನಿ ಅವರು, ಹೊಸ ಕಟ್ಟಡ ನಿರ್ಮಾಣ ವಿಚಾರದಲ್ಲಿ ಅತ್ಯಂತ ಆಸಕ್ತಿ ತೋರಿಸಿದ್ದಾರೆ. ಈ ದೃಷ್ಟಿಯಲ್ಲಿ ನೋಡಿದರೆ ಪ್ರಧಾನಿ ಅವರು ಉದ್ಘಾಟನೆ ಮಾಡಬೇಕು ಎಂಬ ವಾದ ಬಲಗೊಳ್ಳುತ್ತದೆ. ರಾಷ್ಟ್ರಪತಿ ಹಾಗೂ ಪ್ರಧಾನಿಯ ಪ್ರಾತಿನಿಧಿತ್ವ ವಿಚಾರದಲ್ಲೂ ಕೂಡಾ ಸಾಕಷ್ಟು ಭಿನ್ನತೆಯಿದೆ. ಲೋಕಸಭೆಯಲ್ಲಿ ಬಹುಮತ ಪಡೆದಿರುವ ಪಕ್ಷದ ನಾಯಕ ಪ್ರಧಾನಿಯಾಗಿ ಆಯ್ಕೆಯಾಗುತ್ತಾರೆ. ಆದರೆ, ರಾಷ್ಟ್ರಪತಿಯವರು ರಾಜ್ಯ ಮತ್ತು ಕೇಂದ್ರದ ಎಲ್ಲ ಚುನಾಯಿತ ಸದಸ್ಯರಿಂದ ಆರಿಸಿಬರುತ್ತಾರೆ. ಈ ಅರ್ಥದಲ್ಲಿ ನೋಡಿದರೆ ರಾಷ್ಟ್ರಪತಿ ಅವರೇ ಇಡೀ ದೇಶದ ಪ್ರತಿನಿಧಿ.

ಪ್ರಧಾನಿ ಹುದ್ದೆಗಿಂತ ರಾಷ್ಟ್ರಪತಿ ಹುದ್ದೆ ಕಾಯಂ ಆದುದು. ಒಮ್ಮೆ ಚುನಾಯಿತರಾದ ಬಳಿಕ ಒಂದು ನಿರ್ದಿಷ್ಟ ಅವಧಿಯವರೆಗೆ ರಾಷ್ಟ್ರಪತಿ ನೇಮಕವಾಗುತ್ತಾರೆ. ಆದರೆ ನಮ್ಮ ಸಂಸದೀಯ ವ್ಯವಸ್ಥೆಯಲ್ಲಿ ಪ್ರಧಾನಿಯವರು ಲೋಕಸಭೆಯಲ್ಲಿ ಬಹುಮತ ಕಳೆದುಕೊಂಡರೆ ಅವರು ರಾಜೀನಾಮೆ ನೀಡಬೇಕಾಗುತ್ತದೆ. ರಾಷ್ಟಪತಿ ಅವರು ಸರ್ವೋಚ್ಚ ಹುದ್ದೆಯನ್ನು ಅಲಂಕರಿಸಿರುವ ಕಾರಣ, ಉದ್ಘಾಟನೆಗೆ ಅವರೇ ಹೆಚ್ಚು ಅರ್ಹರು. ಉದ್ಘಾಟನೆಗೊಳ್ಳಲಿರುವ ನೂತನ ಕಟ್ಟಡವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಸ್ಮಾರಕವಾಗಿ ಗುರುತಿಸಿಕೊಳ್ಳುವ ಸಾಧ್ಯತೆಯಿದೆ. ಹೀಗಾಗಿ ರಾಷ್ಟ್ರದ ಪ್ರತಿನಿಧಿ ಎಂದು ಕರೆಯಲಾಗುವ ರಾಷ್ಟ್ರಪತಿ ಅವರೇ ಇದರ ಉದ್ಘಾಟನೆ ನೆರವೇರಿಸುವುದು ಸಾಂಕೇತಿಕವಾಗಿಯೂ ಸರಿ ಎನಿಸುತ್ತದೆ.

ವೆಲೇರಿಯನ್ ರೋಡ್ರಿಗಸ್, ಸಂವಿಧಾನ ತಜ್ಞ

ಆಧಾರ: ಭಾರತ ಸಂವಿಧಾನ, ಪಿಟಿಐ, ರಾಜಕೀಯ ಪಕ್ಷಗಳ ಅಧಿಕೃತ ಟ್ವೀಟ್‌ಗಳು

ತರಹೇವಾರಿ ಮಾದರಿ

ಈಗಿನ ಸಂಸತ್ ಭವನವು ಬ್ರಿಟಿಷರ ಆಳ್ವಿಕೆಯಲ್ಲಿ ಉದ್ಘಾಟನೆಯಾಗಿತ್ತು. ಸ್ವತಂತ್ರ ಭಾರತದಲ್ಲಿ ಸಂಸತ್ ಭವನವನ್ನು ಉದ್ಘಾಟಿಸುವ ಪ್ರಮೇಯವೇ ಬಂದಿರಲಿಲ್ಲ. ಆದರೆ ದೇಶದ ವಿವಿಧ ರಾಜ್ಯಗಳ ವಿಧಾನಸಭೆಯ ಕಟ್ಟಡಗಳನ್ನು ಕೆಲವೊಮ್ಮೆ ರಾಷ್ಟ್ರಪತಿ, ಪ್ರಧಾನಿ ಉದ್ಘಾಟಿಸಿದ ಹಲವು ಉದಾಹರಣೆಗಳು ಇವೆ.

ಅನೆಕ್ಸ್ ಉದ್ಘಾಟಿಸಿದ್ದ ಇಂದಿರಾ

ದೆಹಲಿಯಲ್ಲಿ ಸಂಸತ್ ಭವನಕ್ಕೆ ಹೊಂದಿಕೊಂಡಂತೆ ಅನೆಕ್ಸ್ ಕಟ್ಟಡ ನಿರ್ಮಿಸಬೇಕು ಎಂಬ ಉದ್ದೇಶದಿಂದ 1970ರ ಆಗಸ್ಟ್ 3ರಂದು ಅಡಿಗಲ್ಲು ಹಾಕಲಾಗಿತ್ತು. ಅಂದಿನ ರಾಷ್ಟ್ರಪತಿಯಾಗಿದ್ದ ವಿ.ವಿ. ಗಿರಿ ಅವರು ಶಂಕುಸ್ಥಾಪನೆ ನೆರವೇರಿಸಿದ್ದರು. ಇದಾಗಿ ಐದು ವರ್ಷಗಳ ಅವಧಿಯಲ್ಲಿ ಅನೆಕ್ಸ್ ಕಟ್ಟಡ ನಿರ್ಮಾಣ ಪೂರ್ಣಗೊಂಡಿತು. ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಅವರು ಅನೆಕ್ಸ್ ಕಟ್ಟಡವನ್ನು 1975ರಲ್ಲಿ ಉದ್ಘಾಟಿಸಿದ್ದರು. ಈ ಸಮಯದಲ್ಲಿ ಫಕ್ರುದ್ದೀನ್ ಅಲಿ ಅಹ್ಮದ್ ಅವರು ರಾಷ್ಟ್ರಪತಿಯಾಗಿದ್ದರು. ರಾಷ್ಟ್ರಪತಿ ವಿ.ವಿ ಗಿರಿ ಅವರು ಶಂಕುಸ್ಥಾಪನೆ ಮಾಡಿದ್ದ ಕಟ್ಟಡವನ್ನು, ಪ್ರಧಾನಿ ಇಂದಿರಾ ಅವರು ಉದ್ಘಾಟನೆ ಮಾಡಿ ಬಳಕೆಗೆ ಮುಕ್ತಗೊಳಿಸಿದ್ದರು.

ಗ್ರಂಥಾಲಯಕ್ಕೆ ರಾಜೀವ್ ಅಡಿಗಲ್ಲು

ಇದೇ ಸಂಸತ್ ಭವನದ ಕಟ್ಟಡದಲ್ಲಿ ಗ್ರಂಥಾಲಯ ನಿರ್ಮಾಣ ಮಾಡುವ ಯೋಜನೆ ರೂಪಿಸಲಾಯಿತು. ಪ್ರಧಾನಿ ರಾಜೀವ್ ಗಾಂಧಿ ಅವರು ಸಂಸತ್ ಭವನದಲ್ಲಿ ಗ್ರಂಥಾಲಯ ನಿರ್ಮಾಣಕ್ಕೆ 1987ರಲ್ಲಿ ಚಾಲನೆ ನೀಡಿದ್ದರು. ಅವರು ಶಂಕುಸ್ಥಾಪನೆ ನೆರವೇರಿಸಿದ್ದ ಈ ಸಮಯದಲ್ಲಿ ಆರ್. ವೆಂಕಟರಾಮನ್ ಅವರು ಭಾರತದ ರಾಷ್ಟ್ರಪತಿ ಹುದ್ದೆಯಲ್ಲಿದ್ದರು. ಆದರೆ ಕಟ್ಟಡಕ್ಕೆ ಅಡಿಗಲ್ಲು ಹಾಕಿದ್ದು ಪ್ರಧಾನಿ ರಾಜೀವ್ ಗಾಂಧಿ.

ಗ್ರಂಥಾಲಯ ಲೋಕಾರ್ಪಣೆ ಮಾಡಿದ್ದ ನಾರಾಯಣನ್

ಸಂಸತ್ ಭವನದಲ್ಲಿ ನೂತನವಾಗಿ ನಿರ್ಮಾಣವಾಗಿದ್ದ ಗ್ರಂಥಾಲಯವನ್ನು ಈಗ್ಗೆ 21 ವರ್ಷಗಳ ಹಿಂದೆ ಉದ್ಘಾಟಿಸಲಾಗಿತ್ತು. ಅಂದಿನ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರನ್ನು ಉದ್ಘಾಟನೆಗೆ ಆಹ್ವಾನಿಸಲಾಗಿತ್ತು. ಅವರು 2002ರ ಮೇ 7ರಂದು ಗ್ರಂಥಾಲಯ ಉದ್ಘಾಟಿಸಿದ್ದರು. ಪ್ರಧಾನಿ ರಾಜೀವ್ ಗಾಂಧಿ ಶಂಕುಸ್ಥಾಪನೆ ನೆರವೇರಿಸಿದ್ದ ಗ್ರಂಥಾಲಯವನ್ನು ರಾಷ್ಟ್ರಪತಿ ಲೋಕಾರ್ಪಣೆ ಮಾಡಿದ್ದರು.

ವಿಧಾನಸೌಧ ಉದ್ಘಾಟನೆಯೇ ಆಗಿಲ್ಲ

ಕರ್ನಾಟಕದ ವಿಧಾನಸೌಧ ಉದ್ಘಾಟನೆಯೇ ಆಗಿಲ್ಲ ಎಂದು ಕನ್ನಡದ ದಿನಪತ್ರಿಕೆಯೊಂದರಲ್ಲಿ 2012ರ ಜೂನ್ 18ರಂದು ವಿಶೇಷ ವರದಿ ಪ್ರಕಟವಾಗಿತ್ತು. ವಿಧಾನಸೌಧ ನಿರ್ಮಾಣಕ್ಕೆ ಕೆಂಗಲ್ ಹನುಮಂತಯ್ಯನವರು ಅಡಿಗಲ್ಲು ಹಾಕಿದ್ದರೂ, ಪೂರ್ಣಗೊಳ್ಳುವಷ್ಟರಲ್ಲಿ ಅಧಿಕಾರ ಕಳೆದುಕೊಂಡಿದ್ದರು. ನಂತರ ಮುಖ್ಯಮಂತ್ರಿ ಹುದ್ದೆಗೇರಿದ ಕಡಿದಾಳ್ ಮಂಜಪ್ಪ ಅವರು ಎರಡು ತಿಂಗಳು ಮತ್ತು 22 ದಿನ ಅಧಿಕಾರದಲ್ಲಿದ್ದರು. ಅಲ್ಪಾವಧಿಯಲ್ಲಿ ಆದ ಈ ಅಧಿಕಾರದ ಸ್ಥಿತ್ಯಂತರದ ಕಾರಣ ವಿಧಾನಸೌಧವನ್ನು ಅಧಿಕೃತವಾಗಿ ಉದ್ಘಾಟನೆ ಮಾಡಲೇ ಇಲ್ಲ. ವಿಧಾನಸೌಧ ಉದ್ಘಾಟನೆಗೆ ಸಂಬಂಧಿಸಿದಂತೆ 'ಉದ್ಘಾಟನಾ ಶಿಲೆ', ವಾರ್ತಾ ಇಲಾಖೆಯಲ್ಲಿ ವರದಿ ಮತ್ತು ಚಿತ್ರ, ರಾಜ್ಯ ಪತ್ರಾಗಾರದಲ್ಲಿ ದಾಖಲೆಗಳು ಇಲ್ಲ.



ಸುವರ್ಣಸೌಧ ಉದ್ಘಾಟಿಸಿದ್ದ ಪ್ರಣವ್

ಕರ್ನಾಟಕದ ಬೆಳಗಾವಿಯಲ್ಲಿ ಹೊಸದಾಗಿ ಸುವರ್ಣ ವಿಧಾನಸೌಧ ಕಟ್ಟಡವನ್ನು ನಿರ್ಮಿಸಲಾಯಿತು. ಅಂದಿನ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರು ರಾಷ್ಟ್ರಪತಿಯಾಗಿದ್ದ ಪ್ರಣವ್ ಮುಖರ್ಜಿ ಅವರನ್ನು ಕಟ್ಟಡ ಉದ್ಘಾಟನೆಗೆ ಆಹ್ವಾನಿಸಿದ್ದರು. 2012ರ ಅಕ್ಟೋಬರ್ 11ರಂದು ಕಟ್ಟಡ ಉದ್ಘಾಟಿಸಿದ್ದ ಅವರು ಜಂಟಿ ಸದನ ಉದ್ದೇಶಿಸಿ ಭಾಷಣ ಮಾಡಿದ್ದರು.

ತಮಿಳುನಾಡು ವಿಧಾನಸಭೆ ಕಟ್ಟಡ ಮನಮೋಹನ್ ಸಿಂಗ್ ಲೋಕಾರ್ಪಣೆ

2010ರಲ್ಲಿ ತಮಿಳುನಾಡಿನಲ್ಲಿ ಡಿಎಂಕೆ ಅಧಿಕಾರದಲ್ಲಿದ್ದ ಅವಧಿಯಲ್ಲಿ ವಿಧಾನಸಭೆಯ ಹೊಸ ಕಟ್ಟಡ ಉದ್ಘಾಟನೆಗೆ ಸಿದ್ಧವಾಗಿತ್ತು. ಅಂದು ಪ್ರಧಾನಿಯಾಗಿದ್ದ ಡಾ. ಮನಮೋಹನ್ ಸಿಂಗ್ ಅವರು ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದ ಸೋನಿಯಾ ಗಾಂಧಿ ಅವರ ಸಮ್ಮುಖದಲ್ಲಿ ತಮಿಳುನಾಡು ವಿಧಾನಸಭೆಯ ಹೊಸ ಕಟ್ಟಡ ಉದ್ಘಾಟಿಸಿದ್ದರು. ಆದರೆ, ತೆಲಂಗಾಣದಲ್ಲಿ ನಿರ್ಮಾಣವಾದ ವಿಧಾನಸಭೆಯ ಹೊಸ ಕಟ್ಟಡ ಹಾಗೂ ಸಚಿವಾಲಯ ಕಟ್ಟಡಗಳನ್ನು ಅಲ್ಲಿನ ಮುಖ್ಯಮಂತ್ರಿ ಉದ್ಘಾಟಿಸಿದ್ದರು.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಹಿಳೆಯೊಬ್ಬರು ಶ್ರೀರಾಮನ ಚಿತ್ರವಿರುವ ಬ್ಯಾನರ್ ಮೇಲೆ ಮೊಟ್ಟೆ ಎಸೆಯುತ್ತಿರುವ ಸಿಸಿಟಿವಿ ಕ್ಯಾಮೆರಾ ದೃಶ್ಯವೊಂದು ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮಹಾರಾಷ್ಟ್ರದ ಛತ್ರಪತಿ ಸಂಭಾಜಿ ನಗರದಲ್ಲಿ (ಔರಂಗಾಬಾದ್) ಈ ಘಟನೆ ನಡೆದಿದೆ. ದರ್ಗಾ ರಸ್ತೆಯ ಮಧ್ಯದ ಚೌಕವೊಂದರಲ್ಲಿ ಹಾಕಲಾಗಿರುವ ಶ್ರೀರಾಮನ ಬ್ಯಾನರ್ ಬಳಿಗೆ ತೆರಳುವ ಮಹಿಳೆ ಮೊಟ್ಟೆ ಎಸೆದು ವಾಪಸಾಗುತ್ತಾಳೆ. ಈ ವಿಡಿಯೊವನ್ನು ಹಂಚಿಕೊಂಡಿರುವ ಸಾಮಾಜಿಕ ಜಾಲತಾಣ ಬಳಕೆದಾರರು, 'ಈ ಮುಸ್ಲಿಂ ಮಹಿಳೆಗೆ ಶ್ರೀರಾಮನನ್ನು ಕಂಡರೆ ಏಕಿಷ್ಟು ಕೋಪ? ಇಷ್ಟೊಂದು ವಿಷ ತುಂಬಿಕೊಂಡಿದ್ದಾದರೂ ಹೇಗೆ'? ಎಂದು ಬರೆದುಕೊಂಡಿದ್ದಾರೆ. ಆದರೆ, ಈ ಮಹಿಳೆ ಮುಸ್ಲಿಂ ಸಮುದಾಯದವಳಲ್ಲ.



ಬ್ಯಾನರ್ ಮೇಲೆ ಮೊಟ್ಟೆ ಎಸೆದ ಮಹಿಳೆ ಶಿಲ್ಪಾ ರಾಮರಾಜ್ ಗರುಡ್ ಅಲಿಯಾಸ್ ಶೈಲಜಾ ಮಾನಸಿಕವಾಗಿ ಅಸ್ವಸ್ಥಗೊಂಡಿದ್ದಾಳೆ ಎಂದು ಸಂಭಾಜಿ ನಗರ ಪೊಲೀಸ್ ಆಯುಕ್ತ ಮನೋಜ್ ಲೋಹಿಯಾ ಅವರು ಹೇಳಿದ್ದಾರೆ ಎಂದು 'ದಿ ಲಾಜಿಕಲ್ ಇಂಡಿಯನ್' ವೆಬ್‌ಸೈಟ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. ಮಹಿಳೆಯನ್ನು ಬಂಧಿಸಲಾಗಿದ್ದು, ಆಕೆ ಅಂಚೆಕಚೇರಿಯಲ್ಲಿ ಉದ್ಯೋಗದಲ್ಲಿದ್ದಾಳೆ. ಕೌಟುಂಬಿಕ ವ್ಯಾಜ್ಯದ ಕಾರಣಕ್ಕೆ ಮಾನಸಿಕವಾಗಿ ಅಸ್ವಸ್ಥಗೊಂಡಿದ್ದಾಳೆ ಎಂದು ಠಾಣೆಯ ಟ್ವಿಟರ್ ಖಾತೆಯಲ್ಲಿ ವಿವರಿಸಲಾಗಿದೆ. ಆದರೆ, ಮೊಟ್ಟೆ ಎಸೆದಿದ್ದು ಮುಸ್ಲಿಂ ಸಮುದಾಯದ ಮಹಿಳೆ ಎಂದು ತಪ್ಪಾಗಿ ಅರ್ಥೈಸಲಾಗಿದೆ ಎಂದು 'ದಿ ಲಾಜಿಕಲ್ ಇಂಡಿಯನ್' ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ



ಗುಣಸಾಗರ

ನಿನ್ನ ಸಿಹಿಕಹಿಯೆಲ್ಲ ಕಡಲೊಳುಪ್ಪಾಗುವುದು |
ನಿನ್ನೆಲ್ಲ ಗುಣಗಳುಂ ಬ್ರಹ್ಮದೊಳಗಂತು ||
ಪುಣ್ಯವೋ, ಪಾಪವೋ, ಅಹಿತವೋ, ಹಿತವೊ
ಅದು |ಚೆನ್ನಹುದು ಬೊಮ್ಮನಲಿ - ಮಂಕುತಿಮ್ಮ ||
891 ||

ಪದ-ಅರ್ಥ:ಕಡಲೊಳುಪ್ಪಾಗುವುದು = ಕಡಲೊಳು- + ಉಪ್ಪಾಗುವುದು, ಬ್ರಹ್ಮದೊಳಗಂತು = ಬ್ರಹ್ಮದೊಳಗೆ + ಅಂತು, ಚೆನ್ನಹುದು = ಚೆನ್ನಾಗಿರುವುದು.

ವಾಚ್ಯಾರ್ಥ: ಎಲ್ಲ ನೀರುಗಳು ಸಮುದ್ರವನ್ನು ಸೇರಿ ಉಪ್ಪಾಗುವಂತೆ, ನಿನ್ನ ಎಲ್ಲ ಗುಣಗಳು ಬ್ರಹ್ಮದೊಳಗೆ ಸೇರಿ ಒಂದಾಗುತ್ತವೆ. ಅದು ಪುಣ್ಯವೊ, ಪಾಪವೊ, ಅಹಿತವೊ, ಹಿತವೊ ಅದೆಲ್ಲವೂ ಬ್ರಹ್ಮನಲ್ಲಿ ಸರಿಯಾಗಿ ಹೊಂದಿಕೊಳ್ಳುತ್ತವೆ.

ವಿವರಣೆ: ಒಂದು ಪೂರ್ವಿಕರ ಮಾತು ಹೀಗಿದೆ:
"ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ | ಸರ್ವದೇವ ನಮಸ್ಕಾರ: ಕೇಶವಂ ಪ್ರತಿಗಚ್ಛತಿ ||
"ಬಾನಿನಿಂದ ಬೀಳುವ ಮಳೆಯ ನೀರು ಹರಿಯುವುದು ಕಡಲ ಕಡೆಗೆ, ಅಂತೆಯೇ ಯಾವ ದೇವರಿಗೆ ಮಣಿದರೂ ಅದು ಸೇರುವುದು ಕೇಶವನ ಕಡೆಗೇ". ಆಕಾಶದಿಂದ ಬಿದ್ದ ಪ್ರತಿಯೊಂದು ನೀರ ಹನಿಯ ಗುರಿ ಸಾಗರವೇ. ಅದು ಸಾಗರವನ್ನು ಸೇರಿದಾಗಲೇ ಅದರ ಸಾರ್ಥಕ್ಯ. ಆಕಾಶದಿಂದ ಮಳೆಯಾಗಿ ಸುರಿದ ನೀರು ಶುದ್ಧವಾಗಿಯೇ ಇರುತ್ತದೆ. ಅದಕ್ಕೆ ಯಾವ ರುಚಿ, ಬಣ್ಣ, ವಾಸನೆ ಇಲ್ಲ. ಆದರೆ ನೆಲಕ್ಕೆ ಬಿದ್ದ ಮೇಲೆ ಅದು ನೆಲದಲ್ಲಿ ಇಂಗಿ, ಹರಿದು, ರುಚಿ, ಬಣ್ಣ, ವಾಸನೆಗಳನ್ನು ಪಡೆಯುತ್ತದೆ. ಆ ಗುಣ ನೀರು ಹರಿದು ಬಂದ ಮಣ್ಣಿನ, ಪರಿಸರದ ಕೊಡುಗೆ. ಕೆಲವು ಕಡೆಯ ನೀರು ತುಂಬ ಸಿಹಿ, ಮತ್ತೆ ಕೆಲವೆಡೆ ಬಾಯಿಗಿಡದಷ್ಟು ಕಹಿ. ಪ್ರಯಾಗದಲ್ಲಿ ಗಂಗೆ-ಯಮುನೆಯರ ಸಂಗಮವಿದೆ. ಎತ್ತರದಲ್ಲಿ ನಿಂತು ನೋಡಿದರೆ ಗಂಗೆಯ ನೀರಿನ ಬಿಳೀ ಬಣ್ಣ, ಯಮುನೆಯ ಕಪ್ಪು ಬಣ್ಣ ಮಿಳಿತವಾಗುವುದು ಸ್ಪಷ್ಟವಾಗಿ ಕಾಣುತ್ತದೆ. ಆ ಬಣ್ಣ, ನದಿಗಳು ಹರಿದು ಬಂದ ಮಣ್ಣಿನ ಸಾರದ ಬಣ್ಣ. ಆದರೆ ಎಲ್ಲ ನದಿಗಳು ತಮ್ಮ ಗಮ್ಯಸ್ಥಾನವಾದ ಸಮುದ್ರವನ್ನು ಸೇರಿದ ಮೇಲೆ ಏನಾಗುತ್ತದೆ? ಅವುಗಳ ಬಣ್ಣ, ವಾಸನೆ, ರುಚಿಗಳೆಲ್ಲ ಮರೆಯಾಗಿ ಕೇವಲ ಸಾಗರದ ಉಪ್ಪಿನ ರುಚಿಯೊಂದೇ ಉಳಿಯುತ್ತದೆ. ಅದೇ ರೀತಿ ಪ್ರತಿಯೊಂದು ಜೀವಿಯೂ ಹುಟ್ಟಿದಾಗ ಪ್ರತಿಶತ ನೂರರಷ್ಟು ಶುದ್ಧವಾಗಿಯೇ ಇರುತ್ತದೆ. ಆದರೆ ಜೀವನ ಪ್ರವಾಹದಲ್ಲಿ ಸಾಗಿದಾಗ, ಅವರವರ ಕರ್ಮಕ್ಕೆ ಅನುಗುಣವಾಗಿ, ಆಸಕ್ತಿಗನುಗುಣವಾಗಿ, ಪರಿಸರಕ್ಕನುಗುಣವಾಗಿ, ಪಾಪವನ್ನೋ, ಪುಣ್ಯವನ್ನೋ ಗಳಿಸುತ್ತವೆ. ಅದಕ್ಕೆ ಪೂರಕವಾಗಿ ಹಿತವನ್ನೋ, ಅಹಿತವನ್ನೋ ಮಾಡುತ್ತವೆ. ಕೊನೆಗೆ ಜೀವಿಗಳು ಬ್ರಹ್ಮನೆಂಬ ಸಮುದ್ರದಲ್ಲಿ ಸೇರಿದಾಗ ತಮ್ಮೆಲ್ಲ ಅರ್ಜಿತ ಗುಣಗಳನ್ನು ಕಳೆದುಕೊಂಡು ಅಲ್ಲಿಯೇ ಮರೆಯಾಗುತ್ತವೆ. ಬ್ರಹ್ಮನು ಗುಣಾತೀತನೂ ಹೌದು, ಸರ್ವಗುಣಗಳ ಆಗರವೂ ಹೌದು. ನಮ್ಮೆಲ್ಲ ಗುಣಗಳು ಅವನನ್ನು ಸೇರುವುದು ಮಾತ್ರವಲ್ಲ, ಅವೆಲ್ಲ ಅಲ್ಲಿಯೇ ಇವೆ. ಅದನ್ನು ಕಗ್ಗ ಸುಂದರವಾಗಿ "ಚೆನ್ನಹುದು ಬೊಮ್ಮನಲಿ" ಎನ್ನುತ್ತದೆ. ಹಾಗೆಂದರೆ ಬ್ರಹ್ಮದಲ್ಲಿ ಪರಸ್ಪರ ವಿರೋಧವೆಂದು ತೋರುವ ಸರ್ವಗುಣಗಳು ಹೊಂದಾಣಿಕೆಯಿಂದ ಇವೆ.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮೇ 25, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಷಷ್ಠಿ ಅಹೋರಾತ್ರ ನಕ್ಷತ್ರ: ಪುಷ್ಯ ಗಂ. 17-54 ಯೋಗ: ವೃದ್ಧಿ ಗಂ. 18-07, ಕರಣ: ಕೌಲವ, ಗಂ. 16-09, ವೃಷಭ ಮಾಸದ 10 ನೇ ದಿನ, ಮಳೆನಕ್ಷತ್ರ: ಕೃತ್ತಿಕಾ 4, ರಾಹುಕಾಲ : ಮಧ್ಯಾಹ್ನ 01-30 – 03-00 ಸೂರ್ಯೋದಯ : 06-07 ಸೂರ್ಯಾಸ್ತ : 06-48 ಮುಸ್ಲಿಂ ದಿನಾಂಕ : 05 ಜುಲ್ಖಾಯದ್, ಅದೃಷ್ಟ ಸಂಖ್ಯೆ : 2, 12

ಮೇಷ: ಆರ್ಥಿಕ ವಂಚನೆಯಾಗುವ ಲಕ್ಷಣಗಳಿದೆ. ಅಕ್ಕ ತಂಗಿಯರ ಆಸೆ ಈಡೇರಿಸುವ ಪ್ರಯತ್ನ ನಿಮ್ಮದಾಗುವುದು. ಕ್ರೀಡಾಪಟುಗಳು ತಮ್ಮ ಕ್ರೀಡೆಯಲ್ಲಿ ಉತ್ತಮ ಸಾಧನೆಯಿಂದ ಬಹುಮಾನದ ಜೊತೆ ಗೌರವವನ್ನು ಗಳಿಸುವಿರಿ.

ವೃಷಭ: ಮಕ್ಕಳ ಹೆಸರಿನಲ್ಲಿ ನಿವೇಶನ ಖರೀದಿಸುವ ಯೋಚನೆಗಳು ಬರಲಿದೆ. ಸ್ನೇಹಿತರ ಸಲಹೆ ಸಹಕಾರದಿಂದ ಪ್ರಾರಂಭಿಸಿದ ವ್ಯವಹಾರದಲ್ಲಿ ಒಳ್ಳೆಯ ಫಲಿತಾಂಶವನ್ನು ಎದುರು ನೋಡಬಹುದು.

ಮಿಥುನ: ವಿದ್ಯಾರ್ಥಿಗಳಿಗೆ ತಮ್ಮ ಅಭ್ಯಾಸದಲ್ಲಿ ಉದಾಸೀನತೆ ತೋರಿಬಂದರೂ ಬುದ್ಧಿ ಬಲದಿಂದ ಮತ್ತು ಶ್ರದ್ಧೆಯಿಂದ ಆಲೈಸುವ ಗುಣದಿಂದಾಗಿ ಫಲಿತಾಂಶಕ್ಕೆ ಚ್ಯುತಿ ಬರುವುದಿಲ್ಲ. ಹೊಸ ಅಲಂಕಾರಿಕ ವಸ್ತುಗಳನ್ನು ಖರೀದಿಸುವಿರಿ.

ಕರ್ಕಾಟಕ: ಕುಟುಂಬದಲ್ಲಿ ನಡೆಯುತ್ತಿದ್ದ ದೇವತಾರಾಧನೆಯು ನಿಂತಿರುವ ಕಾರಣದಿಂದಾಗಿ ಹಲವು ತೊಂದರೆಗಳು ಉಂಟಾಗುತ್ತಿರಬಹುದಾದ ಕಾರಣ ಅದನ್ನು ಪರಿಹರಿಸುವ ಮಾರ್ಗ ಕಂಡುಕೊಳ್ಳಿ. ನಂಜುನಿವಾರಕ ಆಹಾರ ಸೇವಿಸಿ.

ಸಿಂಹ: ಓಡುತ್ತಿರುವಂಥ ಕಾಲದ ಜೊತೆಯಲ್ಲಿ ಚಲಿಸುವ ಗುಣವನ್ನು ಹೊಂದಿದರಷ್ಟೇ ನಿಮ್ಮ ಉದ್ಯೋಗದಲ್ಲಿ ಪ್ರಶಂಸೆಗೊಳಗಾಗುವಿರಿ. ಉತ್ತಮ ಪಠನ ಕ್ರಮದಿಂದ ವಿದ್ಯಾರ್ಥಿಗಳು ಶಿಕ್ಷಕರ ಹೆಸರನ್ನು ಉಳಿಸುವರು.

ಕನ್ಯಾ: ದೊಡ್ಡದಾದ ಧಾರ್ಮಿಕ ಕಾರ್ಯಕ್ರಮದಲ್ಲಿ ನಿಭಾಯಿಸಿದ ಪಾತ್ರ ನಿಮ್ಮನ್ನು ಸಂತೃಪ್ತರನ್ನಾಗಿ ಆಗಿಸುತ್ತದೆ. ಕಷ್ಟಗಳನ್ನು ಎದುರಿಸುವಂತಹ ಶಕ್ತಿ ಕಷ್ಟಪಡುತ್ತಿರುವಂತಹ ವ್ಯಕ್ತಿಗಳನ್ನು ನೋಡಿ ಪಡೆದುಕೊಳ್ಳುವಿರಿ.

ತುಲಾ: ಮುಜುಗರದ ತೆರೆಗಳನ್ನು ದಾಟಿ ನಿಮ್ಮ ಮನೋಭಿಲಾಷೆಯಂತೆ ತವರು ಮನೆಯಂತೆಯೇ ಪತಿಯ ಗೃಹದಲ್ಲಿಯು ಜೀವನ ಪ್ರಾರಂಭಿಸುವಿರಿ. ಆರಾಧ್ಯ ದೇವತೆಯು ಅಭೀಷ್ಟವನ್ನು ನೆರವೇರಿಸಿದರಿಂದ ಹರಕೆ ತೀರಿಸುವಿರಿ.

ವೃಶ್ಚಿಕ: ವಿದ್ವಜ್ಜನರ ಎದುರು ಮಾತನಾಡುವ ಬದಲು ಮೌನವೇ ಗೌರವ ಹೆಚ್ಚುಗೊಳಿಸುತ್ತದೆ. ವಿದೇಶೀಯ ಸ್ನೇಹಿತನನ್ನು ಮೊದಲ ಬಾರಿ ಮುಖತಃ ಭೇಟಿಯಾಗುವ ಅವಕಾಶ ದೊರಕಲಿದೆ. ಓದಿನ ಬಗ್ಗೆ ಯೋಚಿಸುವಿರಿ.

ಧನು: ಹಲವು ದಿನಗಳ ಬಿಗುವಾದ ದಿನಚರಿಯ ಹಳೆಯ ದಿನಚರಿಗೆ ಮರಳುವಿರಿ. ಇಷ್ಟವೆಂದು ಅಧಿಕವಾಗಿ ಸೇವಿಸಿದ ಆಹಾರ ಅನಾರೋಗ್ಯಕ್ಕೆ ಎಡೆಮಾಡಿಕೊಡುತ್ತದೆ. ಅಧಿಕ ಲಾಭದಲ್ಲಿ ಕಚ್ಚಾವಸ್ತು ಖರೀದಿಸುವಿರಿ.

ಮಕರ: ಮಾದಕ ವಸ್ತುಗಳ ವ್ಯಸನಕ್ಕೆ ಒಳಗಾದವರನ್ನು ಆ ಜಾಲದಿಂದ ಹೊರ ತರಲು ವಿಧ ವಿಧವಾದ ಪ್ರಯತ್ನ ನಡೆಸುವಿರಿ. ಚಿನ್ನಾಭರಣವನ್ನು ಅಥವ ಬೆಳ್ಳಿಯ ಸಾಮಗ್ರಿಗಳನ್ನು ಖರೀದಿಸುವ ಸಾಧ್ಯತೆ ಇದೆ.


ಕುಂಭ: ಸಮಾರಂಭ ಒಂದರಲ್ಲಿ ಬಂದಂಥ ಉಡುಗೊರೆ ನೋಡುವ ಸಾಧ್ಯತೆ ಇದೆ. ಆಕಾಶ ವೀಕ್ಷಣೆ ನಿಯಮಬದ್ಧ ಮಾಡುವವರಿಗೆ ಜತೆಗಾರ ಬರೊಬ್ಬರು ದೊರೆಯಲಿದ್ದಾರೆ. ಮಾತು ಕಡಿಮೆ ಆಡಿದಷ್ಟೂ ಒಳ್ಳೆಯದಾಗುತ್ತದೆ.

ಮೀನ: ಸಣ್ಣ ವಯಸ್ಸಿಗೆ ವಯಸ್ಸನ್ನು ಮೀರಿದ ಜವಾಬ್ದಾರಿ ಹೊರ ಬೇಕಾದಂತಹ ಸಂದರ್ಭ ಬರುತ್ತದೆ. ಯಾವುದೇ ಸವಾಲುಗಳು ಎದುರಾದದರು ಬುದ್ಧಿವಂತಿಕೆ ಹಾಗೂ ಧೈರ್ಯದಿಂದ ಅದನ್ನು ಎದುರಿಸುವಿರಿ.

ಪದಬಂಧ 5329
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ರಹಸ್ಯ ದಾರಿಯಿದು (4)
3.ಲುಂಗಿಯನ್ನು ಹೀಗೂ ಹೇಳುವರು (3)
5.ಮನದೊಳಗೇ ಸ್ನಾನ! (3)
7.ಒಮ್ಮಿಂದೊಮ್ಮೆ ನರ ಮಿಡಿದು ಉಂಟಾಗುವ ನೋವು (3)
8.ನಂಬಿಕೆ ದ್ರೋಹವಿದು (5)
11.ಹೀಗೆ ಕೋಪಗೊಳ್ಳು (3)
12.ಈತ ನೃತ್ಯ ಮಾಡುವವನು (3)
15.ವಸ್ತುಗಳನ್ನು ಸಂಗ್ರಹಿಸುವ ಸ್ಥಳ (3)
16.ಯಜ್ಞೋಪವೀತ ಇಲ್ಲಿದೆ (4)

ಮೇಲಿಂದ ಕೆಳಕ್ಕೆ
1.ಗುಲಾಬಿ ಹಿಡಿದಿರುವ ದಾಸ (3)
2.ಬೆಲೆಬಾಳುವ ಮಣಿ (2)
3.ಅಡಚಣೆಯು ಹೀಗೆ ಬಂದಿದೆ (3)
4.ಚಿಲ್ಲರೆ ಹಣವಿದು (4)
6. ರೀತಿಯು ಇಲ್ಲಿ ಉಲ್ಟಾಪಲ್ಟಾ ಆಗಿದೆ (3)
7.ಹರಾಜಿನಲ್ಲಿ ಹೆಚ್ಚಿನ ಬೆಲೆಗೆ ಸವಾಲು ಹಾಕುವುದು (5)
9.ಮಗ್ನ ಎಂದು ಹೀಗೆನ್ನಿ (3)
10.ಇದು ಕೃತಿಮ ಮಂದಹಾಸ (4)
11.ತಿರುಗಿ ನಿಂತಿರುವ ಅಜ್ಜ (3)
13.ಆರತಿಗಾಗಿ ಹೊತ್ತಿಸುವ ಸುಗಂಧದ್ರವ್ಯ (3)
14.ಗಂಡು ಕೋಳಿ ಇಲ್ಲಿದೆ (2)



5328ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಭಾವ 3.ನೆರೆಮನೆ
5.ರಶೀದಿ 6.ನಡುಕ
8.ವಿಷಮ 9.ವಿಯೋಗ
10.ಯವನ 12.ಕರಗ
14.ಯಮಭಾರ
15.ಕನ್ನಡಕ

ಮೇಲಿಂದ ಕೆಳಕ್ಕೆ:
1.ಅನುಮಾನ 2.ವಕ್ತಾರ
3.ನೆಮ್ಮದಿ 4.ನೆಲಸಮ
7.ಕಡಗ 8.ವಿಷಯ
9.ವಿನಿಮಯ 11.ನಳಪಾಕ
12.ಕಮ್ಮಾರ 13.ಗಣಕ

ಸುಡೊಕು 5715

9		1			7		3	
			2	3		1		5
5		2		1				7
2		5					7	
				5	3	8		9
	9		8				5	
4		3			2			
	5			4		7		2
7		9	6		5		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5714 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

ಜೂನ್‌ನಿಂದ ಬೆಂಗಳೂರಿನಲ್ಲಿ ಉಬರ್ ಇ.ವಿ. ಸೇವೆ


ಪ್ರಜಾವಾಣಿ ವಾರ್ತೆ

ನವದೆಹಲಿ: ಉಬರ್ ಕಂಪನಿಯು ಜೂನ್‌ನಿಂದ ಬೆಂಗಳೂರಿನಲ್ಲಿ ಇ.ವಿ. ಕ್ಯಾಬ್ ಸೇವೆಗಳನ್ನು ಆರಂಭಿಸಲಿದೆ. ಇದು ಆರಂಭವಾದ ನಂತರದಲ್ಲಿ ಉಬರ್ ಗ್ರಾಹಕರು, ಕ್ಯಾಬ್ ಸೇವೆ ಪಡೆಯುವ ಸಂದರ್ಭದಲ್ಲಿ ಇ.ವಿ. ಕ್ಯಾಬ್ ಬೇಕು ಎಂಬ ಬೇಡಿಕೆ ಸಲ್ಲಿಸಲು ಅವಕಾಶ ಲಭ್ಯವಾಗಲಿದೆ.

ಈ ಸೇವೆಯು ಬೆಂಗಳೂರು ಮಾತ್ರವಲ್ಲದೆ ಮುಂಬೈ ಹಾಗೂ ದೆಹಲಿಯಲ್ಲಿಯೂ ಆರಂಭವಾಗಲಿದೆ. ಮುಂದಿನ ದಿನಗಳಲ್ಲಿ ಇದನ್ನು ಹಂತ ಹಂತವಾಗಿ ಇತರ ನಗರಗಳಿಗೂ ವಿಸ್ತರಿಸಲಾಗುತ್ತದೆ ಎಂದು ಉಬರ್ ಇಂಡಿಯಾ ಮತ್ತು ದಕ್ಷಿಣ ಏಷ್ಯಾ ಅಧ್ಯಕ್ಷ ಪ್ರಭಜೀತ್ ಸಿಂಗ್ ಹೇಳಿದ್ದಾರೆ.

ಇ.ವಿ.ಗಳಿಗೆ ಚಾರ್ಜಿಂಗ್ ಸೌಲಭ್ಯ ಕಲ್ಪಿಸಲು ಜಿಯೊ–ಬಿಪಿ ಹಾಗೂ ಜಿಎಂಆರ್ ಗ್ರೀನ್ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಉಬರ್ ಪಾಲಿಗೆ ಪ್ರಮುಖವಾಗಿರುವ ಏಳು ನಗರಗಳಲ್ಲಿ ಒಟ್ಟು 25 ಸಾವಿರ ಇ.ವಿ.ಗಳನ್ನು ಸೇವೆಗೆ ಮುಕ್ತವಾಗಿಸಲಾಗುತ್ತದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,348
ಇಂದಿನ ಅಂತ್ಯ	18,285
▼	63
ದಿನದ ಕನಿಷ್ಠ	18,262

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹530

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615(1615)
ಸೋಯಾ (ರಿಫೈನ್ಡ್)	₹900(915)
ಸೂರ್ಯಕಾಂತಿ (ರಿಫೈನ್ಡ್)	₹950(940)
ಪಾಮೋಲಿನ್	₹870(882)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹900-1100
ಮಧ್ಯಮ	₹400-700
ಸಣ್ಣ	₹200-400

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ತಿಪಟೂರು	₹8000-9500
ಅರಸೀಕೆರೆ	---
ತುಮಕೂರು	₹8200-9100

2022–23ರಲ್ಲಿ ಒಳಹರಿವು ಶೇ 66ರಷ್ಟು ಏರಿಕೆ: ಮೋತಿಲಾಲ್ ಓಸ್ವಾಲ್

ಇಟಿಎಫ್: ಸಿರಿವಂತರ ಹೂಡಿಕೆ ಹೆಚ್ಚು

ನವದೆಹಲಿ (ಪಿಟಿಐ): ಸಿರಿವಂತರು (ಎಚ್‌ಎನ್‌ಐ) ಪ್ಯಾಸಿವ್ ಫಂಡ್‌ಗಳತ್ತ ಹೆಚ್ಚು ಆಕರ್ಷಿತರಾಗಿದ್ದು, 2022–23ರಲ್ಲಿ ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) ಮಾಡಿರುವ ಹೂಡಿಕೆಯು ಶೇಕಡ 66ರಷ್ಟು ಹೆಚ್ಚಾಗಿದೆ. ಅವರು ಇಟಿಎಫ್‌ಗಳಲ್ಲಿ ಮಾಡಿರುವ ಹೂಡಿಕೆಯು ₹ 34 ಸಾವಿರ ಕೋಟಿಗೆ ತಲುಪಿದೆ.

ಹೂಡಿಕೆ ಮಾಡುವುದು ಸುಲಭ ಆಗಿರುವುದು ಹಾಗೂ ವೆಚ್ಚ ಕಡಿಮೆ ಇರುವ ಕಾರಣಕ್ಕೆ ಆ್ಯಕ್ಟಿವ್ ಫಂಡ್‌ಗಳಿಗಿಂತಲೂ (ಉದಾಹರಣೆಗೆ, ಮ್ಯೂಚುವಲ್ ಫಂಡ್) ಪ್ಯಾಸಿವ್ ಫಂಡ್‌ಗಳು (ಉದಾಹರಣೆಗೆ ಇಟಿಎಫ್) ಹೆಚ್ಚು ಆಕರ್ಷಣೆ ಗಳಿಸಿವೆ.

ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ವರದಿಯಲ್ಲಿ ಈ ಅಂಶ ಇದೆ. ಸಿರಿವಂತರು ಇಟಿಎಫ್‌ಗಳಲ್ಲಿ ಮಾಡಿರುವ ಹೂಡಿಕೆಯು 2021–22ರಲ್ಲಿ ₹20,400 ಕೋಟಿ ಆಗಿತ್ತು.

ಮ್ಯೂಚುವಲ್ ಫಂಡ್ ಉದ್ಯಮದ ಒಟ್ಟು ನಿರ್ವಹಣಾ ಸಂಪತ್ತು ಮೌಲ್ಯವು 2023ರ ಮಾರ್ಚ್ ಅಂತ್ಯಕ್ಕೆ ₹40 ಲಕ್ಷ ಕೋಟಿಗೆ ತಲುಪಿದೆ. ಇದರಲ್ಲಿ ಇಟಿಎಫ್‌ನ (ಚಿನ್ನದ ಇಟಿಎಫ್ ಸೇರಿ) ನಿರ್ವಹಣಾ ಸಂಪತ್ತು ಮೌಲ್ಯ ₹5 ಲಕ್ಷ ಕೋಟಿಗೂ ಹೆಚ್ಚಿದೆ.

ಇಟಿಎಫ್‌ನಂತಹ ಪ್ಯಾಸಿವ್ ಫಂಡ್‌ಗಳಿಗೆ ಹೋಲಿಸಿದರೆ ಮ್ಯೂಚುವಲ್ ಫಂಡ್‌ಗಳಂತಹ ಆ್ಯಕ್ಟಿವ್ ಫಂಡ್‌ಗಳಿಂದ ಬಂದಿರುವ ಲಾಭವು ಬಹಳ ಕಡಿಮೆ ಇದೆ ಎಂಬ ನಂಬಿಕೆಯೊಂದು ವ್ಯಾಪಕವಾಗಿದೆ. ಇದು ಕೂಡ ಪ್ಯಾಸಿವ್ ಫಂಡ್‌ಗಳತ್ತ ಹೆಚ್ಚು ಹಣ ಹರಿದುಬರಲು ಕಾರಣವಾಗಿದೆ.

ಆದರೆ, 1 ವರ್ಷ, 3 ವರ್ಷ ಹಾಗೂ 5 ವರ್ಷಗಳ ಅವಧಿಯಲ್ಲಿ ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್ ಮತ್ತು ಇಟಿಎಫ್‌ಗಳಿಂದ ಬಂದಿರುವ ಲಾಭದಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲ ಎಂದು ವರದಿ ಹೇಳಿದೆ.

ಸಿರಿವಂತರು ಇಟಿಎಫ್‌ಗಳಲ್ಲಿ ಮಾಡಿರುವ ಒಟ್ಟು ಹೂಡಿಕೆ (ಕೋಟಿಗಳಲ್ಲಿ)

2019-20	₹7,500
2020-21	₹13,700
2021-22	₹20,400
2022-23	₹34,000

ಎಲ್‌ಐಸಿ ಲಾಭ 5 ಪಟ್ಟು ಹೆಚ್ಚಳ

ನವದೆಹಲಿ (ಪಿಟಿಐ): ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಎಲ್‌ಐಸಿ ನಿವ್ವಳ ಲಾಭ 5 ಪಟ್ಟು ಹೆಚ್ಚಾಗಿದ್ದು, ₹13,191 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಲಾಭ ₹2,409 ಕೋಟಿ ಆಗಿತ್ತು.

ಆದರೆ ಎಲ್‌ಐಸಿಯ ವರಮಾನವು ಕಡಿಮೆ ಆಗಿದೆ. ಹಿಂದಿನ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹2.15 ಲಕ್ಷ ಕೋಟಿ ಇದ್ದ ವರಮಾನವು ಈ ಬಾರಿ ₹2.01 ಲಕ್ಷ ಕೋಟಿಗೆ ತಗ್ಗಿದೆ.

ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಎಲ್‌ಐಸಿ ಲಾಭವು ಹಲವು ಪಟ್ಟು ಹೆಚ್ಚಾಗಿದ್ದು, ₹35,997 ಕೋಟಿಗೆ ತಲುಪಿದೆ. ಹಿಂದಿನ ವರ್ಷದಲ್ಲಿ ಎಲ್‌ಐಸಿ ₹4,125 ಕೋಟಿ ಲಾಭ ದಾಖಲಿಸಿತ್ತು.

ಎಲ್‌ಐಸಿ ಆಡಳಿತ ಮಂಡಳಿಯು ಪ್ರತಿ ಷೇರಿಗೆ ₹3ರ ಅಂತಿಮ ಲಾಭಾಂಶವನ್ನು ಘೋಷಿಸಿದೆ.

ಜೂನ್‌ನಿಂದ ಅಮೇಜ್, ಸಿಟಿ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಹೋಂಡಾ ಕಾರ್ಸ್ ಇಂಡಿಯಾ ಕಂಪನಿಯು ಜೂನ್ 1ರಿಂದ ಜಾರಿಗೆ ಬರುವಂತೆ ಹೋಂಡಾ ಸಿಟಿ ಮತ್ತು ಅಮೇಜ್ ಕಾರುಗಳ ಬೆಲೆಯನ್ನು ಶೇ 1ರವರೆಗೆ ಹೆಚ್ಚಳ ಮಾಡುವುದಾಗಿ ಬುಧವಾರ ಹೇಳಿದೆ.

ತಯಾರಿಕಾ ವೆಚ್ಚದಲ್ಲಿನ ಹೆಚ್ಚಳ ಸರಿದೂಗಿಸಲು ಬೆಲೆ ಏರಿಕೆ ಮಾಡುವುದು ಅನಿವಾರ್ಯವಾಗಿದೆ ಎಂದು ಕಂಪನಿಯ ಉಪಾಧ್ಯಕ್ಷ ಕುನಾಲ್ ಬೆಲ್ವಾ ಅವರು ಹೇಳಿದ್ದಾರೆ.

ಎಫ್‌ಡಿಐ ಒಳಹರಿವು ಶೇ 16 ಇಳಿಕೆ

ನವದೆಹಲಿ (ಪಿಟಿಐ): 2022–23ರಲ್ಲಿ ದೇಶಕ್ಕೆ ಬಂದ ಒಟ್ಟು ವಿದೇಶಿ ನೇರ ಬಂಡವಾಳದ (ಎಫ್‌ಡಿಐ) ಮೊತ್ತವು 2021–22ರಲ್ಲಿ ಬಂದ ಮೊತ್ತಕ್ಕೆ ಹೋಲಿಸಿದರೆ ಶೇಕಡ 16.3ರಷ್ಟು ಕಡಿಮೆ ಆಗಿದೆ. ಎಫ್‌ಡಿಐ ವಾರ್ಷಿಕ ಒಳಹರಿವು ದಶಕದ ಅವಧಿಯಲ್ಲಿ ಇದೇ ಮೊದಲ ಬಾರಿಗೆ ಕಡಿಮೆ ಆಗಿದೆ.

ಜಾಗತಿಕವಾಗಿ ಅರ್ಥ ವ್ಯವಸ್ಥೆಯು ಮಂದಗತಿಯಲ್ಲಿ ಇದ್ದುದರ ಕಾರಣದಿಂದ ಈ ರೀತಿ ಆಗಿದೆ ಎಂದು ಆರ್‌ಬಿಐ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳಿವೆ. 2012–13ರಲ್ಲಿ ಎಫ್‌ಡಿಐ ಒಳಹರಿವು ಶೇ 26ರಷ್ಟು ಕಡಿಮೆ ಆಗಿತ್ತು.

‘ಹಣದುಬ್ಬರ ಶೇ 4.7ಕ್ಕಿಂತಲೂ ಕಡಿಮೆ ಇರಲಿದೆ’

ನವದೆಹಲಿ (ಪಿಟಿಐ): ಹಣದುಬ್ಬರ ಇಳಿಮುಖವಾಗಿದ್ದು ಮುಂದಿನ ತಿಂಗಳು ಹಣದುಬ್ಬರದ ಪ್ರಮಾಣವು ಶೇಕಡ 4.7ಕ್ಕಿಂತಲೂ ಕಡಿಮೆಯಾಗುವ ನಿರೀಕ್ಷೆ ಇದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಬುಧವಾರ ಹೇಳಿದ್ದಾರೆ.

‘ಹೀಗಿದ್ದರೂ ಸಮಾಧಾನ ಪಟ್ಟುಕೊಳ್ಳುವಂತಿಲ್ಲ. ಹಣದುಬ್ಬರ ನಿಯಂತ್ರಣದ ಕ್ರಮಗಳು ಮುಂದುವರಿಯಲಿವೆ’ ಎಂದು ತಿಳಿಸಿದ್ದಾರೆ.

ಆಹಾರ ವಸ್ತುಗಳ ಬೆಲೆ ಇಳಿಕೆ ಆಗಿರುವುದರಿಂದ ಚಿಲ್ಲರೆ ಹಣದುಬ್ಬರ ಪ್ರಮಾಣವು ಏಪ್ರಿಲ್‌ನಲ್ಲಿ 18 ತಿಂಗಳ ಕನಿಷ್ಠ ಮಟ್ಟವಾದ ಶೇ 4.7ಕ್ಕೆ ಇಳಿಕೆ ಕಂಡಿದೆ.

ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ಸದಸ್ಯರನ್ನು ಉದ್ದೇಶಿಸಿ ದಾಸ್ ಮಾತನಾಡಿದ್ದಾರೆ. ‘ಹಣದುಬ್ಬರ ಇಳಿಮುಖವಾಗಿದೆ. ಜಿಡಿಪಿ ಬೆಳವಣಿಗೆಯು ನಿರಂತರವಾಗಿದೆ. ಚಾಲ್ತಿ ಖಾತೆ ಕೊರತೆಯು ನಿಯಂತ್ರಿಸಬಹುದಾದ ಮಟ್ಟದಲ್ಲಿದೆ’ ಎಂದು ದಾಸ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	490

ಅಡಿಕೆ

ಕುಮಟಾ

ಚಿಪ್ಪು	29999-32999
ಕೋಕ	14589-31989
ಫ್ಯಾಕ್ಟರಿ	14589-23599
ಹಳೆಚಾಲಿ	36509-39819
ಹೊಸಚಾಲಿ	35209-37639

ಶಿವಮೊಗ್ಗ

ಬೆಟ್ಟೆ	43099-54509
ಗೊರಬಲು	17009-35299
ರಾಶಿ	35600-48899
ಸರಕು	56109-82399

ಸಿದ್ದಾಪುರ

ಬಿಳಿಗೋಟು	28099-32799
ಚಾಲಿ	35699-37700
ಕೋಕ	28899-32099
ಹಳೇಚಾಲಿ	37199-37199
ಕೆಂಪುಗೋಟು	28019-32199
ರಾಶಿ	43699-46899
ತಟ್ಟಿಬೆಟ್ಟೆ	38069-41099

ಶಿರಸಿ

ಬೆಟ್ಟೆ	38209-43799
ಬಿಳಿಗೋಟು	24099-33299
ಚಾಲಿ	35008-37939
ಕೆಂಪುಗೋಟು	28499-34699
ರಾಶಿ	42199-46699

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15350	15300	189.20 ಸೆಂಟ್ಸ್
ಎಸಿ	---	8000	7700	
ಆರ್‌ಪಿ	---	10750	10550	ಲಂಡನ್
ಆರ್‌ಸಿ	---	236on OT	5750	2629 ಡಾಲರ್ಸ್

ಬೈಡನ್ ಹತ್ಯೆ ಯತ್ನ: ಭಾರತೀಯ ಮೂಲದ ಯುವಕನ ಬಂಧನ

ವಾಷಿಂಗ್ಟನ್ (ಪಿಟಿಐ): ‘ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರನ್ನು ಹತ್ಯೆ ಮಾಡಿ, ಅಧಿಕಾರ ವಶಪಡಿಸಿಕೊಳ್ಳುವ ಉದ್ದೇಶದಿಂದಲೇ ಭಾರತೀಯ ಮೂಲದ 19 ವರ್ಷದ ಯುವಕ ಶ್ವೇತಭವನದ ಭದ್ರತಾ ತಡೆಗೋಡೆಗೆ ಟ್ರಕ್ ಡಿಕ್ಕಿ ಹೊಡೆಸಲು ಯತ್ನಿಸಿದ್ದಾನೆ’ ಎಂದು ಮಾಧ್ಯಮ ವರದಿಗಳು ಹೇಳಿವೆ.

ಆರೋಪಿ ಸಾಯಿ ವರ್ಷಿತ್ ಕಂಡುಲಾ ಎಂಬಾತನನ್ನು ಅಮೆರಿಕದ ಪೊಲೀಸರು ಬಂಧಿಸಿದ್ದಾರೆ. ಆತ ಬಾಡಿಗೆ ಟ್ರಕ್ ಅನ್ನು ಸೋಮವಾರ ರಾತ್ರಿ 10ರ ಸುಮಾರಿಗೆ ಲಾಫಿಯೆಟ್ ಪಾರ್ಕ್ ಕಡೆಯಿಂದ ಶ್ವೇತಭವನದ ಉತ್ತರ ದಿಕ್ಕಿನಲ್ಲಿರುವ ಲೋಹದ ಭದ್ರತಾ ತಡೆಗೋಡೆಗೆ ಹಿಮ್ಮುಖವಾಗಿ ನುಗ್ಗಿಸಲು ಯತ್ನಿಸಿದ್ದಾನೆ ಎಂದು ‘ದಿ ವಾಷಿಂಗ್ಟನ್ ಟೈಮ್ಸ್’ ವರದಿ ಮಾಡಿದೆ.

ಆರು ತಿಂಗಳ ಹಿಂದೆಯೇ ಈ ಸಂಚು ರೂಪಿಸಿರುವುದು ತನಿಖೆಯಲ್ಲಿ ಗೊತ್ತಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸೇಂಟ್ ಲೂಯಿಸ್ ಉಪನಗರ ಮಿಸ್ಸೌರಿಯ ಚೆಸ್ಟರ್‌ಫೀಲ್ಡ್‌ನಲ್ಲಿ ನೆಲೆಸಿರುವ ವರ್ಷಿತ್ ಕಂಡೂಲಾ, ಸೋಮವಾರ ರಾತ್ರಿ ದಿಢೀರನೆ ಸೇಂಟ್ ಲೂಯಿಸ್‌ನಿಂದ ಡಲ್ಲಾಸ್ ಇಂಟರ್ ನ್ಯಾಷನಲ್ ವಿಮಾನ ನಿಲ್ದಾಣಕ್ಕೆ ಏಕಮುಖ ಟಿಕೆಟ್‌ನಲ್ಲಿ ಪ್ರಯಾಣಿಸಿದ್ದ. ಟ್ರಕ್ ಬಾಡಿಗೆಗೆ ಪಡೆದಿದ್ದ ಎಂದು ವಾಷಿಂಗ್ಟನ್ ಡಿಸಿಯ ಫೆಡರಲ್ ಜಿಲ್ಲಾ ನ್ಯಾಯಾಲಯಕ್ಕೆ ಎಫ್‌ಬಿಐ ಪ್ರತಿನಿಧಿ ಸಲ್ಲಿಸಿರುವ ಸತ್ಯಶೋಧನಾ ಹೇಳಿಕೆಯಲ್ಲಿ ತಿಳಿಸಿರುವುದಾಗಿ ‘ಎನ್‌ಬಿಸಿನ್ಯೂಸ್’ ವರದಿ ಮಾಡಿದೆ.

‘ಶ್ವೇತಭವನಕ್ಕೆ ನುಗ್ಗಿ, ಅಧಿಕಾರ ವಶಪಡಿಸಿಕೊಂಡು ರಾಷ್ಟ್ರದ ನಾಯಕತ್ವ ಹಿಡಿಯುವುದು ಆರೋಪಿಯ ಗುರಿಯಾಗಿತ್ತು’ ಎಂದು ತನಿಖಾ ವರದಿಗಳು ಹೇಳಿವೆ.

ಆರೋಪಿಯನ್ನು ಮಂಗಳವಾರ ವಾಷಿಂಗ್ಟನ್ ಡಿಸಿಯ ಉನ್ನತ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಆತನ ಮಾನಸಿಕ ಆರೋಗ್ಯ ಸ್ಥಿತಿಯ ಬಗ್ಗೆಯೂ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

ನಟ ನಿತೇಶ್ ಪಾಂಡೆ ನಿಧನ

ಪ್ರಜಾವಾಣಿ ವಾರ್ತೆ



ನಿತೇಶ್ ಪಾಂಡೆ

ಮುಂಬೈ: ‘ಬದಾಯಿ ದೊ’, ‘ಓಂ ಶಾಂತಿ ಓಂ’, ‘ಖೋಸ್ಲಾ ಕ ಗೋಸ್ಲಾ’ ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿದ್ದ ಬಾಲಿವುಡ್ ನಟ ನಿತೇಶ್ ಪಾಂಡೆ (51) ಹೃದಯಾಘಾತದಿಂದ ಬುಧವಾರ ನಿಧನರಾದರು.

‘ಅನುಪಮಾ’ ಧಾರಾವಾಹಿ ಮೂಲಕ ಪ್ರಸಿದ್ಧರಾದ ನಿತೇಶ್, 1995ರಲ್ಲಿ ‘ತೇಜಸ್ ಬ್ಯಾಕ್’ ಎನ್ನುವ ಟಿವಿ ಶೋ ಮೂಲಕ ಬಣ್ಣದ ಲೋಕಕ್ಕೆ ಕಾಲಿಟ್ಟಿದ್ದರು. ಅವರು ನಾಸಿಕ್ ಜಿಲ್ಲೆಯ ಇಗತ್‌ಪುರಿಯಲ್ಲಿ ಮೃತಪಟ್ಟರು. ಅವರಿಗೆ ಪತ್ನಿ, ಪುತ್ರ ಇದ್ದಾರೆ.

‘ಇದನ್ನು ನಂಬಲು ಸಾಧ್ಯವಿಲ್ಲ. ಆದರೆ ನಂಬಲೇ ಬೇಕಾಗಿದೆ. ಸ್ನೇಹಿತ ಮತ್ತು ಪ್ರತಿಭಾವಂತ ನಟ ನಿತೇಶ್ ಇಂದು ಮಧ್ಯಾಹ್ನ ಹೃದಯಾಘಾತದಿಂದ ನಿಧನರಾಗಿದ್ದಾರೆ’ ಎಂದು ನಟ–ನಿರ್ಮಾಪಕ ದೇವನ್ ಭೋಜನಿ ಹೇಳಿದ್ದಾರೆ.

‘ಪಿಟಿಐ ಪಕ್ಷ ನಿಷೇಧಕ್ಕೆ ಚಿಂತನೆ’

ಇಸ್ಲಾಮಾಬಾದ್ (ಪಿಟಿಐ): ಸೇನಾ ನೆಲೆಗಳ ಮೇಲೆ ದಾಳಿ ನಡೆಸಿದ ಹಿನ್ನೆಲೆಯಲ್ಲಿ ಪಾಕಿಸ್ತಾನ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಪಾಕಿಸ್ತಾನ್ ತೆಹ್ರೀಕ್-ಇ-ಇನ್ಸಾಫ್ (ಪಿಟಿಐ) ಪಕ್ಷದ ಮೇಲೆ ನಿಷೇಧ ಹೇರುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ರಕ್ಷಣಾ ಸಚಿವ ಖ್ವಾಜಾ ಆಸಿಫ್ ಬುಧವಾರ ಹೇಳಿದ್ದಾರೆ.

ಈ ಬಗ್ಗೆ ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ. ಆದರೆ, ಪರಿಶೀಲನೆ ಖಂಡಿತವಾಗಿಯೂ ನಡೆಯುತ್ತಿದೆ. ಪಿಟಿಐ ಪಕ್ಷ ನಿಷೇಧಿಸಲು ಸರ್ಕಾರ ಅಂತಿಮವಾಗಿ ನಿರ್ಧರಿಸಿದರೆ, ಈ ವಿಷಯವನ್ನು ಅನುಮೋದನೆಗಾಗಿ ಸಂಸತ್ತಿಗೆ ಕಳುಹಿಸಲಾಗುವುದು ಎಂದು ಆಸಿಫ್ ಹೇಳಿದ್ದಾರೆ ಎಂದು ಜಿಯೋ ನ್ಯೂಸ್ ವರದಿ ಮಾಡಿದೆ.

ಮುಂಬೈ ಧಾರಣೆ

ಶೇಂಗಾ

24-5-2023

ಜಾವಾ 70/80(ಹೊಸ)	11950-12000
ಜಾವಾ 80/90(ಹೊಸ)	11450-11500
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625(1625)
ಒಂದು ವಾರದ ಡೆಲಿವರಿ	1620(1620)
ಸೋಯಾ ಕಚ್ಚಾ	850(852)
ಪಾಮ್ ವಾರದ ಡೆಲಿವರಿ	868(880)
ಸೂರ್ಯಕಾಂತಿ ಎಣ್ಣೆ ಕಚ್ಚಾ	850(855)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60350(60250)
ಬೆಳ್ಳಿ ಕೆ.ಜಿ 71050(70850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹಿಂದೂ ದೇವಾಲಯಗಳ ಮೇಲಿನ ದಾಳಿ ಕುರಿತು ನರೇಂದ್ರ ಮೋದಿ– ಅಲ್ಬನೀಸ್ ಚರ್ಚೆ

ಬೆಂಗಳೂರಿನಲ್ಲಿ ಆಸ್ಟ್ರೇಲಿಯಾ ಕಾನ್ಸುಲೇಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ ಈ ತಿಂಗಳು ಆಸ್ಟ್ರೇಲಿಯಾ ನೂತನ ಕಾನ್ಸುಲೇಟ್ ಕಚೇರಿ ತೆರೆಯಲಿದ್ದು, ಇದಕ್ಕೆ ಪ್ರತಿಯಾಗಿ ಭಾರತವೂ ಶೀಘ್ರವೇ ಬ್ರಿಸ್ಬೇನ್‌ನಲ್ಲಿ ಕಾನ್ಸುಲೇಟ್ ಕಚೇರಿ ಆರಂಭಿಸಲಿದೆ.

ಭಾರತ ಪ್ರಧಾನಿ ನರೇಂದ್ರ ಮೋದಿ ಮತ್ತು ಆಸ್ಟ್ರೇಲಿಯಾ ಪ್ರಧಾನಿ ಆ್ಯಂಟನಿ ಅಲ್ಬನೀಸ್ ಅವರು ಸಿಡ್ನಿಯಲ್ಲಿ ಪತ್ರಕರ್ತರಿಗೆ ಈ ವಿಷಯ ತಿಳಿಸಿದರು.

‘ನಿರಂತರ ವೃದ್ಧಿಸುತ್ತಿರುವ ನಮ್ಮ ಬಾಂಧವ್ಯ ಗಾಢವಾಗಿಸಲು ಆಸ್ಟ್ರೇಲಿಯಾವು ಬೆಂಗಳೂರಿನಲ್ಲಿ ಹೊಸ ಕಾನ್ಸುಲೇಟ್ ಕಚೇರಿ ತೆರೆಯುತ್ತಿರುವ ಬೆನ್ನಲ್ಲೇ ಬ್ರಿಸ್ಬೇನ್‌ನಲ್ಲಿ ಭಾರತವೂ ಹೊಸ ಕಾನ್ಸುಲೇಟ್ ಕಚೇರಿಯನ್ನು ಶೀಘ್ರದಲ್ಲೇ ತೆರೆಯಲಿದೆ’ ಎಂದೂ ಮೋದಿ ಹೇಳಿದರು.

ದೆಹಲಿ, ಮುಂಬೈ, ಚೆನ್ನೈ ಮತ್ತು ಕೋಲ್ಕತ್ತದಲ್ಲಿ ಈಗಾಗಲೇ ಆಸ್ಟ್ರೇಲಿಯಾದ ಕಾನ್ಸುಲೇಟ್ ಕಚೇರಿಗಳಿವೆ. ಇದು 5ನೇ ಕಚೇರಿ ಎನಿಸಲಿದೆ. ಕ್ಯಾನ್‌ಬೆರಾದಲ್ಲಿ ಭಾರತದ ಹೈಕಮಿಷನ್ ಕಚೇರಿ ಜತೆಗೆ ಪರ್ತ್, ಮೆಲ್ಬರ್ನ್ ಮತ್ತು ಸಿಡ್ನಿಯಲ್ಲಿ ರಾಯಭಾರ ಕಚೇರಿಗಳಿವೆ. ಬ್ರಿಸ್ಬೇನ್‌ನಲ್ಲಿ ಭಾರತೀಯ ಕಾನ್ಸುಲೇಟ್ ಕಚೇರಿ ತೆರೆಯುವುದನ್ನು ಸ್ವಾಗತಿಸಿರುವ ಅಲ್ಬನೀಸ್, ‘ಹೊಸ ಕಾನ್ಸುಲೇಟ್ ಕಚೇರಿಯು, ಭಾರತದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಡಿಜಿಟಲ್ ಆರ್ಥಿಕತೆ ಮತ್ತು ಪರಿಸರ ವ್ಯವಸ್ಥೆಗೆ ಪೂರಕವಾದ ಆವಿಷ್ಕಾರದ ಜೊತೆ ಆಸ್ಟ್ರೇಲಿಯಾದ ವಾಣಿಜ್ಯ ವ್ಯವಹಾರಗಳನ್ನು ಬೆಸೆಯಲು ಅನುಕೂಲವಾಗಲಿದೆ’ ಎಂದರು.



ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಸಿಡ್ನಿಯ ಒಪೆರಾ ಹೌಸ್‌ಗೆ ಭೇಟಿ ನೀಡಿದ್ದ ವೇಳೆ ಆಸ್ಟ್ರೇಲಿಯಾ ಪ್ರಧಾನಿ ಆ್ಯಂಟನಿ ಅಲ್ಬನೀಸ್ ಜೊತೆಗಿದ್ದರು —ಪಿಟಿಐ ಚಿತ್ರ

‘ದೇಗುಲಗಳ ಮೇಲಿನ ದಾಳಿಗೆ ಕಳವಳ’

ಸಿಡ್ನಿ (ಪಿಟಿಐ): ಆಸ್ಟ್ರೇಲಿಯಾದಲ್ಲಿ ಇತ್ತೀಚೆಗೆ ಹಿಂದೂ ದೇವಾಲಯಗಳ ಮೇಲೆ ನಡೆದ ದಾಳಿಗಳು ಮತ್ತು ಪ್ರತ್ಯೇಕ ಖಾಲಿಸ್ತಾನ ಪರ ಸಂಘಟನೆಗಳ ಚಟುವಟಿಕೆಗಳ ಬಗ್ಗೆ ಭಾರತ ಹೊಂದಿರುವ ಕಳವಳ ಕುರಿತು ಪ್ರಧಾನಿ ಮೋದಿ ಅವರು ಆಸ್ಟ್ರೇಲಿಯಾ ಪ್ರಧಾನಿ ಆ್ಯಂಟನಿ ಅಲ್ಬನೀಸ್ ಜೊತೆ ಬುಧವಾರ ಚರ್ಚಿಸಿದ್ದಾರೆ.

ಆಸ್ಟ್ರೇಲಿಯಾಕ್ಕೆ ಎರಡು ದಿನಗಳ ಪ್ರವಾಸ ಕೈಗೊಂಡಿರುವ ಮೋದಿ ಅವರು ತಮ್ಮ ಸಹವರ್ತಿ ಅಲ್ಬನೀಸ್ ಜತೆಗಿನ ಸಭೆಯಲ್ಲಿ ಹಲವು ಪ್ರಮುಖ ವಿಷಯಗಳ ಕುರಿತು ಚರ್ಚಿಸಿದರು.

ಅಲ್ಬನೀಸ್ ಅವರ ಸಮ್ಮುಖದಲ್ಲಿ ಪತ್ರಿಕಾ ಹೇಳಿಕೆ ನೀಡಿರುವ ಮೋದಿ, ‘ದೇವಾಲಯಗಳ ಮೇಲಿನ ದಾಳಿ ಕುರಿತು ಈ ಹಿಂದೆಯೂ ಅಲ್ಬನೀಸ್ ಜೊತೆ ಚರ್ಚಿಸಿದ್ದೆ. ಈ ರೀತಿಯ ಚಟುವಟಿಕೆಗಳಲ್ಲಿ ಭಾಗಿಯಾಗಿರುವವರ ಮೇಲೆ ಅಲ್ಬನೀಸ್ ಕಠಿಣ ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದ್ದಾರೆ’ ಎಂದರು.

‘ಉಭಯ ರಾಷ್ಟ್ರಗಳ ಸ್ನೇಹಪರ ಮತ್ತು ಸೌಹಾರ್ದ ಸಂಬಂಧಕ್ಕೆ ಯಾರಾದರು ಚ್ಯುತಿ ತರಲು ಪ್ರಯತ್ನಿಸಿದರೆ ಅದನ್ನು ಸಹಿಸುವುದಿಲ್ಲ’ ಎಂದರು.

‘ನಮ್ಮ ನಂಟು ಟಿ–20 ಕ್ರಿಕೆಟ್‌ನಂತೆ’

ಭಾರತ– ಆಸ್ಟ್ರೇಲಿಯಾದ ದ್ವಿಪಕ್ಷೀಯ ಸಂಬಂಧವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಟಿ20 ಕ್ರಿಕೆಟ್‌ಗೆ ಹೋಲಿಸಿದರು.

‘ಕಳೆದ ಒಂದು ವರ್ಷದಲ್ಲಿ ನನ್ನ ಮತ್ತು ಅಲ್ಬೇನಿಸ್ ಅವರ ನಡುವಿನ ಆರನೇ ಭೇಟಿ ಇದು. ಕ್ರಿಕೆಟ್ ಭಾಷೆಯಲ್ಲಿ ಹೇಳುವುದಾದರೆ, ನಮ್ಮ ಬಾಂಧವ್ಯವು ಟಿ20 ಮಾದರಿಗೆ ಹೊರಳಿದೆ’ ಎಂದರು.

ಇದೇ ವೇಳೆ ಭಾರತದಲ್ಲಿ ಈ ವರ್ಷದ ಅಂತ್ಯದಲ್ಲಿ ನಡೆಯಲಿರುವ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿ ವೀಕ್ಷಿಸಲು ಅಲ್ಬೇನಿಸ್ ಮತ್ತು ಆಸ್ಟ್ರೇಲಿಯಾ ಕ್ರಿಕೆಟ್ ಅಭಿಮಾನಿಗಳನ್ನು ಮೋದಿ ಅವರು ಆಮಂತ್ರಿಸಿದರು.

‘ಆಗ ನೀವು ಭಾರತಕ್ಕೆ ಬಂದರೆ ಕ್ರಿಕೆಟ್ ಮಾತ್ರವಲ್ಲ, ಅದ್ದೂರಿ ದೀಪಾವಳಿ ಆಚರಣೆಯನ್ನೂ ನೋಡಬಹುದು’ ಎಂದರು.

ಹಲವು ಒಪ್ಪಂದ ಘೋಷಣೆ

ಉಭಯ ದೇಶಗಳ ನಡುವಿನ ವಾಣಿಜ್ಯ ವ್ಯವಹಾರಗಳನ್ನು ಗುರುತರವಾಗಿ ವಿಸ್ತರಿಸುತ್ತದೆ ಎಂದು ನಂಬಲಾಗಿರುವ ಮಹತ್ವಾಕಾಂಕ್ಷೆಯ ಸಮಗ್ರ ಆರ್ಥಿಕ ಸಹಕಾರ ಒಪ್ಪಂದಕ್ಕೆ (ಸಿಇಸಿಎ) ಅವಧಿಗೆ ಮುನ್ನವೇ ಅಂದರೆ, ಕಳೆದ ಡಿಸೆಂಬರ್‌ನಲ್ಲಿಯೇ ಸಹಿ ಹಾಕಿರುವುದರ ಹಿಂದಿರುವ ಸದುದ್ದೇಶದ ಕುರಿತೂ ಉಭಯ ನಾಯಕರು ದ್ವಿಪಕ್ಷೀಯ ಸಭೆಯಲ್ಲಿ ಒತ್ತಿ ಹೇಳಿದರು.

ಭಾರತ– ಆಸ್ಟ್ರೇಲಿಯಾ ಗ್ರೀನ್ ಹೈಡ್ರೋಜನ್ ಕಾರ್ಯಪಡೆ ಸ್ಥಾಪಿಸುವ ನಿಟ್ಟಿನಲ್ಲಿ ಆಗಿರುವ ಬೆಳವಣಿಗೆ ಸ್ವಾಗತಿಸಲಾಯಿತು. ಕಾರ್ಯಪಡೆಯ ಷರತ್ತುಗಳನ್ನು ಚರ್ಚೆ ವೇಳೆ ಅಂಗೀಕರಿಸಲಾಗಿದೆ ಎಂದರು.

ಆಸ್ಟ್ರೇಲಿಯಾ– ಭಾರತ ವಲಸೆ ಮತ್ತು ಸಂಚಾರ ಸಹಭಾಗಿತ್ವ ಒಪ್ಪಂದದ ಕುರಿತ ಅಂತಿಮ ತೀರ್ಮಾನ ಉಭಯ ನಾಯಕರು ಪ್ರಕಟಿಸಿದರು. ಈ ಒಪ್ಪಂದವು ವಿದ್ಯಾರ್ಥಿಗಳು, ಸಂಶೋಧಕರು ಮತ್ತು ಉದ್ಯಮಿಗಳಿಗೆ ಎರಡೂ ಕಡೆಯ ಪ್ರಯಾಣಕ್ಕೆ ಅನುವು ಮಾಡುತ್ತದೆ.

ಸಿಡ್ನಿ ಹಾರ್ಬರ್ ಸೇತುವೆ ಮತ್ತು ಒಪೆರಾ ಹೌಸ್‌ಗಳಿಗೆ ಪ್ರಧಾನಿ ಮೋದಿ ಅವರು ಅಲ್ಬನೀಸ್ ಜತೆಗೆ ಬುಧವಾರ ಭೇಟಿ ನೀಡಿದರು. ಡುಟ್ಟನ್ ಭೇಟಿ: ಆಸ್ಟ್ರೇಲಿಯಾದ ವಿರೋಧ ಪಕ್ಷದ ನಾಯಕ ಪೀಟರ್ ಡುಟ್ಟನ್ ಅವರನ್ನು ಭೇಟಿಯಾದ ಮೋದಿ, ದ್ವಿಪಕ್ಷೀಯ ಸಹಕಾರ ಮತ್ತು ಪ್ರಾದೇಶಿಕ ಅಭಿವೃದ್ಧಿ ಕುರಿತು ಮಾತುಕತೆ ನಡೆಸಿದರು. ‘ನಿಮ್ಮನ್ನು ಮತ್ತೆ ಭೇಟಿ ಆಗಿರುವುದು ಸಂತೋಷವಾಗಿದೆ. ಉಭಯ ದೇಶಗಳ ಸಮಗ್ರ ಕಾರ್ಯತಂತ್ರ ಪಾಲುದಾರಿಕೆಗೆ ನೀವು ನೀಡಿರುವ ಬೆಂಬಲ ಸ್ವಾಗತಾರ್ಹ’ ಎಂದು ಮೋದಿ ಅವರು ಡುಟ್ಟನ್ ಭೇಟಿ ಕುರಿತು ಟ್ವೀಟ್ ಮಾಡಿದ್ದಾರೆ.

ಆಸ್ತಿ ನೋಂದಣಿ: ಆಧಾರ್ ಬಳಕೆಗೆ ಅಸ್ತು

• ಭರತ್ ಜೋಶಿ

ಬೆಂಗಳೂರು: ಸ್ಥಿರಾಸ್ತಿಗಳ ನೋಂದಣಿ ಪ್ರಕ್ರಿಯೆಯಲ್ಲಿ ಮಾರಾಟಗಾರರು ಮತ್ತು ಖರೀದಿದಾರರನ್ನು ಗುರುತಿಸಲು ಆಧಾರ್ ಬಳಕೆಗೆ ರಾಜ್ಯ ಸರ್ಕಾರ ಅನುಮತಿ ನೀಡಿದೆ. ಒಬ್ಬರ ಆಸ್ತಿಯನ್ನು ಬೇರೊಬ್ಬರು ಮಾರಾಟ ಮಾಡುವುದನ್ನು ತಡೆಯುವ ಉದ್ದೇಶದಿಂದ ಕಂದಾಯ ಇಲಾಖೆ ಈ ಕ್ರಮ ಕೈಗೊಂಡಿದೆ.

ಈವರೆಗೆ ವಿವಿಧ ಗುರುತಿನ ದಾಖಲೆಗಳು ಮತ್ತು ಸಹಿಗಳನ್ನು ಬಳಸಿಕೊಂಡು ಉಪ ನೋಂದಣಿ ಕಚೇರಿಗಳಲ್ಲಿ ಆಸ್ತಿ ನೋಂದಣಿ ಪ್ರಕ್ರಿಯೆ ನಡೆಸಲಾಗುತ್ತಿತ್ತು. ಗುರುತಿನ ಚೀಟಿಗಳ ಆಧಾರದಲ್ಲೇ ಮಾರಾಟಗಾರರು ಮತ್ತು ಖರೀದಿದಾರರನ್ನು ಗುರುತಿಸಲಾಗುತ್ತಿತ್ತು. ಈ ಪ್ರಕ್ರಿಯೆಯಲ್ಲಿ ನೈಜ ಮಾಲೀಕರಲ್ಲದವರು ಮಾರಾಟಗಾರರೆಂದು ಬಿಂಬಿಸಿಕೊಳ್ಳುವ ಅಪಾಯ ಇತ್ತು.

ಕಂದಾಯ ಇಲಾಖೆಯ ಭೂಮಾಪನ ಮತ್ತು ಭೂದಾಖಲೆಗಳ ಇಲಾಖೆ, ಭೂಮಿ, ನಗರ ಆಸ್ತಿ ಮಾಲೀಕತ್ವದ ದಾಖಲೆಗಳ ವಿಭಾಗಗಳು ಆಸ್ತಿ ಮಾರಾಟಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳಲ್ಲಿ ಮಾರಾಟಗಾರರು ಮತ್ತು ಖರೀದಿದಾರರನ್ನು ಗುರುತಿಸಲು ಆಧಾರ್ ದತ್ತಾಂಶವನ್ನು ಬಳಸಿಕೊಳ್ಳಲು ಅನುಮತಿ ನೀಡಿ ಮೇ 18ರಂದು ಅಧಿಸೂಚನೆ ಹೊರಡಿಸಲಾಗಿದೆ.

ಸ್ಥಿರಾಸ್ಥಿ ನೋಂದಣಿ ಪ್ರಕ್ರಿಯೆಯಲ್ಲಿ ಆಧಾರ್ ಬಳಕೆಗೆ ಕೇಂದ್ರ ಸರ್ಕಾರವು ಏಪ್ರಿಲ್‌ನಲ್ಲಿ ಅನುಮತಿ ನೀಡಿತ್ತು. ಆ ಬಳಿಕ ರಾಜ್ಯ ಸರ್ಕಾರವೂ ಅದೇ ಕ್ರಮ ಕೈಗೊಂಡಿದೆ.

‘ಒಬ್ಬರ ಹೆಸರಿನ ಆಸ್ತಿಯನ್ನು ಬೇರೊಬ್ಬರು ಅಕ್ರಮವಾಗಿ ಮಾರಾಟ ಮಾಡುವುದನ್ನು ತಡೆಯಲು ಆಧಾರ್ ಬಳಕೆ ಸಹಕಾರಿಯಾಗಲಿದೆ. ಅಷ್ಟೇ ಅಲ್ಲ, ಒಂದೇ ಸರ್ವೆ ನಂಬರ್‌ನಲ್ಲಿ ಒಂದಕ್ಕಿಂತ ಹೆಚ್ಚು ಮಂದಿ ಆಸ್ತಿ ಮಾಲೀಕರಿದ್ದರೆ ಅವರನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗುತ್ತದೆ’ ಎಂದು ಭೂ ದಾಖಲೆಗಳು ಮತ್ತು ಭೂಮಾಪನ ಇಲಾಖೆ ಆಯುಕ್ತ ಸಿ.ಎನ್. ಶ್ರೀಧರ ಹೇಳಿದರು.

ನೋಂದಣಿ ಪ್ರಕ್ರಿಯೆಯಲ್ಲಿ ಆಧಾರ್ ದತ್ತಾಂಶದ ಬಳಕೆಗೆ ಸರ್ಕಾರ ಅನುಮತಿ ನೀಡಿದ ಬಳಿಕ, ಅದನ್ನು ಅನುಷ್ಠಾನಕ್ಕೆ ತರಲು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಕ್ರಮಗಳನ್ನು ಕೈಗೊಳ್ಳುತ್ತಿದೆ. ಅದಕ್ಕೆ ಪೂರಕವಾಗಿ ನೋಂದಣಿ ತಂತ್ರಾಂಶದಲ್ಲಿ ಬದಲಾವಣೆಗಳನ್ನು ಮಾಡಲು ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮಣಿಪುರ ಹಿಂಸಾಚಾರ • ಕರ್ಫ್ಯೂ ಸಡಿಲಿಕೆ ರದ್ದು

ಯುವಕ ಸಾವು, ಇಬ್ಬರಿಗೆ ಗಾಯ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದ ಕೆಲವೆಡೆ ಹಿಂಸಾಚಾರ ಮುಂದುವರದಿದೆ. ಬಿಷ್ಣುಪುರ ಜಿಲ್ಲೆಯಲ್ಲಿ ಮಂಗಳವಾರ ರಾತ್ರಿ ನಡೆದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಒಬ್ಬ ಯುವಕ ಮೃತಪಟ್ಟಿದ್ದು, ಇಬ್ಬರಿಗೆ ಗಾಯಗಳಾಗಿವೆ.

ಮೊಯಿರಾಂಗ್‌ನ ಪರಿಹಾರ ಶಿಬಿರದ ಬಳಿ ಅಪರಿಚಿತ ದುಷ್ಕರ್ಮಿಗಳ ಹಾರಿಸಿದ ಗುಂಡಿಗೆ ಒಬ್ಬ ಯುವಕ ಗಾಯಗೊಂಡಿದ್ದು, ಕೂಡಲೇ ಆತನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಗುಂಡಿನ ದಾಳಿಯಿಂದ ಕೋಪಗೊಂಡ ನಿರ್ದಿಷ್ಟ ಸಮುದಾಯದ ಜನರು ಕೆಲ ಮನೆಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆಲ ಪ್ರತಿಭಟನಕಾರರು ಬುಧವಾರ ಮಧ್ಯಾಹ್ನ ಬಿಷ್ಣುಪುರದ ಬಿಜೆಪಿಯ ಶಾಸಕ, ಸಚಿವ ಸಚಿವ ಗೋವಿಂದಸ್ ಕೊಂತೌಜಮ್ ಅವರ ನಿವಾಸಕ್ಕೆ ನುಗ್ಗಿ, ಮನೆಯನ್ನು ಧ್ವಂಸಗೊಳಿಸಿದ್ದಾರೆ. ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಸೇನೆ ಮತ್ತು ಇತರ ಭದ್ರತಾ ಪಡೆಗಳು ಹರಸಾಹಸಪಟ್ಟವು ಎಂದು ವರದಿಯಾಗಿದೆ.

ಈ ಘಟನೆಯು ಮೈತೇಯಿ ಸಮುದಾಯದವರು ಹೆಚ್ಚಿರುವ ಇಂಫಾಲ್ ಪೂರ್ವ ಮತ್ತು ಇಂಫಾಲ್ ಪಶ್ಚಿಮ ಜಿಲ್ಲೆಗಳ ಕೆಲ ಸ್ಥಳಗಳಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟುಮಾಡಿದೆ ಎಂದು ಮೂಲಗಳು ತಿಳಿಸಿವೆ.

ಕರ್ಫ್ಯೂ ಸಡಿಲಿಕೆ ರದ್ದು: ಪ್ರಕ್ಷುಬ್ಧ ಪರಿಸ್ಥಿತಿ ಮುಂದುವರಿದಿರುವ ಕಾರಣ ಬಿಷ್ಣುಪುರ, ಇಂಫಾಲ್ ಪೂರ್ವ ಮತ್ತು ಇಂಫಾಲ್ ಪಶ್ಚಿಮ ಜಿಲ್ಲೆಯ ಜಿಲ್ಲಾಡಳಿತಗಳು ಕರ್ಫ್ಯೂ ಸಡಿಲಿಕೆಯನ್ನು ರದ್ದುಪಡಿಸಿವೆ. ಈ ಮೊದಲು ಮುಂಜಾನೆ 5ರಿಂದ ಸಂಜೆ 4 ಗಂಟೆಯವರೆಗೆ ಕರ್ಫ್ಯೂ ಸಡಿಲಿಸಲಾಗಿತ್ತು.

ಬುಡಕಟ್ಟು ಸಮುದಾಯ ಪ್ರಾಬಲ್ಯ ಹೊಂದಿರುವ ಚುರಾಚಂದ್‌ಪುರ ಜಿಲ್ಲೆಯಲ್ಲಿ ಮೇ 3 ರಂದು ಹಿಂಸಾಚಾರ ನಡೆದಾಗಿನಿಂದ ಮಣಿಪುರದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಇದೆ. ಬಹುಸಂಖ್ಯಾತ ಮೈತೇಯಿ ಮತ್ತು ಕೂಕಿ ಬುಡಕಟ್ಟು ಸಮುದಾಯಗಳ ನಡುವಿನ ಘರ್ಷಣೆಯಿಂದ ರಾಜ್ಯದಲ್ಲಿ 74 ಜನರು ಮೃತಪಟ್ಟಿದ್ದು, ಸುಮಾರು 2,000 ಮನೆಗಳು ಭಸ್ಮವಾಗಿವೆ. 35,000ಕ್ಕೂ ಹೆಚ್ಚು ಜನರನ್ನು ಬೇರೆಡೆ ಸ್ಥಳಾಂತರಿಸಲಾಗಿದೆ.

ಸರ್ಕಾರಿ ಜಮೀನು ಗುತ್ತಿಗೆ: ಕರಡು ನಿಯಮ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಲಾಂಟೇಷನ್ ಬೆಳೆಗಳನ್ನು ಅನಧಿಕೃತವಾಗಿ ಬೆಳೆಯುತ್ತಿರುವ ಸರ್ಕಾರಿ ಜಮೀನುಗಳನ್ನು ರೈತರಿಗೆ 30 ವರ್ಷಗಳವರೆಗೆ ಗುತ್ತಿಗೆಗೆ ನೀಡಲು ಕರ್ನಾಟಕ ಭೂ ಮಂಜೂರಾತಿ ನಿಯಮಗಳು–1969ಕ್ಕೆ ತಿದ್ದುಪಡಿ ತರಲು ಮುಂದಾಗಿರುವ ಕಂದಾಯ ಇಲಾಖೆ, ಕರಡು ನಿಯಮಗಳನ್ನು ಪ್ರಕಟಿಸಿದೆ.

ಸರ್ಕಾರಿ ಜಮೀನುಗಳನ್ನು ರೈತರಿಗೆ ಗುತ್ತಿಗೆಗೆ ನೀಡಲು ಅವಕಾಶ ಕಲ್ಪಿಸುವುದಕ್ಕಾಗಿ ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ಮಸೂದೆ–2022ಕ್ಕೆ ವಿಧಾನಮಂಡಲವು 2022ರ ಡಿಸೆಂಬರ್‌ನಲ್ಲಿ ಅಂಗೀಕಾರ ನೀಡಿತ್ತು. ಈ ತಿದ್ದುಪಡಿಯನ್ನು ಅನುಷ್ಠಾನಗೊಳಿಸುವುದಕ್ಕಾಗಿ ಭೂ ಮಂಜೂರಾತಿ ನಿಯಮಗಳಿಗೂ ತಿದ್ದುಪಡಿ ತರಲಾಗುತ್ತಿದೆ.

ವಿಸ್ತೀರ್ಣ (ಎಕರೆಗಳಲ್ಲಿ)	ಗುತ್ತಿಗೆ ಶುಲ್ಕ (ಪ್ರತಿ ಎಕರೆಗೆ, ವರ್ಷಕ್ಕೆ)
ಒಂದು ಎಕರೆವರೆಗೆ	₹1,000
1 ಎಕರೆಯಿಂದ 5 ಎಕರೆವರೆಗೆ	₹1,500
5 ಎಕರೆಯಿಂದ 10 ಎಕರೆವರೆಗೆ	₹2,000
10 ಎಕರೆಯಿಂದ 15 ಎಕರೆವರೆಗೆ	₹2,500
15 ಎಕರೆಯಿಂದ 20 ಎಕರೆವರೆಗೆ	₹3,000
20 ಎಕರೆಯಿಂದ 25 ಎಕರೆವರೆಗೆ	₹3,500

2005ರ ಜನವರಿ 1 ಕ್ಕೂ ಮೊದಲು ರೈತರು ಅನಧಿಕೃತವಾಗಿ ಪ್ಲಾಂಟೇಷನ್ ಬೆಳೆಗಳನ್ನು ಬೆಳೆದಿದ್ದು, ಈಗಲೂ ಸ್ವಾಧೀನ ಹೊಂದಿರುವ ಸರ್ಕಾರಿ ಜಮೀನುಗಳನ್ನು 30 ವರ್ಷಗಳವರೆಗೆ ಗುತ್ತಿಗೆಗೆ ನೀಡಲು ಈ ನಿಯಮಗಳು ಅವಕಾಶ ಕಲ್ಪಿಸುತ್ತವೆ. ಒಂದು ಕುಟುಂಬಕ್ಕೆ ಗರಿಷ್ಠ 25 ಎಕರೆಗಳವರೆಗೆ ಗುತ್ತಿಗೆಗೆ ನೀಡಲು ಅವಕಾಶವಿರಲಿದೆ. ಅದಕ್ಕಿಂತ ಹೆಚ್ಚಿನ ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡಿದ್ದರೆ, ಹೆಚ್ಚುವರಿ ವಿಸ್ತೀರ್ಣವನ್ನು ಸರ್ಕಾರದ ವಶಕ್ಕೆ ಒಪ್ಪಿಸಬೇಕು ಎಂಬ ಅಂಶ ಕರಡು ನಿಯಮಗಳಲ್ಲಿದೆ.

ಗರಿಷ್ಠ 30 ವರ್ಷಗಳವರೆಗೆ ಸರ್ಕಾರಿ ಜಮೀನುಗಳನ್ನು ಗುತ್ತಿಗೆಗೆ ನೀಡಲು ಅವಕಾಶ ಇರಲಿದೆ. ಪ್ರತಿ ಎಕರೆಗೆ ವರ್ಷಕ್ಕೆ ₹ 1,000 ದಿಂದ ₹ 3,500ದವರೆಗೂ ಗುತ್ತಿಗೆ ಶುಲ್ಕ ವಿಧಿಸಲಾಗುತ್ತದೆ. ಗುತ್ತಿಗೆಗೆ ಪಡೆದ ರೈತರು ಮೃತಪಟ್ಟಲ್ಲಿ ಅವರ ಕುಟುಂಬದವರಿಗೆ ಮಾತ್ರವೇ ಗುತ್ತಿಗೆ ಮುಂದುವರಿಸಲು ಅವಕಾಶ ನೀಡಲಾಗುತ್ತದೆ. ಉಪ ಗುತ್ತಿಗೆಗೆ ನೀಡಲು ಅವಕಾಶ ಇರುವುದಿಲ್ಲ. ಗುತ್ತಿಗೆಗೆ ಪಡೆದ ಜಮೀನಿನಲ್ಲಿ ಪ್ಲಾಂಟೇಷನ್ ಬೆಳೆಗಳನ್ನು ಮಾತ್ರವೇ ಬೆಳೆಯಬೇಕು. ಅಂತಹ ಜಮೀನುಗಳಲ್ಲಿ ಇರುವ ಮರಗಳು ಸರ್ಕಾರದ ಸ್ವತ್ತುಗಳು ಎಂಬ ಅಂಶವೂ ಕರಡಿನಲ್ಲಿದೆ.

ಗುತ್ತಿಗೆಗೆ ಪಡೆದ ಜಮೀನುಗಳನ್ನು ಆಧಾರವಾಗಿಟ್ಟು ಯಾವುದೇ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಅವಕಾಶ ಇರುವುದಿಲ್ಲ.

ತಿದ್ದುಪಡಿ ನಿಯಮಗಳು ಜಾರಿಯಾದ ಬಳಿಕ ಅರ್ಹ ಕುಟುಂಬಗಳು ತಾಲ್ಲೂಕಿನ ತಹಶೀಲ್ದಾರ್‌ಗೆ ಅರ್ಜಿ ಸಲ್ಲಿಸಬೇಕು. ತಹಶೀಲ್ದಾರ್ ಅರ್ಜಿಯನ್ನು ಪರಿಶೀಲಿಸಿ, ಸೂಕ್ತ ದಾಖಲೆಗಳೊಂದಿಗೆ ಜಿಲ್ಲಾಧಿಕಾರಿಗಳಿಗೆ ಕಳುಹಿಸಬೇಕು. ಜಿಲ್ಲಾಧಿಕಾರಿಯು ಅರ್ಜಿಗಳನ್ನು ಸ್ವೀಕರಿಸಿದ ದಿನದಿಂದ ಮೂರು ತಿಂಗಳೊಳಗೆ ಜಮೀನು ಮಂಜೂರು ಮಾಡುವ ಅಥವಾ ತಿರಸ್ಕರಿಸುವ ನಿರ್ಧಾರ ಕೈಗೊಳ್ಳಬೇಕು. ಜಿಲ್ಲಾಧಿಕಾರಿಯು ಭೂ ಮಂಜೂರಾತಿಗೆ ಆದೇಶ ಹೊರಡಿಸಿದಲ್ಲಿ ತಹಶೀಲ್ದಾರ್ ರೈತರಿಗೆ ಗುತ್ತಿಗೆ ಕರಾರು ಪತ್ರ ಮಾಡಿಕೊಡಬೇಕು ಎಂಬ ಅಂಶ ನಿಯಮಗಳಲ್ಲಿದೆ.

‘ಚಿಲ್ಲರೆ ವ್ಯಾಪಾರಿಗಳು ಗ್ರಾಹಕರ ಮೊಬೈಲ್ ಸಂಖ್ಯೆ, ವೈಯಕ್ತಿಕ ಮಾಹಿತಿ ಕೇಳುವಂತಿಲ್ಲ’

ನವದೆಹಲಿ (ಪಿಟಿಐ): ‘ಚಿಲ್ಲರೆ ವ್ಯಾಪಾರಿಗಳು ನಿರ್ದಿಷ್ಟ ಸೇವೆಗಳನ್ನು ಒದಗಿಸುವುದಕ್ಕಾಗಿ ಗ್ರಾಹಕರ ಮೊಬೈಲ್ ಸಂಖ್ಯೆ ಅಥವಾ ವೈಯಕ್ತಿಕ ಮಾಹಿತಿ ಕೇಳುವಂತಿಲ್ಲ’ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯವು ಸೂಚಿಸಿದೆ. ಈ ಸಂಬಂಧ ಸುತ್ತೋಲೆಯನ್ನೂ ಹೊರಡಿಸಿದೆ.

ಈ ಕುರಿತು ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿರುವ ಗ್ರಾಹಕ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್, ‘ಹಲವು ವ್ಯಾಪಾರಿಗಳು ಅಗತ್ಯ ಸೇವೆಗಳನ್ನು ಒದಗಿಸುವುದಕ್ಕಾಗಿ ಗ್ರಾಹಕರ ಬಳಿ ವೈಯಕ್ತಿಕ ಸಂಪರ್ಕ ಸಂಖ್ಯೆ ಕೇಳುತ್ತಿದ್ದಾರೆ. ಮೊಬೈಲ್ ಸಂಖ್ಯೆ ಅಥವಾ ಇತರೆ ಮಾಹಿತಿ ನೀಡಲು ಒಪ್ಪದಿದ್ದವರಿಗೆ ಸೇವೆ ನಿರಾಕರಿಸುತ್ತಿದ್ದಾರೆ. ಈ ಕುರಿತು ಗ್ರಾಹಕರಿಂದ ಹಲವು ದೂರುಗಳೂ ಬಂದಿವೆ. ಇದಕ್ಕೆ ಕಡಿವಾಣ ಹಾಕಲು ಸುತ್ತೋಲೆ ಹೊರಡಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ಖರೀದಿದಾರರು ತಮ್ಮ ವೈಯಕ್ತಿಕ ಮಾಹಿತಿ ಅಥವಾ ಸಂಪರ್ಕ ಸಂಖ್ಯೆ ಒದಗಿಸದೆ ಇದ್ದಲ್ಲಿ ಬಿಲ್ ಸಿದ್ಧಪಡಿಸಲು ಆಗುವುದಿಲ್ಲ ಎಂದು ಮಾರಾಟಗಾರರು ಹೇಳುತ್ತಿದ್ದಾರೆ. ಇದು ನ್ಯಾಯಯುತವಲ್ಲ. ಗ್ರಾಹಕರ ರಕ್ಷಣಾ ಕಾಯ್ದೆಯ ಪ್ರಕಾರ ಇದು ಗ್ರಾಹಕರ ಹಕ್ಕಿನ ಮೇಲೆ ನಿರ್ಬಂಧ ಹೇರುವ ವ್ಯಾಪಾರ ನೀತಿ ಎನಿಸುತ್ತದೆ. ಹೀಗೆ ಮಾಹಿತಿ ಸಂಗ್ರಹಿಸುವುದರ ಹಿಂದೆ ಯಾವುದೇ ತರ್ಕ ಇಲ್ಲ’ ಎಂದು ಹೇಳಿದ್ದಾರೆ.

‘ಗ್ರಾಹಕರ ಖಾಸಗಿತನದ ವಿಚಾರವನ್ನೂ ಗಮನದಲ್ಲಿಟ್ಟುಕೊಂಡು ಚಿಲ್ಲರೆ ಉದ್ಯಮಕ್ಕೆ ಹಾಗೂ ಸಿಐಐ ಮತ್ತು ಎಫ್‌ಐಸಿಸಿಐಗೆ ಸೂಚನೆ ನೀಡಲಾಗಿದೆ. ಸುತ್ತೋಲೆಯ ಪ್ರತಿಯನ್ನೂ ರವಾನಿಸಲಾಗಿದೆ. ‘ಬಿಲ್ ಸಿದ್ಧಪಡಿಸುವುದಕ್ಕಾಗಿ ಗ್ರಾಹಕರು ವ್ಯಾಪಾರಿಗಳಿಗೆ ತಮ್ಮ ಮೊಬೈಲ್ ಸಂಖ್ಯೆ ಒದಗಿಸಲೇಬೇಕೆಂಬ ನಿಯಮ ದೇಶದಲ್ಲಿ ಇಲ್ಲ. ಅದನ್ನು ಕಡ್ಡಾಯ ಕೂಡ ಮಾಡಿಲ್ಲ’ ಎಂದು ತಿಳಿಸಿದ್ದಾರೆ.

ವಿಟಿಯು ಅಂತರ ಎಂಜಿನಿಯರಿಂಗ್ ಕಾಲೇಜು ಅಥ್ಲೆಟಿಕ್ಸ್: ರಂಗನಾಥ್ ದಾಖಲೆ

ಪುತ್ತೂರಿನ ವಿಸಿಇಟಿಗೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ವಿವೇಕಾನಂದ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ (ವಿಸಿಇಟಿ) ತಂಡ, ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ(ವಿಟಿಯು) ಮೈದಾನದಲ್ಲಿ ಬುಧವಾರ ಮುಕ್ತಾಯವಾದ 24ನೇ ಅಂತರ ಕಾಲೇಜು ಅಥ್ಲೆಟಿಕ್ ಕೂಟದಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು.

ಮೊದಲ ದಿನದಿಂದಲೂ ಪಾರಮ್ಯ ಮೆರೆದ ವಿಸಿಇಟಿ ತಂಡ 136 ಅಂಕಗಳೊಂದಿಗೆ ಅಗ್ರಸ್ಥಾನ ಪಡೆಯಿತು. ಉಡುಪಿ ಜಿಲ್ಲೆಯ ನಿಟ್ಟೆ ಮಹಾಲಿಂಗ ಅಡ್ಯಂತಾಯ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎನ್‌ಎಂಎಎಂಐಟಿ) ತಂಡ 61 ಅಂಕಗಳೊಂದಿಗೆ ರನ್ನರ್ ಅಪ್ ಪ್ರಶಸ್ತಿ ಪಡೆಯಿತು. ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು 40 ಅಂಕಗಳೊಂದಿಗೆ ತೃತೀಯ ಸ್ಥಾನ ಗಳಿಸಿತು.

ಪುರುಷರ ವಿಭಾಗದಲ್ಲಿ ಎನ್‌ಎಂಎಎಂಐಟಿ ತಂಡ ಪ್ರಥಮ, ಪುತ್ತೂರಿನ ವಿಸಿಇಟಿ ತಂಡ ಎರಡನೇ ಹಾಗೂ ಮಂಗಳೂರಿನ ಶ್ರೀನಿವಾಸ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮೂರನೇ ಸ್ಥಾನ ಗಳಿಸಿದವು. ಮಹಿಳೆಯರ ವಿಭಾಗದಲ್ಲಿ ವಿಸಿಇಟಿ ಪ್ರಥಮ, ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ದ್ವಿತೀಯ ಹಾಗೂ ಧಾರವಾಡದ ಎಸ್‌ಡಿಎಂ ಎಂಜಿನಿಯರಿಂಗ್ ಕಾಲೇಜು ತೃತೀಯ ಸ್ಥಾನ ಪಡೆದವು.

ಪುರುಷರ ವಿಭಾಗದಲ್ಲಿ ಬೆಂಗಳೂರಿನ ಜ್ಯೋತಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎನ್.ಎಂ.ಜೀವನ್ ಅತ್ಯುತ್ತಮ ಅಥ್ಲೀಟ್ ಪ್ರಶಸ್ತಿ ಪಡೆದರೆ, ಮಹಿಳಾ ವಿಭಾಗದಲ್ಲಿ ವಿಸಿಇಟಿಯ ಪವಿತ್ರಾ ಜಿ. ಅತ್ಯುತ್ತಮ ಅಥ್ಲೀಟ್ ಗೌರವಕ್ಕೆ ಪಾತ್ರವಾದರು.

ದಾಖಲೆ: ಪುರುಷರ ಹಾಫ್ ಮ್ಯಾರಥಾನ್‌ನಲ್ಲಿ ರಾಮನಗರದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ರಂಗನಾಥ ಸಿ. ಅವರು 21 ಕಿ.ಮೀ. ದೂರವನ್ನು 1 ಗಂಟೆ, 11ನಿ. 16.53 ಸೆ.ಗಳಲ್ಲಿ ಕ್ರಮಿಸಿ, ಆಳ್ವಾಸ್‌ನ ಸುಜನ್ ಶೇಖರ್ ಹೆಸರಿನಲ್ಲಿದ್ದ ದಾಖಲೆ (1ಗಂ.16ನಿ.01 ಸೆ.) ಮುರಿದರು. ಮಹಿಳೆಯರ ಪೋಲ್‌ವಾಲ್ಟ್‌ನಲ್ಲಿ ಜಯಶ್ರೀ ಬಿ. 2ಮೀ. ಎತ್ತರ ಜಿಗಿದು ನೂತನ ದಾಖಲೆ ಸ್ಥಾಪಿಸಿದರು.

ಫಲಿತಾಂಶಗಳು: 100 ಮೀ. ಓಟ: ಅಭಿರಂಜನ್ (ವಿಸಿಇಟಿ)–1, ಲೋಹಿತ್ (ವಿಸಿಇಟಿ)–2, ಕಾಲ: 11.24 ಸೆ.; 400 ಮೀ. ಹರ್ಡಲ್ಸ್: ಸಂಕೇತ್ ಕೆ.ಕೆ. (ಎನ್‌ಎಂಎಐಟಿ)–1, ಆದರ್ಶ (ಎನ್‌ಎಂಎಐಟಿ)–2 ಕಾಲ: 1ನಿ.01.94 ಸೆ.; 4x400 ಮೀ. ರಿಲೆ: ವಿಸಿಇಟಿ, ಪುತ್ತೂರು–1, ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ –2, ಕಾಲ: 4ನಿ.09.35 ಸೆ., ಹಾಫ್ ಮ್ಯಾರಥಾನ್ (21 ಕಿ.ಮೀ.): ರಂಗನಾಥ್ ಸಿ. (ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ರಾಮನಗರ)–1, ತಿಶಾನ್ ಎ.ಎಂ. (ಕೆವಿಜಿ ಸಿಇ, ಸುಳ್ಯ)–2, ಕಾಲ: 1ಗಂ. 11ನಿ.16.53 ಸೆ., ಹಳೆಯದು: 1ಗಂ.16ನಿ.01ಸೆ.; ಡೆಕಾಥ್ಲಾನ್: ಸಂಪತ್ ಹೆಗ್ಡೆ (ಸಹ್ಯಾದ್ರಿ)–1, ಅಭಿಷೇಕ್ ಎಸ್.ಎಂ. (ನ್ಯೂ ಹೊರೈಜನ್)–2,, 4,619 ಪಾಯಿಂಟ್. ಹ್ಯಾಮರ್ ಥ್ರೋ: ಕಿಶನ್ ಎ. (ವಿಸಿಇಟಿ)–1, ಸಂದೇಶ್ ಶೆಣೈ (ಎನ್‌ಎಂಎಐಟಿ)–2, ದೂರ: 32.80 ಮೀ.; ಪೋಲ್‌ವಾಲ್ಟ್: ಜೀವನ್ ಎಂ.ಕ.ಎ (ಪಿಇಎಸ್‌ಐಟಿ, ಶಿವಮೊಗ್ಗ)–1, ಪವನ್ ಪಿ.ನಾಯ್ಕ್ (ಎನ್‌ಎಂಎಐಟಿ)–2, ಎತ್ತರ: 2.90 ಮೀ.

ಮಹಿಳೆಯರು: 100 ಮೀ. ಓಟ: ಧೃತಿ ಎಸ್.(ಬಿಎಂಎಸ್ ಸ್ಕೂಲ್ ಆಫ್ ಆರ್ಕಿಟೆಕ್ಚರ್, ಬೆಂಗಳೂರು)–1, ಪೂನಂ (ಕೆನರಾ ಎಂಜಿನಿಯರಿಂಗ್ ಕಾಲೇಜು, ಬೆಂಜನಪದವು)–2,, ಕಾಲ: 13.72 ಸೆ.; 400 ಮೀ. ಹರ್ಡಲ್ಸ್: ಮೇಘನಾ ಪಿ.ಇ. (ವಿಸಿಇಟಿ)–1, ಶ್ರೇಯಾ (ಕೆನರಾ, ಬೆಂಜನಪದವು)–2, ಕಾಲ: 1ನಿ.33.95 ಸೆ.; 21 ಕಿ.ಮೀ. ಹಾಫ್ ಮ್ಯಾರಥಾನ್: ವಿದ್ಯಾ ಸಿ.ಎಸ್. (ವಿಸಿಇಟಿ, ಪುತ್ತೂರು)–1, ಮಂಜುಳಾ ಪಿ. ಸುನಗದ (ಎಸ್‌ಡಿಎಂಇಟಿ, ಧಾರವಾಡ)–2, 1ಗಂ.45ನಿ.60 ಸೆ.; ಪೋಲ್‌ವಾಲ್ಟ್: ಜಯಶ್ರೀ ಬಿ. (ವಿಸಿಇಟಿ)–1, ಸಿಂಚನಾ ವಿ.ಎಸ್., (ವಿಸಿಇಟಿ)–2, ಎತ್ತರ: 2 ಮಿ., ಹಳೆಯ ದಾಖಲೆ: 1.80 ಮೀ. ಹ್ಯಾಮರ್ ಥ್ರೋ: ಶ್ರೇಯಾ ಶೆಟ್ಟಿ (ಎನ್‌ಎಂಎಐಟಿ, ನಿಟ್ಟೆ)–1, ಪ್ರೇರಣಾ ಕೆಮ್ಮಿಂಜೆ (ವಿಸಿಇಟಿ)–2, ದೂರ: 26.41 ಮೀ.

ಮಲೇಷ್ಯಾ ಮಾಸ್ಟರ್ಸ್: ಕಿದಂಬಿ ಶ್ರೀಕಾಂತ್‌ಗೆ ಜಯ

ಬ್ಯಾಡ್ಮಿಂಟನ್: ಪ್ರೀಕ್ವಾರ್ಟರ್‌ಗೆ ಸಿಂಧು

ಕ್ವಾಲಾಲಂಪುರ (ಪಿಟಿಐ): ಭಾರತದ ಪಿ.ವಿ.ಸಿಂಧು ಮತ್ತು ಕಿದಂಬಿ ಶ್ರೀಕಾಂತ್ ಅವರು ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಗೆಲುವಿನ ಆರಂಭ ಮಾಡಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಸಿಂಧು ಬುಧವಾರ 21-13, 17-21, 21-18ರಿಂದ ಡೆನ್ಮಾರ್ಕ್‌ನ ಲಿನ್ ಕ್ರಿಸ್ಟೊಫರ್ಸನ್ ಅವರನ್ನು ಮಣಿಸಿ ಪ್ರೀಕ್ವಾರ್ಟರ್‌ಫೈನಲ್ ತಲುಪಿದರು.

ಎರಡು ತಾಸು ಎರಡು ನಿಮಿಷಗಳ ಕಾಲ ನಡೆದ ಜಿದ್ದಾಜಿದ್ದಿ ಪೈಪೋಟಿಯಲ್ಲಿ ಸಿಂಧು ಗೆಲುವಿನ ನಗೆ ಬೀರಿದರು. .

ಅರ್ಹತಾ ಸುತ್ತಿನಿಂದ ಗೆದ್ದು ಬಂದಿದ್ದ ಅಶ್ಮಿತಾ ಚಲಿಹಾ ಹಾಗೂ ಆಕರ್ಷಿ ಕಶ್ಯಪ್ ಅವರ ಅಭಿಯಾನ ಮೊದಲ ಸುತ್ತಿನಲ್ಲೇ ಅಂತ್ಯವಾಯಿತು. ಅಶ್ಮಿತಾ 17-21, 7-21ರಿಂದ ಚೀನಾದ ಯು ಹಾನ್ ವಿರುದ್ಧ ಮತ್ತು ಆಕರ್ಷಿ 17-21, 12-21ರಿಂದ ಜಪಾನ್‌ನ ಅಕಾನೆ ಯಮಗುಚಿ ಎದುರು ನಿರಾಸೆ ಕಂಡರು. ಮಾಳವಿಕಾ ಬನ್ಸೋಡ್ 11-21, 13-21ರಿಂದ ಚೀನಾದ ಜಿ ಯಿ ವಾಂಗ್ ಎದುರು ಸೋತರು.

ಪುರುಷರ ಸಿಂಗಲ್ಸ್ ಪಂದ್ಯದಲ್ಲಿ ಶ್ರೀಕಾಂತ್ 21-12, 21-16ರಿಂದ ಫ್ರಾನ್ಸ್‌ನ ತೊಮಾ ಜೂನಿಯರ್ ಪೊಪೊವ್ ಎದುರು ಗೆದ್ದು ಎರಡನೇ ಸುತ್ತು ಪ್ರವೇಶಿಸಿದರು. .



ಪಿ.ವಿ.ಸಿಂಧು

ಟಿಯೆನ್‌ಗೆ ಪ್ರಣಯ್ ಆಘಾತ

ಭಾರತದ ಎಚ್.ಎಸ್. ಪ್ರಣಯ್ ಅವರು ವಿಶ್ವ ಕ್ರಮಾಂಕದಲ್ಲಿ ಆರನೇ ಸ್ಥಾನದಲ್ಲಿರುವ, ಚೀನಾ ತೈಪೆಯ ಟಿಯೆನ್ ಚೆನ್ ಚೊ ಅವರಿಗೆ ಸೋಲುಣಿಸಿ ಎರಡನೇ ಸುತ್ತಿಗೆ ಕಾಲಿಟ್ಟರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಒಂಬತ್ತನೇ ಸ್ಥಾನದಲ್ಲಿರುವ ಪ್ರಣಯ್, ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ 16-21, 21-14, 21-13ರಿಂದ ಟಿಯೆನ್ ವಿರುದ್ಧ ಗೆದ್ದರು. ಮೊದಲ ಗೇಮ್‌ನಲ್ಲಿ ಸೋತರೂ ಛಲಬಿಡದೆ ಜಯ ಒಲಿಸಿಕೊಂಡರು.

ಜೂನಿಯರ್ ಹಾಕಿ: ಚೀನಾ ತೈಪೆ ಸದೆಬಡಿದ ಭಾರತ

ಸಲಾಲಾ (ಒಮನ್) (ಪಿಟಿಐ): ಹಾಲಿ ಚಾಂಪಿಯನ್ ಭಾರತ 18–0 ಗೋಲುಗಳಿಂದ ದುರ್ಬಲ ಚೀನಾ ತೈಪೆ ತಂಡವನ್ನು ಸದೆಬಡಿದು ಏಷ್ಯಾ ಕಪ್ ಪುರುಷರ ಜೂನಿಯರ್ ಹಾಕಿ ಟೂರ್ನಿಯಲ್ಲಿ ಬುಧವಾರ ಶುಭಾರಂಭ ಮಾಡಿತು.

ಸುಲ್ತಾನ್ ಖಬೂಸ್ ಯೂತ್ ಕಾಂಪ್ಲೆಕ್ಸ್ ಕ್ರೀಡಾಂಗಣದಲ್ಲಿ ನಡೆದ ‘ಎ’ ಗುಂಪಿನ ಈ ಏಕಪಕ್ಷೀಯ ಪಂದ್ಯದಲ್ಲಿ ಅರೈಜಿತ್ ಸಿಂಗ್ (4 ಗೋಲು), ಅಮನ್‌ದೀಪ್ (ಮೂರು ಗೋಲು) ಹ್ಯಾಟ್ರಿಕ್ ಸಾಧನೆ ಮಾಡಿ ಮಿಂಚಿದರು.

ಭಾರತ ತನ್ನ ಮುಂದಿನ ಪಂದ್ಯವನ್ನು ಜಪಾನ್ ವಿರುದ್ಧ ಗುರುವಾರ ಆಡಲಿದೆ. ಶನಿವಾರ ಪಾಕಿಸ್ತಾನ ವಿರುದ್ಧ, ಭಾನುವಾರ ಥಾಯ್ಲೆಂಡ್ ವಿರುದ್ಧ ಪಂದ್ಯಗಳನ್ನು ಆಡಬೇಕಿದೆ. ಇಲ್ಲಿ ಉತ್ತಮ ಪ್ರದರ್ಶನ ನೀಡಿ ಜೂನಿಯರ್ ವಿಶ್ವಕಪ್‌ಗೆ ಅರ್ಹತೆ ಪಡೆಯುವ ಗುರಿಯನ್ನು ಭಾರತ ಹೊಂದಿದೆ.

ಎಲಿಮಿನೇಟರ್ ಪಂದ್ಯದಲ್ಲಿ ಗೆದ್ದ ಮುಂಬೈ ಇಂಡಿಯನ್ಸ್: ಹೊರಬಿದ್ದ ಲಖನೌ ಸೂಪರ್ ಜೈಂಟ್ಸ್

ಆಕಾಶ್ ಬೌಲಿಂಗ್‌ಗೆ ಒಲಿದ ಜಯ

ಚೆನ್ನೈ (ಪಿಟಿಐ): ಮುಂಬೈ ಇಂಡಿಯನ್ಸ್ ತಂಡದ ಬಲಗೈ ಮಧ್ಯಮವೇಗಿ ಆಕಾಶ್ ಮಧ್ವಾಲ್ ಅವರ ಬೌಲಿಂಗ್ ದಾಳಿಯ ಮುಂದೆ ಲಖನೌ ಸೂಪರ್ ಜೈಂಟ್ಸ್ ತಂಡ ದೂಳೀಪಟವಾಯಿತು.

3.3 ಓವರ್ ಬೌಲ್ ಮಾಡಿ ಐದು ವಿಕೆಟ್ ಕಬಳಿಸಿದ ಆಕಾಶ್, ಮುಂಬೈ ತಂಡವು ಐಪಿಎಲ್ ಟೂರ್ನಿಯ ಎಲಿಮಿನೇಟರ್ ಪಂದ್ಯದಲ್ಲಿ 81 ರನ್‌ಗಳಿಂದ ಲಖನೌ ವಿರುದ್ಧ ಜಯ ಗಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಕೇವಲ ಐದು ರನ್ ನೀಡಿದ ಉತ್ತರಾಖಂಡದ ಈ 'ಎಂಜಿನಿಯರ್', ಎದುರಾಳಿ ತಂಡದ ಬ್ಯಾಟಿಂಗ್ ಬೆನ್ನೆಲುಬು ಮುರಿದರು.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಗೆದ್ದ ಮುಂಬೈ, ಶುಕ್ರವಾರ ಅಹಮದಾಬಾದ್‌ನಲ್ಲಿ ನಡೆಯಲಿರುವ 'ಕ್ವಾಲಿಫೈಯರ್–2' ಪಂದ್ಯದಲ್ಲಿ ಗುಜರಾತ್ ತಂಡವನ್ನು ಎದುರಿಸಲಿದೆ.

ಈ ಸೋಲಿನೊಂದಿಗೆ ಲಖನೌ ತಂಡವು ಟೂರ್ನಿಯಿಂದ ಹೊರಬಿದ್ದಿತು.

ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ರೋಹಿತ್ ಶರ್ಮಾ ನಾಯಕತ್ವದ ಮುಂಬೈ ತಂಡ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 182 ರನ್ ಗಳಿಸಿತು. ಲಖನೌ ತಂಡವು 16.3 ಓವರ್‌ಗಳಲ್ಲಿ 101 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಸವಾಲಿನ ಗುರಿ ಬೆನ್ನತ್ತಿದ ಲಖನೌ ತಂಡವು ಆರಂಭದಿಂದಲೇ ವಿಕೆಟ್ ಕಳೆದುಕೊಳ್ಳುತ್ತಾ ಸಾಗಿತು. ತಂಡದ ಮೊತ್ತ 23 ರನ್ ಆಗುವಷ್ಟರಲ್ಲಿ ಪ್ರೇರಕ್ ಮಂಕಡ್ (3) ಹಾಗೂ ಕೈಲ್ ಮೇಯರ್ಸ್ (18) ಪೆವಿಲಿಯನ್ ಸೇರಿದ್ದರು. ಕೃಣಾಲ್ ಪಾಂಡ್ಯ (8) ಹಾಗೂ ಮಾರ್ಕಸ್ ಸ್ಟೊಯಿನಿಸ್ (40) ಮೂರನೇ ವಿಕೆಟ್‌ಗೆ 46 ರನ್ ಸೇರಿಸಿದ್ದೇ ಗರಿಷ್ಠ ಜೊತೆಯಾಟವಾಯಿತು. ಆ ಬಳಿಕ ತಂಡವು ಚೇತರಿಸಿಕೊಳ್ಳಲಿಲ್ಲ.

ಪ್ರೇರಕ್, ಆಯುಷ್ ಬಡೋಣಿ, ನಿಕೊಲಸ್ ಪೂರನ್, ರವಿ ಬಿಷ್ಣೋಯಿ, ಮೊಹಸಿನ್ ಅವರ ವಿಕೆಟ್‌ಗಳು ಮಧ್ವಾಲ್ ಪಾಲಾದವು.

ಮೂರು ರನೌಟ್‌ಗಳೂ (ಸ್ಟೊಯಿನಿಸ್, ದೀಪಕ್ ಹೂಡಾ, ಕೆ. ಗೌತಮ್) ಮುಂಬೈ ಗೆಲುವಿಗೆ ಸಹಕಾರಿಯಾದವು.


ವಿಕೆಟ್ ಗಳಿಸಿದ ಆಕಾಶ್ ಮಧ್ವಾಲ್ ಸಂಭ್ರಮ– ಪಿಟಿಐ ಚಿತ್ರ

ಮುಂಬೈ ಹೋರಾಟದ ಮೊತ್ತ: ಲಖನೌ ತಂಡದ ನವೀನ್ ಉಲ್ ಹಕ್ (38ಕ್ಕೆ 4) ಮತ್ತು ಯಶ್ ಠಾಕೂರ್ (34ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ನಡುವೆಯೂ ಎದುರಾಳಿ ಬ್ಯಾಟರ್‌ಗಳು ಛಲದ ಆಟವಾಡಿದರು.

ಕ್ಯಾಮರಾನ್ ಗ್ರೀನ್ (41 ರನ್, 23 ಎ.) ಗರಿಷ್ಠ ಸ್ಕೋರ್ ಎನಿಸಿಕೊಂಡರೆ, ಸೂರ್ಯ ಕುಮಾರ್ ಯಾದವ್ 33 ರನ್ ಗಳಿಸಿದರು. ತಿಲಕ್ ವರ್ಮಾ ಮತ್ತು ನೇಹಲ್ ವಧೇರಾ ಅವರೂ ತಂಡದ ಮೊತ್ತ ಹೆಚ್ಚಲು ಕಾರಣರಾದರು.

ಟಾಸ್ ಗೆದ್ದು ಬ್ಯಾಟ್ ಮಾಡಲು ನಿರ್ಧರಿಸಿದ ಮುಂಬೈ ತಂಡಕ್ಕೆ ಉತ್ತಮ ಆರಂಭ ಸಿಗಲಿಲ್ಲ. ಸ್ಕೋರ್ 38 ಆಗುವಷ್ಟರಲ್ಲಿ ಇಶಾನ್ ಕಿಶನ್ (15) ಮತ್ತು ರೋಹಿತ್ (11) ಪೆವಿಲಿಯನ್ ಸೇರಿದ್ದರು. ಇಶಾನ್ ಅವರು ಯಶ್ ಠಾಕೂರ್ ಬೌಲಿಂಗ್‌ನಲ್ಲಿ ವಿಕೆಟ್‌ಕೀಪರ್ ನಿಕೊಲಸ್ ಪೂರನ್‌ಗೆ ಕ್ಯಾಚ್ ಕೊಟ್ಟರು. ರೋಹಿತ್ ಅವರು ನವೀನ್ ಬೌಲಿಂಗ್‌ನಲ್ಲಿ ಬಡೋಣಿಗೆ ಕ್ಯಾಚ್ ನೀಡಿದರು.

ಎರಡು ವಿಕೆಟ್‌ಗಳು ಬೇಗನೆ ಬಿದ್ದರೂ, ಸೂರ್ಯಕುಮಾರ್ ಮತ್ತು ಗ್ರೀನ್ ಬಿರುಸಿನ ಆಟಕ್ಕಿಳಿದು ರನ್‌ರೇಟ್ ತಗ್ಗದಂತೆ ನೋಡಿಕೊಂಡರು. ಇದರಿಂದ 10 ಓವರ್‌ಗಳು ಕೊನೆಗೊಂಡಾಗ ಸ್ಕೋರ್ 98 ಆಗಿತ್ತು. ಇವರಿಬ್ಬರು ಮೂರನೇ ವಿಕೆಟ್‌ಗೆ 66 ರನ್ ಸೇರಿಸಿದರು. ಆದರೆ 11ನೇ ಓವರ್‌ನಲ್ಲಿ ನವೀನ್ ಅವರು ಸೂರ್ಯಕುಮಾರ್ ಮತ್ತು ಗ್ರೀನ್ ಅವರನ್ನು ಪೆವಿಲಿಯನ್‌ಗಟ್ಟಿ, ಮುಂಬೈಗೆ ಅವಳಿ ಆಘಾತ ನೀಡಿದರು.

ಪರಿಸ್ಥಿತಿಗೆ ಚೆನ್ನಾಗಿ ಹೊಂದಿಕೊಂಡಿದ್ದ ಇಬ್ಬರು ಬ್ಯಾಟರ್‌ಗಳು ಮೂರು ಎಸೆತಗಳ ಅಂತರದಲ್ಲಿ ಮರಳಿದ್ದರಿಂದ ಮುಂಬೈನ ರನ್ ವೇಗ ತಗ್ಗಿತು. ಆದರೆ ಕೊನೆಯಲ್ಲಿ ತಿಲಕ್ ವರ್ಮಾ ಮತ್ತು ನೇಹಲ್ ವಧೇರಾ ಅವರ ಬೀಸಾಟದ ನೆರವಿನಿಂದ 180ರ ಗಡಿ ದಾಟುವಲ್ಲಿ ಯಶಸ್ವಿಯಾಯಿತು.

ಅಂತಿಮ ಐದು ಓವರ್‌ಗಳಲ್ಲಿ 51 ರನ್‌ಗಳು ಬಂದವು. ಸೂರ್ಯಕುಮಾರ್ ಜಾಗದಲ್ಲಿ 'ಇಂಪ್ಯಾಕ್ಟ್ ಪ್ಲೇಯರ್' ಆಗಿ ಬಂದ ವಧೇರಾ 12 ಎಸೆತಗಳಲ್ಲಿ 23 ರನ್ ಗಳಿಸಿದರು.

ಆರೆಂಜ್ ಕ್ಯಾಪ್ (ಹೆಚ್ಚು ರನ್)		
ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	730

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)		
ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	26

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್ 8ಕ್ಕೆ 182 (20 ಓವರ್)

ಇಶಾನ್ ಸಿ ಪೂರನ್ ಬಿ ಠಾಕೂರ್ 15 (12 ಎ., 4X3)
ರೋಹಿತ್ ಸಿ ಬಡೋಣಿ ಬಿ ನವೀನ್ 11 (10 ಎ., 4X1, 6X1)
ಗ್ರೀನ್ ಬಿ ನವೀನ್ 41 (23 ಎ., 4X6, 6X1)
ಸೂರ್ಯಕುಮಾರ್ ಸಿ ಗೌತಮ್ ಬಿ ನವೀನ್ 33 (20 ಎ., 4X2, 6X2)
ತಿಲಕ್ ಸಿ ಹೂಡಾ ಬಿ ನವೀನ್ 26 (22 ಎ., 6X2)
ಡೇವಿಡ್ ಸಿ ಹೂಡಾ ಬಿ ಠಾಕೂರ್ 13 (13 ಎ., 4X1)
ವಧೇರಾ ಸಿ ಬಿಷ್ಣೋಯಿ ಬಿ ಯಶ್ 23 (12 ಎ., 4X2, 6X2)
ಜೋರ್ಡನ್ ಸಿ ಹೂಡಾ ಬಿ ಮೊಹ್ಸಿನ್ 4 (7 ಎ)
ಹೃತಿಕ್ ಶೊಕೀನ್ ಔಟಾಗದೆ 0 (1 ಎ)
ಇತರೆ: 16 (ಬೈ 8, ಲೆಗ್‌ಬೈ 2, ವೈಡ್ 6)
ವಿಕೆಟ್ ಪತನ: 1–30 (ರೋಹಿತ್ ಶರ್ಮಾ; 3.2), 2–38 (ಇಶಾನ್ ಕಿಶನ್; 4.2), 3–104 (ಸೂರ್ಯಕುಮಾರ್ ಯಾದವ್; 10.4), 4–105 (ಕ್ಯಾಮರಾನ್ ಗ್ರೀನ್; 10.6), 5–148 (ಟಿಮ್ ಡೇವಿಡ್; 16.3), 6–159 (ತಿಲಕ್ ವರ್ಮಾ; 17.3), 7–168 (ಕ್ರಿಸ್ ಜೋರ್ಡನ್; 18.5), 8–182 (ನೆಹಲ್ ವಧೇರಾ; 19.)
ಬೌಲಿಂಗ್: ಕೃಣಾಲ್ ಪಾಂಡ್ಯ 4–0–38–0, ಕೆ.ಗೌತಮ್ 1–0–8–0, ನವೀನ್ ಉಲ್ ಹಕ್ 4–0–38–4, ಯಶ್ ಠಾಕೂರ್ 4–0–34–3, ಮೊಹ್ಸಿನ್ ಖಾನ್ 3–0–24–1, ರವಿ ಬಿಷ್ಣೋಯಿ 4–0–30–0

ಲಖನೌ ಸೂಪರ್ ಜೈಂಟ್ಸ್ 101 (16.3 ಓವರ್)

ಮೇಯರ್ಸ್ ಸಿ ಗ್ರೀನ್ ಬಿ ಜೋರ್ಡಾನ್ 18 (13 ಎ, 4X3)
ಪ್ರೇರಕ್ ಸಿ ಶೊಕೀನ್ ಬಿ ಮಧ್ವಾಲ್ 3 (6 ಎ)
ಕೃಣಾಲ್ ಸಿ ಡೇವಿಡ್ ಬಿ ಚಾವ್ಲಾ 8 (11 ಎ, 4X1)
ಸ್ಟೊಯಿನಿಸ್ ರನೌಟ್ (ಡೇವಿಡ್/ಇಶಾನ್) 40 (27 ಎ, 4X5, 6X1)
ಆಯುಷ್ ಬಿ ಮಧ್ವಾಲ್ 1 (7 ಎ)
ಪೂರನ್ ಸಿ ಇಶಾನ್ ಬಿ ಮಧ್ವಾಲ್ 0 (1 ಎ)
ಹೂಡಾ ರನೌಟ್ (ಗ್ರೀನ್/ಮಧ್ವಾಲ್/ರೋಹಿತ್) 15 (13 ಎ, 6X1)
ಕೆ.ಗೌತಮ್ ರನೌಟ್ (ರೋಹಿತ್) 2 (3 ಎ)
ರವಿ ಸಿ ಜೋರ್ಡನ್ ಬಿ ಮಧ್ವಾಲ್ 3 (6 ಎ)
ನವೀನ್ ಉಲ್ ಹಕ್ ಔಟಾಗದೆ 1 (5 ಎ)
ಮೊಹಸಿನ್ ಬಿ ಮಧ್ವಾಲ್ 0 (7 ಎ)
ಇತರೆ: 10 (ಬೈ 2, ಲೆಗ್‌ಬೈ 5, ವೈಡ್ 3)
ವಿಕೆಟ್ ಪತನ: 1–12 (ಪ್ರೇರಕ್ ಮಂಕಡ್, 1.5), 2–23 (ಕೈಲ್ ಮೇಯರ್ಸ್, 3.2), 3–69 (ಕೃಣಾಲ್ ಪಾಂಡ್ಯ, 8.2), 4–74 (ಆಯುಷ್ ಬದೋಣಿ, 9.4), 5–74 (ನಿಕೊಲಸ್ ಪೂರನ್, 9.5), 6–89 (ಮಾರ್ಕಸ್ ಸ್ಟೊಯಿನಿಸ್, 11.5), 7–92 (ಕೆ. ಗೌತಮ್, 12.3), 8–100 (ರವಿ ಬಿಷ್ಣೋಯಿ, 14.3), 9–100 (ದೀಪಕ್ ಹೂಡಾ, 14.5), 10–101 (ಮೊಹಸಿನ್ ಖಾನ್, 16.3)
ಬೌಲಿಂಗ್: ಜೇಸನ್ ಬೆಹ್ರೆನ್‌ಡಾರ್ಫ್ 3–0–21–0, ಆಕಾಶ್ ಮಧ್ವಾಲ್ 3.3–0–5–5, ಕ್ರಿಸ್ ಜೋರ್ಡಾನ್ 2–1–7–1, ಕ್ಯಾಮರಾನ್ ಗ್ರೀನ್ 3–0–15–0, ಹೃತಿಕ್ ಶೊಕೀನ್ 1–0–18–0, ಪಿಯೂಷ್ ಚಾವ್ಲಾ 4–0–28–1

ಫಲಿತಾಂಶ: ಮುಂಬೈ ತಂಡಕ್ಕೆ 81 ರನ್‌ಗಳ ಜಯ

'ನಿವೃತ್ತಿ: 8–9 ತಿಂಗಳಲ್ಲಿ ನಿರ್ಧಾರ'

ಚೆನ್ನೈ (ಪಿಟಿಐ): ಈ ಬಾರಿಯ ಐಪಿಎಲ್ ಟೂರ್ನಿಯು ಮಹೇಂದ್ರ ಸಿಂಗ್ ಧೋನಿ ಅವರ ಪಾಲಿಗೆ ಕೊನೆಯದ್ದು ಎಂಬ ಮಾತು ಲೀಗ್‌ನ ಆರಂಭದಿಂದಲೇ ಕೇಳಿಬರುತ್ತಿತ್ತು. ಆದರೆ ನಿವೃತ್ತಿಯ ಬಗ್ಗೆ ಆತುರದ ನಿರ್ಧಾರ ತೆಗೆದುಕೊಳ್ಳುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಧೋನಿ ಅವರು ಮಂಗಳವಾರ ರಾತ್ರಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ದಾಖಲೆಯ 10ನೇ ಬಾರಿ ಫೈನಲ್‌ಗೆ ಮುನ್ನಡೆಸಿದ್ದಾರೆ. ಚೆನ್ನೈ ತಂಡ 'ಕ್ವಾಲಿಫೈಯರ್–1' ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು 15 ರನ್‌ಗಳಿಂದ ಮಣಿಸಿತ್ತು.

ಪಂದ್ಯದ ಬಳಿಕ ಮಾತನಾಡಿದ ಅವರು, 'ಮುಂದಿನ ಐಪಿಎಲ್ ಟೂರ್ನಿಯ ಹರಾಜು ಪ್ರಕ್ರಿಯೆ ಡಿಸೆಂಬರ್‌ನಲ್ಲಿ ನಡೆಯಲಿದೆ. ನಿವೃತ್ತಿಯ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು 8–9 ತಿಂಗಳುಗಳ ಕಾಲಾವಕಾಶ ಇದೆ. ನಿವೃತ್ತಿಯಾಗಬೇಕೇ, ಬೇಡವೇ ಎಂಬ ಬಗ್ಗೆ ಈಗಲೇ ಏಕೆ ತಲೆಕೆಡಿಸಿಕೊಳ್ಳಲಿ? ಸದ್ಯಕ್ಕೆ ಆ ಬಗ್ಗೆ ಏನೂ ನಿರ್ಧರಿಸಿಲ್ಲ' ಎಂದು ಹೇಳಿದ್ದಾರೆ.


ಮಹೇಂದ್ರ ಸಿಂಗ್ ಧೋನಿ

'ನಾನು ಯಾವಾಗಲೂ ಸಿಎಸ್‌ಕೆ ಜತೆಗೇ ಇರುತ್ತೇನೆ. ಆದರೆ ಆಟಗಾರನಾಗಿ ಇರುತ್ತೇನೆಯೇ, ಅಥವಾ ಬೇರೆ ಹುದ್ದೆಯನ್ನು ವಹಿಸಿಕೊಳ್ಳುವೆನೊ ಎಂಬುದನ್ನು ಈಗಲೇ ಹೇಳಲಾಗದು' ಎಂದಿದ್ದಾರೆ.

'ನಾನು ಸಾಕಷ್ಟು ದಣಿದಿದ್ದೇನೆ ಎಂಬುದನ್ನು ಯಾವುದೇ ಮುಚ್ಚುಮರೆಯಿಲ್ಲದೆ ಹೇಳುತ್ತೇನೆ. ಸುಮಾರು ನಾಲ್ಕು ತಿಂಗಳಿಂದ ಮನೆಯಿಂದ ಹೊರಗಿದ್ದೇನೆ. ಜನವರಿ 31 ರಂದು ಮನೆಯನ್ನು ಬಿಟ್ಟು, ಚೆನ್ನೈ ತಂಡವನ್ನು ಸೇರಿಕೊಂಡಿದ್ದೆ. ಐಪಿಎಲ್‌ಗಾಗಿ ಮಾರ್ಚ್ ಎರಡನೇ ವಾರದಿಂದ ಅಭ್ಯಾಸ ಆರಂಭಿಸಿದ್ದೆ. ಸತತ ಅಭ್ಯಾಸ ಮತ್ತು ಪಂದ್ಯಗಳಿಂದಾಗಿ ಆಯಾಸಗೊಂಡಿದ್ದೇನೆ. ಆದರೂ ನಿವೃತ್ತಿಯ ಬಗ್ಗೆ ನಿರ್ಧರಿಸಲು ಸಾಕಷ್ಟು ಸಮಯ ಇದೆ' ಎಂದು ಸ್ಪಷ್ಟಪಡಿಸಿದರು.

'ಕಿರಿಕಿರಿ' ಉಂಟುಮಾಡುವ ನಾಯಕ: 'ಫೀಲ್ಡಿಂಗ್‌ನಲ್ಲಿ ಪದೇ ಪದೇ ಬದಲಾವಣೆ ತರುವುದರಿಂದ ಸಹ ಆಟಗಾರರ ಪಾಲಿಗೆ ನಾನೊಬ್ಬ ಕಿರಿಕಿರಿ ಉಂಟುಮಾಡುವ ನಾಯಕ ಎನಿಸಿದ್ದೇನೆ' ಎಂದು ಧೋನಿ ಹೇಳಿದರು.

'ಆಟದ ಪರಿಸ್ಥಿತಿಗೆ ತಕ್ಕಂತೆ ಕ್ಷೇತ್ರರಕ್ಷಣೆಯಲ್ಲಿ ಬದಲಾವಣೆ ಮಾಡಬೇಕಾಗುತ್ತದೆ. ಅದಕ್ಕಾಗಿ ನನ್ನ ಮೇಲೂ ಕಣ್ಣಿಟ್ಟಿರಬೇಕು ಎಂದು ಫೀಲ್ಡರ್‌ಗಳಿಗೆ ಹೇಳುತ್ತಿರುತ್ತೇನೆ. ಇದು ಅವರಿಗೆ ಕಿರಿಕಿರಿ ಉಂಟುಮಾಡಬಹುದು. ಆದರೆ ನಾನು ಪೂರ್ಣ ವಿಶ್ವಾಸವನ್ನಿಟ್ಟುಕೊಂಡೇ ಪ್ರತಿಯೊಂದು ನಿರ್ಧಾರ ಕೈಗೊಳ್ಳುತ್ತೇನೆ' ಎಂದರು.

ಗಿಲ್ ಸಹೋದರಿಗೆ ನಿಂದನೆ; ಕ್ರಮಕ್ಕೆ ಮಹಿಳಾ ಆಯೋಗ ಸೂಚನೆ

ನವದೆಹಲಿ (ಪಿಟಿಐ): ಕ್ರಿಕೆಟಿಗ ಶುಭಮನ್ ಗಿಲ್ ಅವರ ಸಹೋದರಿಯನ್ನು ನಿಂದಿಸಿದವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಸೂಚಿಸಿ, ದೆಹಲಿ ಮಹಿಳಾ ಆಯೋಗವು (ಡಿಸಿಡಬ್ಲ್ಯು) ದೆಹಲಿ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಿದೆ.

ಭಾನುವಾರ ಬೆಂಗಳೂರಿನಲ್ಲಿ ನಡೆದಿದ್ದ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡ, ಆರ್‌ಸಿಬಿ ತಂಡವನ್ನು ಮಣಿಸಿತ್ತು. ಆ ಪಂದ್ಯದಲ್ಲಿ ಗಿಲ್ ಶತಕ ಗಳಿಸಿದ್ದರು.

ಆರ್‌ಸಿಬಿ ಸೋಲಿನಿಂದ ಹತಾಶೆಗೊಂಡ ಕೆಲವರು ಟ್ವಿಟರ್ ಮತ್ತು ಇನ್‌ಸ್ಟಾಗ್ರಾಮ್‌ನಲ್ಲಿ ಗಿಲ್ ಹಾಗೂ ಸಹೋದರಿ ಶಹನೀಲ್ ಗಿಲ್ ಅವರನ್ನು ಕೆಟ್ಟ ಪದಗಳಿಂದ ನಿಂದಿಸಿದ್ದರು. ಶಹನೀಲ್ ಅವರು ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿದ್ದ ಫೋಟೊಗೆ ಅಸಭ್ಯವಾಗಿ ಕಮೆಂಟ್ ಮಾಡಿದ್ದರು.

'ಸಾಮಾಜಿಕ ಮಾಧ್ಯಮಗಳಲ್ಲಿ ಅಶ್ಲೀಲ ಪೋಸ್ಟ್‌ಗಳನ್ನು ಹಾಕಲಾಗಿದೆ. ಕೆಲವರು ಗಿಲ್ ಸಹೋದರಿಗೆ ಅತ್ಯಾಚಾರ ಮತ್ತು ಹಲ್ಲೆಯ ಬೆದರಿಕೆ ಹಾಕಿದ್ದಾರೆ. ಇದು ಅಪರಾಧ ಕೃತ್ಯವಾಗಿದ್ದು, ತಪ್ಪಿತಸ್ಥರ ವಿರುದ್ಧ ತುರ್ತು ಕ್ರಮ ಕೈಗೊಳ್ಳಬೇಕು' ಎಂದು ನೋಟಿಸ್‌ನಲ್ಲಿ ತಿಳಿಸಿದೆ.

ಡಬ್ಲ್ಯುಟಿಸಿ ಫೈನಲ್: ಅಶ್ವಿನ್, ಜಡೇಜಾಗೆ 11ರಲ್ಲಿ ಅವಕಾಶ–ರವಿ ಶಾಸ್ತ್ರಿ ಸಲಹೆ

ದುಬೈ (ಪಿಟಿಐ): ಮುಂದಿನ ತಿಂಗಳು ಓವಲ್‌ನಲ್ಲಿ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಭಾರತ ತಂಡ ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಆಡಬೇಕು. ಅಂತಿಮ 11ರಲ್ಲಿ ರವಿಚಂದ್ರನ್ ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರಿಬ್ಬರಿಗೂ ಅವಕಾಶ ನೀಡಬೇಕು ಎಂದು ಭಾರತ ತಂಡದ ಮಾಜಿ ಮುಖ್ಯ ಕೋಚ್ ರವಿ ಶಾಸ್ತ್ರಿ ಹೇಳಿದ್ದಾರೆ.

ಗಾಯಾಳಾಗಿರುವ ಜಸ್‌ಪ್ರೀತ್ ಬೂಮ್ರಾ ಅವರ ಅನುಪಸ್ಥಿತಿಯಿಂದ ಭಾರತದ ಅವಕಾಶಗಳಿಗೆ ಹಿನ್ನಡೆಯಾಗಿದೆ. ವೇಗಿಗಳ ಕೊರತೆಯನ್ನು ಇನ್ನೊಬ್ಬ ಸ್ಪಿನ್ನರ್ ಮೂಲಕ ತುಂಬಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು. ಈ ವೇಳೆ ಶಾಸ್ತ್ರಿ ಅವರು ತಮ್ಮ ಆಯ್ಕೆಯ 11ರ ತಂಡವನ್ನೂ ಹೇಳಿದರು.

ಶಾಸ್ತ್ರಿ ಆಯ್ಕೆಯ 11ರ ತಂಡ: ರೋಹಿತ್ ಶರ್ಮಾ (ನಾಯಕ), ಶುಭ ಮನ್ ಗಿಲ್, ಚೇತೇಶ್ವರ ಪೂಜಾರ, ವಿರಾಟ್ ಕೊಹ್ಲಿ, ಅಜಿಂಕ್ಯ ರಹಾನೆ, ಕೆ.ಎಸ್. ಭರತ್ (ವಿಕೆಟ್ ಕೀಪರ್), ಶಾರ್ದೂಲ್ ಠಾಕೂರ್, ಆರ್. ಅಶ್ವಿನ್, ಮೊಹಮ್ಮದ್ ಶಮಿ ಮತ್ತು ಮೊಹಮ್ಮದ್ ಸಿರಾಜ್.

ವಿಶ್ವ ಟೇಬಲ್ ಟೆನಿಸ್: ಮಣಿಕಾ ನಿರ್ಗಮನ

ಡರ್ಬನ್ (ಪಿಟಿಐ): ಭಾರತದ ಅಗ್ರಮಾನ್ಯ ಆಟಗಾರ್ತಿ ಮಣಿಕಾ ಬಾತ್ರಾ ಅವರು ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್ 3ನೇ ಸುತ್ತಿನಲ್ಲಿ ತೀವ್ರ ಹೋರಾಟದ ನಂತರ ಪೊರ್ಟೊರಿಕೊದ ಅಡ್ರಿಯಾನಾ ಡಯಾಜ್ ಅವರಿಗೆ ಸೋತರು.

ವಿಶ್ವ ಕ್ರಮಾಂಕದಲ್ಲಿ 13ನೇ ಸ್ಥಾನದಲ್ಲಿರುವ ಅಡ್ರಿಯಾನಾ ಬುಧವಾರ 4–3 ಗೇಮ್‌ಗಳಿಂದ 39ನೇ ಕ್ರಮಾಂಕದ ಮಣಿಕಾ ವಿರುದ್ಧ ಜಯಗಳಿಸಿದರು. ಆರನೇ ಗೇಮ್‌ವರೆಗೂ ಪಂದ್ಯ ಹೋರಾಟದಿಂದ ಕೂಡಿತ್ತು. ಆದರೆ ನಿರ್ಣಾಯಕ ಗೇಮ್‌ನಲ್ಲಿ ಪೊರ್ಟೊರಿಕೊ ಆಟಗಾರ್ತಿ ಪ್ರಾಬಲ್ಯ ಮೆರೆದರು. ಅಂತಿಮವಾಗಿ 6–11, 12–10, 11–9, 6–11, 13–11, 9–11, 11–3ರಲ್ಲಿ ಜಯಗಳಿಸಿ ಪ್ರಿಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.



ಮಣಿಕಾ ಬಾತ್ರಾ

ಇತರ ವಿಭಾಗಗಳಲ್ಲೂ ಭಾರತದ ಸವಾಲು ಅಂತ್ಯಗೊಂಡಿತು. ಅಚಂತ ಶರತ್ ಕಮಲ್ ಮತ್ತು ಜಿ.ಸತ್ಯನ್ ಅವರು ಪುರುಷರ ಡಬಲ್ಸ್ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಪೌಲ್ ಡ್ರಿಂಕಾಲ್ ಮತ್ತು ಲಿಯಾಮ್ ಪಿಚ್‌ಫೋರ್ಡ್ ವಿರುದ್ಧ ಸೋಲನುಭವಿಸಿದರು. ಇಂಗ್ಲೆಂಡ್‌ನ ಜೋಡಿ 9–11, 11–8, 14–12, 12–10 ರಿಂದ ಜಯಗಳಿಸಲು 37 ನಿಮಿಷ ತೆಗೆದುಕೊಂಡಿತು.

ಮಹಿಳೆಯರ ಡಬಲ್ಸ್ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಜಪಾನ್‌ನ ಹೀನಾ ಹಯಾಟಾ ಮತ್ತು ಮಿಮಾ ಇಟೊ 3–0 ಗೇಮ್‌ಗಳಿಂದ ಮಣಿಕಾ ಮತ್ತು ಅರ್ಚನಾ ಕಾಮತ್ ಜೋಡಿಯನ್ನು ಸೋಲಿಸಿದರು. 11–8, 11–6, 11–7 ರಲ್ಲಿ ಗೆದ್ದು ಜಪಾನಿನ ಆಟಗಾರ್ತಿಯರು ಎಂಟರಘಟ್ಟ ತಲುಪಿದರು.

ಶ್ರೀಶಂಕರ್‌ಗೆ ಚಿನ್ನ; ಅಲ್‌ಡ್ರಿನ್ ಬೆಳ್ಳಿ

ಅಥೆನ್ಸ್ (ಪಿಟಿಐ): ಭಾರತದ ಲಾಂಗ್ ಜಂಪ್ ಅಥ್ಲೀಟ್ ಮುರಳಿ ಶ್ರೀಶಂಕರ್ ಅವರು ಇಲ್ಲಿಗೆ ಸಮೀಪದ ಕಲ್ಲಿಥಿಯಾದಲ್ಲಿ ನಡೆದ ಅಂತರರಾಷ್ಟ್ರೀಯ ಜಂಪಿಂಗ್ ಕೂಟದಲ್ಲಿ ಬುಧವಾರ ಚಿನ್ನದ ಪದಕ ಜಯಿಸಿದರು.


ಮುರಳಿ

8.18 ಮೀಟರ್ಸ್ ದೂರ ಜಿಗಿಯುವುದರೊಂದಿಗೆ ಅವರು ಈ ಋತುವಿನ ಶ್ರೇಷ್ಠ ಸಾಧನೆ ದಾಖಲಿಸಿದರು. ಕಳೆದ ವರ್ಷವೂ ಈ ಕೂಟದಲ್ಲಿ ಮುರಳಿ ಚಿನ್ನ ಜಯಿಸಿದ್ದರು. ಇದೇ ಸ್ಪರ್ಧೆಯಲ್ಲಿ ಭಾರತದ ಜೆಸ್ವಿನ್ ಅಲ್‌ಡ್ರಿನ್ (7.85 ಮೀ.) ಬೆಳ್ಳಿ ಗೆದ್ದರು.

ಮಹಿಳಾ ತಂಡಕ್ಕೆ ದ್ರಾವಿಡ್ ಹಿತನುಡಿ

ಬೆಂಗಳೂರು (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ಗೆ ತೆರಳುವ ಸ್ವಲ್ಪ ಮೊದಲು ಭಾರತ ಪುರುಷರ ತಂಡದ ಕೋಚ್ ರಾಹುಲ್ ದ್ರಾವಿಡ್ ಅವರು ಇಲ್ಲಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿರುವ (ಎನ್‌ಸಿಎ) ಮಹಿಳಾ ಕ್ರಿಕೆಟಿಗರನ್ನು ಭೇಟಿಯಾಗಿ ಪ್ರೋತ್ಸಾಹದ ಮಾತುಗಳನ್ನಾಡಿದರು.

ಬಾಂಗ್ಲಾದೇಶ ಪ್ರವಾಸಕ್ಕೆ ತೆರಳಲಿರುವ ಮಹಿಳಾ ತಂಡಕ್ಕೆ ಪ್ರಸ್ತುತ ಎನ್‌ಸಿಎನಲ್ಲಿ ಸಿದ್ಧತಾ ಶಿಬಿರ ನಡೆಯುತ್ತಿದೆ. ಭಾರತ ತಂಡ, ಬಾಂಗ್ಲಾ ಪ್ರವಾಸದಲ್ಲಿ ಮೂರು ಏಕದಿನ ಮತ್ತು ಮೂರು ಟಿ–20 ಪಂದ್ಯಗಳನ್ನು ಆಡಲಿದೆ.

'ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರು ಎನ್‌ಸಿಎನಲ್ಲಿ ಸೀನಿಯರ್ ತಂಡದ ಆಟಗಾರ್ತಿಯರ ಜೊತೆ ಸಂವಾದ ನಡೆಸಿದರು. ಇದು ಪ್ರೇರಣಾದಾಯಿ ಆಗಿತ್ತು. ಸಿದ್ಧತೆಗೆ ಸಂಬಂಧಿಸಿ ಮತ್ತು ಆಟದ ಸುಧಾರಣೆಗೆ ಸಂಬಂಧಿಸಿ ಆಟಗಾರ್ತಿಯರಿಗೆ ಹೊಸ ಹೊಳವು ನೀಡಿತು' ಎಂದು ಬಿಸಿಸಿಐ ಟ್ವೀಟ್ ಮಾಡಿದೆ.


ರಾಹುಲ್ ದ್ರಾವಿಡ್

ಎನ್‌ಸಿಎ ಮುಖ್ಯಸ್ಥ ವಿ.ವಿ.ಎಸ್. ಲಕ್ಷ್ಮಣ್ ಅವರೂ ದ್ರಾವಿಡ್ ಜೊತೆಗಿದ್ದರು. ದೀಪ್ತಿ ಶರ್ಮಾ, ಶಫಾಲಿ ವರ್ಮಾ, ರಿಚಾ ಘೋಷ್, ಜೆಮಿಮಾ ರಾಡ್ರಿಗಸ್, ರಾಜೇಶ್ವರಿ ಗಾಯಕವಾಡ್, ಪೂಜಾ ವಸ್ತ್ರಕಾರ್, ದೇವಿಕಾ ವೈದ್ಯ, ಹರ್ಲೀನ್ ಡಿಯೋಲ್, ಸೈಕಾ ಇಶಾಖ್, ಅರುಂಧತಿ ರೆಡ್ಡಿ ಮತ್ತಿತರ ಪ್ರಮುಖ ಆಟಗಾರ್ತಿಯರು ಇದ್ದರು.

ಸಂಕ್ಷಿಪ್ತ ಸುದ್ದಿ

ಏಷ್ಯಾ ಬ್ಯಾಸ್ಕೆಟ್‌ಬಾಲ್: ಗೋವಿಂದರಾಜ್ ಅಧ್ಯಕ್ಷ



ಬೆಂಗಳೂರು: ಫಿಬಾ ಏಷ್ಯಾ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಅಧ್ಯಕ್ಷರಾಗಿ ಕರ್ನಾಟಕದ ಕೆ.ಗೋವಿಂದರಾಜ್ ಅಧಿಕಾರ ವಹಿಸಿಕೊಂಡಿದ್ದಾರೆ.

ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ (ಬಿಎಫ್‌ಐ) ಅಧ್ಯಕ್ಷರೂ ಆಗಿರುವ ಗೋವಿಂದರಾಜ್ ಅವರು ಮಲೇಷ್ಯಾದ ಕ್ವಾಲಾಲಂಪುರದಲ್ಲಿ ಸೋಮವಾರ ನಡೆದ ಏಷ್ಯಾ ಸಂಸ್ಥೆಯ ಸದಸ್ಯರ ಮಂಡಳಿ ಸಭೆಯಲ್ಲಿ ಅಧಿಕಾರ ಸ್ವೀಕರಿಸಿದರು. ಅವರ ಅಧಿಕಾರಾವಧಿ 2027ರವರೆಗೆ ಇರಲಿದೆ.ಈ ಹುದ್ದೆಗೇರಿದ ಭಾರತದ ಮೊದಲ ವ್ಯಕ್ತಿ ಗೋವಿಂದರಾಜ್. ಫೆಬ್ರುವರಿಯಲ್ಲಿ ಅವರು ಅಧ್ಯಕ್ಷ ಸ್ಥಾನಕ್ಕೆ ನಾಮನಿರ್ದೇಶನಗೊಂಡಿದ್ದರು.

ಹಾಕಿ: 27ಕ್ಕೆ ಟ್ರಯಲ್ಸ್

ಬೆಂಗಳೂರು: ಹಾಕಿ ಇಂಡಿಯಾ ಜೂನಿಯರ್ ಮಹಿಳೆಯರ 13ನೇ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಕರ್ನಾಟಕ ತಂಡದ ಆಯ್ಕೆಗೆ ಮೇ 27 ರಂದು ಟ್ರಯಲ್ಸ್ ಆಯೋಜಿಸಲಾಗಿದೆ.

ಶಾಂತಿನಗರದಲ್ಲಿರುವ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಹಾಕಿ ಅರೆನಾದಲ್ಲಿ ಟ್ರಯಲ್ಸ್ ನಡೆಯಲಿದೆ. 2004ರ ಜ.1 ರಂದು ಅಥವಾ ನಂತರ ಜನಿಸಿದವರು ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಬಹುದು ಎಂದು ಹಾಕಿ ಕರ್ನಾಟಕದ ಮಹಾಪ್ರಧಾನ ಕಾರ್ಯದರ್ಶಿ ಎ.ಬಿ. ಸುಬ್ಬಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಜೂನಿಯರ್ ಚಾಂಪಿಯನ್‌ಷಿಪ್ ಒಡಿಶಾದ ರೂರ್ಕೆಲಾದಲ್ಲಿ ಜೂನ್ 27 ರಿಂದ ಜುಲೈ 7ರ ವರೆಗೆ ನಡೆಯಲಿದೆ.

ಮ್ಯಾಕ್ಸ್ ಮುಲ್ಲರ್‌ಗೆ ಜಯ

ಬೆಂಗಳೂರು: ಮ್ಯಾಕ್ಸ್ ಮುಲ್ಲರ್ ತಂಡವು ಟೈಗರ್ ಕಪ್ 16 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 78 ರನ್‌ಗಳಿಂದ ಪ್ಯಾಂಥರ್ಸ್ ಕ್ರಿಕೆಟ್ ಅಕಾಡೆಮಿ ಎದುರು ಗೆದ್ದಿತು..

ಸಂಕ್ಷಿಪ್ತ ಸ್ಕೋರುಗಳು: ಮ್ಯಾಕ್ಸ್ ಮುಲ್ಲರ್: 30 ಓವರ್‌ಗಳಲ್ಲಿ 5 ವಿಕೆಟ್‌ಗೆ 168 (ಜಯನ್ ಸಂಯೋಗ್ 51, ಇಶಾನ್ ನಾಯಕ್ 42, ಆರ್ಯ ಗೌಡ 26; ಶ್ರೀವಿಷ್ಣು 19ಕ್ಕೆ 3). ಪ್ಯಾಂಥರ್ಸ್: 30 ಓವರ್‌ಗಳಲ್ಲಿ 7 ವಿಕೆಟ್‌ಗೆ 90 (ಆರ್ಯಂಶ್ ಸಿಂಗ್ 25, ; ಆರ್ಯ 14ಕ್ಕೆ 3).

ಕಾರ್ಮೆಲ್: 26.3 ಓವರ್‌ಗಳಲ್ಲಿ 100 (ಪ್ರಣವ್ ಎಂ. 48; ರಾಹುಲ್ 23ಕ್ಕೆ 3). ಸಿಸಿಇ: 18.3 ಓವರ್‌ಗಳಲ್ಲಿ 7 ವಿಕೆಟ್‌ಗೆ 101 (ಶ್ರೀಹಾನ್ ಅರಿಂಜಯ್ 38, ಪ್ರೀತ್ 21ಕ್ಕೆ 3)